ಶ್ರೀ ಡಿ.ಬಿ. ಚಂದ್ರೇಗೌಡ : ಅವರನ್ನು ಜನತಾದಳದವರೆಂದು ಕರೆಯಬೇಡಿ. ಅವರು ಜಿಲ್ಲಾಪರಿಷತ್ತಿನ ಅಧ್ಯಕ್ಷರುಗಳು ಅಷ್ಟೇ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ರಾಜೀವ್ ಗಾಂಧಿಯವರ ಮಾತನ್ನು ಧಿಕ್ಕರಿಸಿ ಆಡಳಿತ ನಡೆಸುತ್ತಿದ್ದೀರೆಂದು ಕಾಣುತ್ತದೆ.

ಶ್ರೀ ಬಿ. ಬಸವಲಿಂಗಪ್ಪ : ಸ್ವಾಮಿ, ನನಗೆ ಇವರಿಂದ ಅಂದರೆ ಜನತಾದಳದವರಿಂದ ಬುದ್ಧಿವಾದ ನನಗೆ ಬೇಕಾಗಿಲ್ಲ.

(ಗೊಂದಲ)

ಶ್ರೀ ಬಿ. ಬಸವಲಿಂಗಪ್ಪ : ಮಾನ್ಯ ಅಧ್ಯಕ್ಷರೇ, ಪೇಪರ್‌ನಲ್ಲಿ ನಾವು ನೋಡಿದ್ದೇವೆ. ಜನತಾ ದಳದ ಜಿಲ್ಲಾ ಪರಿಷತ್ ಅಧ್ಯಕ್ಷರು ಹೋಗಿ ಮಾನ್ಯ ರಾಜೀವ್ ಗಾಂಧಿಯವರನ್ನು ನೋಡಿದ್ದಾರೆ ಎಂದು. ಅಷ್ಟು ಬಿಟ್ಟರೆ ಬೇರೆ ಏನೂ ನನಗೆ ಗೊತ್ತಿಲ್ಲ ಈಗ. ಮಾನ್ಯ ಚಂದ್ರೇಗೌಡರು ದಯವಿಟ್ಟು ಚರ್ಚೆಯನ್ನು ಮುಂದುವರೆಸಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

Reference to the visit of Madhya Pradesh Legislative Assembly Speaker.

MR. SPEAKER : I am happy to inform the House that Sri Brij Mohan,Mishra Hon'ble Speaker, Madhya Pradesh Vidhana Sabha and his distinguished wife Mrs. Mishra are with us sitting in the distinguished gallery. On behalf of the House, I extend a very hearty welcome to them.

ವಿಧೇಯಕಗಳನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು

1990ನೇ ಕರ್ನಾಟಕ ಜಿಲ್ಲಾ ಪರಿಷತ್, ತಾಲ್ಲೂಕ್ ಪಂಚಾಯತ್ ಸಮಿತಿಗಳು ಮಂಡಲ ಪಂಚಾಯತ್ ನ್ಯಾಯ ಪಂಚಾಯತ್ ಹಾಗೂ ಇತರೆ ಕೆಲವು ಕಾನೂನು (ತಿದ್ದುಪಡಿ) ವಿಧೇಯಕ.

ಶ್ರೀ ಡಿ.ಬಿ. ಚಂದ್ರೇಗೌಡ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೇ, ನಾನು ಜಿಲ್ಲಾ ಪರಿಷತ್, ಮಂಡಲ್ ಪಂಚಾಯತ್ ಮತ್ತು ನ್ಯಾಯ ಪಂಚಾಯತ್ ಮಸೂದೆಯ ಬಹು ಮುಖ್ಯವಾದ ಅಂಗವನ್ನು ಪ್ರವೇಶ ಮಾಡಿದ್ದೇನೆ. ಬಹಳ ಮುಖ್ಯವಾಗಿ ಮಾನ್ಯ ಮಂತ್ರಿಗಳು ರೆವಲೂಷನ್ ಆಫ್ ಪವರ್ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. Regarding devolution of powers, it is only the Parliment which has the authority to devolve powers to the State Legislature. State Legislature has no authority to develve its powers to the District or the Zilla Parishats. That was the stage. I was taking up. I want to draw kind attention to Article 246 of the Constitution of India which empowers the State Legislature to legislate so far as the local bodies are concerned. Article 246 Subject matter of laws made by Parliament and by the Legislatures : I quote sub clause (2):

"Not withstanding anything in clause (3), Parliament and subject to clause (1) the legislature of any State also, have power to make laws with respect to any of the matters enumerated in List III in the Seventh Schedule (in this

Consitution referred to as the Concurrent List)" coming to VII Schedule Entry 5, I would like to bring to your kind notice, from Page 943 of the constitution of India by Durgadas Basu: I quote:

"Local Government, that is to say, constitution and powers of Municipal Corporations, Improvement Trust, District Boards, Mining Settlement Authorities and other local authorities, for the purpose of local-self Government or village administration"

Local Government : Entry is very wide and empowers the State Legislature to legislate with respect to any subject relating to Local Government. It can also confer such powers as itself possesses, upon the local authority including the power of taxation within the time of List- II for the purpose of Local Self Government. It makes very clear so far as the devolution of power is concerned. But at the same time, I know this devolution cannot be and should not be absolute.

Delegation of power has two limitations as I understand. (1) Essential Legislative functions cannot be delegated, like the legislative policy of the State Legislature which actually legislates on policy matters; those powers cannot be delegated. (2) For the delegated powers, there should be proper guidelines. I do not say that the State Government should not have control. What could be the guidelines? It is not mentioned as unguided powers. ಗೈಡ್‌ಲೈನ್ಸ್ ನೀವು ಕೊಡುವಾಗ ಅಗತ್ಯ ಇದ್ದರೆ ಸರಕಾರ ಇಂಥ ಕಾನೂನನ್ನು ತೆಗೆದುಕೊಳ್ಳಬಹುದು. ನಾನು ಕಂಟ್ರೋಲ್ಸ್ ಎಂದು ಹೇಳುವಾಗ ಉದಾಹರಣೆಗೆ ಜಿಲ್ಲಾಪರಿಷತ್ ಮಾಡತಕ್ಕಂಥ ನಿರ್ಣಯಗಳು ಶಾಸನಬದ್ಧವಾಗಿ ಇವೆಯೋ? ಅಥವಾ ಇಲ್ಲವೋ? ಕಾನೂನು ಬಾಹಿರವಾಗಿ ಇದ್ದರೆ ಇಂಥ ಒಂದು ಅನ್‌ಲಾಫುಲ್ ನಿರ್ಣಯವನ್ನು ಸಸ್ಪೆಂಡ್ ಮಾಡತಕ್ಕಂಥ ಕಾನೂನು ಸರಕಾರಕ್ಕೆ ಇರಬೇಕು. ಎಂಬುದನ್ನು ನಾನು ಒಪ್ಪುತ್ತೇನೆ. These are the two limitations namely essential legislative functions cannot be delegated and guidelines or control for certain unlawful resolutions could be made in the local Self-Government. ಇದನ್ನು ನಾವು ಬಹಳ ದೀರ್ಘವಾಗಿ 1980 ರ ಶಾಸನದಲ್ಲಿ ಅಳವಡಿಸಿದ್ದೇವೆ.

In this connection, we can even go back to Article 245 of the Constitution also, These words indicate the object of Article 245 only to distribute legislative power between Union and the State Legislature and not to exempt them from any of the limitations which are imposed by the other provisions of the Constitution. You cannot delegate the legislative powers at the time of making legislative policy. I do not want to go beyond that so far delegation of power is concerned.

SRI B. BASAVALINGAPPA : Devolution of power to the lesser body than the State...

SRI D.B. CHANDREGOWDA : That is exactly Article 246 of the Constitution of India which gives absolute powers to the State Legislature including its Legislative powers but with two limitations.

12.10 ಪಿ.ಎಂ.

One limitation is, that the legislative authority of the Legislature cannot be passed on. Certainly it should not be unguided. You can have guidelines so far as these powers are concerned.

ಈಗ ತಂದಿರುವ ತಿದ್ದುಪಡಿಯ 168ನೇ ಸೆಕ್ಷನ್‌ನಲ್ಲಿ ಅಧ್ಯಕ್ಷರು ಆಡಳಿತಾತ್ಮಕ ಮುಖ್ಯಸ್ಥರಾಗಲು ಸಾಧ್ಯವಿಲ್ಲವೆಂದು ಮಾನ್ಯ ಸಚಿವರು ಹೇಳಿದ್ದಾರೆ. ಒಂದು ಚೆಕ್‌ಗೆ ಕೂಡ ಸಹಿ ಹಾಕಲು ಸಾಧ್ಯವಿಲ್ಲವೆಂದು ಹೇಳಿದ್ದಾರೆ. ತಿದ್ದುಪಡಿಯಲ್ಲಿ ಅಧಿಕಾರಿಗಳಿಗೆ ಬರೀ ರೋಟಿನ್ ಅಧಿಕಾರವನ್ನು ಕೊಡಲಾಗಿದೆ ಎಂದು ಎರಡು ಮಾತಗಳನ್ನು ಹೇಳಿದ್ದಾರೆ. ಈ ಅಧಿಕಾರ ಕೊಡುವ ಮೂಲಕ ಒಂದು ಪರ್ಯಾಯ ಸರ್ಕಾರ ಕೊಡಬೇಕೆಂಬ ಉದ್ದೇಶದಿಂದ ನಾನು ಈ ಮಾತು ಆಡುತ್ತಿಲ್ಲ. ಸ್ಥಳೀಯ ಸರ್ಕಾರಗಳನ್ನು ಕೇಂದ್ರಸರ್ಕಾರಕ್ಕೂ ಮತ್ತು ರಾಜ್ಯ ಸರ್ಕಾರಕ್ಕೂ ಹೋಲಿಕೆ ಮಾಡಲು ಆಗುವುದಿಲ್ಲ. ಅವು ಸೀಮಿತ ಚೌಕಟ್ಟಿನಲ್ಲಿ 83ನೇ ಈ ಶಾಸನದ ಆಧಾರದ ಮೇಲೆ ಏನು ಚೌಕಟ್ಟನ್ನು ನಿರ್ಮಾಣ ಮಾಡಿದ್ದೇವೆ, ಯಾವ ನೆಲೆಗಟ್ಟಿನ ಮೇಲೆ ಈ ಶಾಸನವನ್ನು ನಿಲ್ಲಿಸುವುದಕ್ಕೆ ಪ್ರಯತ್ನ ಮಾಡಿದ್ದೇವೆ, ಅಷ್ಟೇ ಈ ಚೌಕಟ್ಟಿನ ಅಡಿಯಲ್ಲಿ ಜಿಲ್ಲಾಪರಿಷತ್ತುಗಳು ಮತ್ತು ಮಂಡಲಪಂಚಾಯಿತಿಗಳು ಕೆಲಸ ಮಾಡಬೇಕಾಗುತ್ತದೆ. ಅದರರ್ಥ ಎರಡು. ಒಂದು, ಇಲ್ಲಿನ ಚೌಕಟ್ಟನ್ನು ಮೀರಿ ಜಿಲ್ಲಾಪರಿಷತ್‌ಗಳು ಕೆಲಸ ಮಾಡಲು ಸಾಧ್ಯವಾಗುವುದಿಲ್ಲ. ಎರಡನೆಯದು ಸಣ್ಣಪುಟ್ಟ ಕೆಲಸಗಳಿಗಾಗಿ ಸಾರ್ವಜನಿಕರು ವಿಧಾನಸೌಧದ ಮೂರನೇ ಮಹಡಿಗೆ ಬರುವ ವ್ಯವಸ್ಥೆ ಏನಿತ್ತು ಅದನ್ನು ತಪ್ಪಿಸುವ ಪ್ರಯತ್ನ ಇದು. ಪ್ರಯತ್ನದಲ್ಲಿ ತಿದ್ದುಪಡಿ ಏನು ತಂದಿದ್ದಾರೆ, ಅದರಲ್ಲಿ ಬಹಳ ಮುಖ್ಯವಾದ ಅಂಶಗಳನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಸೆಕ್ಷನ್ 168ರಲ್ಲಿ "Powers and duties of the Adhyaksha"ಎನ್ನುವ ಶಿರೋನಾಮೆಯಲ್ಲಿ

"The Adhyaksha shall be the executive head of the Zilla Parishad, and shall perform all the duties imposed and exercise all the powers conferred on the Adhyaksha under this Act and the rules made there under"

Coming to the amendment Sir,

"Adhyaksha shall fix the date, convene, preside and conduct the meeting." This is absolute power. So far as the executive powers of the Zilla parishad, it is taken away by this amendment.

"..have access to the records of Zilla parishad, discharge all duties imposed and exercise all powers by or under this Act, perform such function entrusted to him by the Government"

Not entrusted by the Act, not entrusted by the law, which we legislate here. The basic question of decentralisation, decentralising powers and functions are taken away by this amendment. This is my objection. Further in (d), what is left for the President. He can only preside, convene the meeting and conduct the proceedings and discharge the duties directed by the Government not by the Act.. "

ಆದ್ದರಿಂದ ತಿದ್ದುಪಡಿಯಲ್ಲಿ ಬರೀ ರೂಟಿನ್ನಾಗಿ ತಿದ್ದುಪಡಿ ಮಾಡಿದ್ದೇವೆ, ಅಧಿಕಾರವನ್ನು ಅಧ್ಯಕ್ಷರಿಂದ ಕಿತ್ತುಕೊಂಡಿಲ್ಲ ಎನ್ನುವ ವಾದ ಏನಿದೆ? ಇದು 174ರಲ್ಲಿ ಮತ್ತಷ್ಟು ವಿಸ್ತಾರವಾಗಿ ಚರ್ಚೆಮಾಡಿದ್ದಾರೆ. Sir, in Sec 174 which was directly under the control of Sec. 168... Let us see Sec. 174.

"The functions of the Secretary under the Zilla Parishad is subject to the general powers under Sec.168, the Secretary shall perform the following functions"

They are all under the control of elected President. Now what is the position? In Sec. 174 sub, Sec. 1 & 2 , the following sub section shall be substituted, viz.,

"Save or otherwise expressly provided by or under this Act, the executive powers for the purpose of carrying out the provisions of this Act shall vest in the Chief Executive Officer'

It is made amply clear as to how the executive powers of the Adhyaksha has been withdrawn from 168 and given to the Chief Executive Officer 174 sub sec 1 & 2 . Sir, the original section says:

"to control the officers and servants of the Zilla Parishad subject to the general superintendence and control of the Adhyaksha."

Now this Act gives the absolute power to the executive officer and takes away the powers under sec. 168 given in the original Act. This is my objection.

ನಾನು ಅದಕ್ಕಾಗಿ ಈ ಅಧ್ಯಕ್ಷರ ಅಧಿಕಾರವನ್ನು ಸ್ಥಳೀಯ ಸರ್ಕಾರದಲ್ಲಿ ಕೇಂದ್ರ ಅಥವಾ ರಾಜ್ಯ ಸರ್ಕಾರಕ್ಕೆ ಹೋಲಿಸಲಾಗುವುದಿಲ್ಲ ಎನ್ನುವಂತಹ ಮಾತನ್ನು ಹೇಳಿ, ಈಗ ಇರತಕ್ಕ ಅಧಿಕಾರ ಕೂಡ ಸೀಮಿತವಾದ ಅಧಿಕಾರ, ಶಾಸನದ ಚೌಕಟ್ಟಿನಲ್ಲಿ ಕೆಲಸ ಮಾಡತಕ್ಕಂಥ ಅಧಿಕಾರ, ಸ್ವಾಯತ್ತತೆ ಜಿಲ್ಲೆಯ ಬೌಂಡರಿಗೆ ಸೀಮಿತವಾಗಿರತಕ್ಕದ್ದು. ಜಿಲ್ಲೆಯನ್ನು ದಾಟಿ ಅಧಿಕಾರ ಹೋಗುವುದಿಲ್ಲ, ಆದ್ದರಿಂದ 1983ನೇ ಇಸವಿಯ ಶಾಸನ ನಮ್ಮ ಕಾನೂನು ಇಲಾಖೆಯ, ಕೇಂದ್ರದ ಅಂದಿನ ಕಾಂಗ್ರೆಸ್ ಸರ್ಕಾರ, ಅಂದು ಜನತಾ ದಳದ ಸರ್ಕಾರ ಇತ್ತೋ ಅಥವಾ ಜನತಾ ಪಕ್ಷದ ಸರ್ಕಾರ ಇತ್ತೋ ಎನ್ನುವ ವಾದ ಅಲ್ಲ, ಅಂದಿನ ಕಾಂಗ್ರೆಸ್ ಸರ್ಕಾರ, ಕಾನೂನು ಇಲಾಖೆ, ಇವನ್ನೆಲ್ಲಾ ಪರೀಕ್ಷೆ ಮಾಡಿ ಇದರಲ್ಲಿ ಯಾವುದೇ ಅನ್‌ಕಾನ್ಸ್‌ಸ್ಟಿಟ್ಯೂಷನ್ ಇಲ್ಲ ಎನ್ನುವಂತಹ ಒಂದು ಕಾರಣಕ್ಕಾಗಿ ಇದನ್ನು ಮಂಜೂರು ಮಾಡಿದ್ದಾರೆ ಎಂದು

ನಾನು ಭಾವನೆ ಮಾಡಿದ್ದೇನೆ. ಮತ್ತು ಮಿನಿಸ್ಟರ್ ಹಾಗೂ ಸೆಕ್ರೆಟರಿ, ಅಧ್ಯಕ್ಷ ಮತ್ತು ಚೀಫ್ ಸೆಕ್ರೆಟರಿ ಹೋಲಿಕೆ ಮಾಡುವುದು.

(ಶ್ರೀ ಎ.ಎಂ. ಹಿಂಡಸಗೇರಿ ಅವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು) ಈ ಪ್ರತಿ ಒಂದನ್ನೂ ನಿರ್ಧಾರ ಮಾಡತಕ್ಕವರು ಯಾರು? ಮಂತ್ರಿ. Mr. Basavallingappa says that it is the Secretary who decides. May I bring to your kind notice the very very importan piece of legislation with respect to powers of the Minister. "Karnataka Government Allocation of Business Rules 1977". Section 6 of the these rules demolishes the argument advanced by the Hon. Minister with respect to the powers of the Minister and the secretery powers of the Adhyaksha and the Cheif Secretary. Let me quote:

"subjects to the provisions of sec.6 of these rules in regard to consultation with other department and submission of cases to the Cheif Minister, cabinet and the Governor, all butiness allotted to the Department under Karnataka Government Allocation of Business Rules 1977, shall be disposed of by or under the general or special directions of the MInister in Charge"...

ಇಲ್ಲಿ ಜಿಲ್ಲಾ ಅಧ್ಯಕ್ಷರಿಗೆ ನಾವೇ ಅಧಿಕಾರ ಕೊಟ್ಟಿದ್ದರೂ ಕೂಡ on the same directions Cheif Secretery shall discharge the functions.

ನೀವು ಅದರ ತದ್ವಿರುದ್ಧ ಎನ್ನುವಂತಹ ವಾದವನ್ನು ಹೇಳುವುದಾದರೆ, Are you prepared to submit your authority to the Secretary, is the question.

"Each Ministers by means of a standing order arranged with the Secertary of the Department what Matters are to be brought to his personal notice, copies of such standing orders shall be sent to the Governor and the Chief Ministers."

So, you have fully authorised to take a decision. So far as the question of implementation is concerned you shall direct your Secertary to implement whatever orders or decisions that you take. On the contrary in the Zilla parishad Act, whatever powers you have given to the president, the same have been withdrawn and passed on to the secretary. This is the dichotomy. This is where I have objection. Let me quote section 30 of the same business rules.

"Departmental disposal of the business : Under the Act Secretary of a Department of shall save as otherwise provided in the rule-2 submit a case for order to the minister in-charge or to the minister of to the Deputy Minister, any, as the case maybe."

Here,in the amendment the President shall have to ask for the orders of the Chief Executive officer. You can make out the distinction. ನಾವು ಏನೂ

ಅಧಿಕಾರವನ್ನು ತೆಗೆದುಕೊಂಡಿಲ್ಲ, ರೂಟಿನ್ ಅಧಿಕಾರವನ್ನು ಮಾತ್ರ ಕೊಟ್ಟಿದ್ದೇವೆನ್ನುವ ವಾದ ಈ ಶಾಸನಗಳಿಂದ ಇದಕ್ಕೆ ಪೂರಕವಾಗಿಲ್ಲ

Let me come to the rules we have framed at that point of time. I am trying to convince the minister on these three points.

The rules made under the act of 1983- the title and commencement :

No.3 Powers and Duties of the Adhyakshas. What are the powers and Duties of the Adhyakshas under the rules which the Hon'ble Minister says that he has incorporated in the Act? the question here is;

"Save otherwise provided under the Act, the Adhaksha shall have powers to exercise general control over all officers and servants working in the Zilla Parishad."

But what is the amendment? The amendment under section-174 is:

"Save as otherwise expressely provided by or under this Act, the executive power for the purpose of carrying out the provisions of this Act, shall vest in the Cheif Executive Officers."

Whom is he trying to hoodwing? I would like to know. from the Minister. ನಾವು ಪವರ್ಸ್ ಅನ್ನು ಕಿತ್ತುಕೊಂಡಿಲ್ಲ. ನಾವು ಪವರ್ಸ್ ಅನ್ನು ಪಾಸ್ ಅನ್ ಮಾಡಿದ್ದೇವೆ ಎನ್ನುವುದು ಅಲ್ಲ.

But you have absolutely taken away the powers of the Adhyaksha and passed it on to the executive authority. Is this the conceptt of this Bill? Is this the concept or thinking of the ruling party? I would like to know. ನಿಜವಾದ ಅಧಿಕಾರವನ್ನು ನಾನು ಮೊದಲು ಹೇಳಿದ ಶಾಸನದಂತೆ ಮಂತ್ರಿಗಳಿಗೆ ಇದೆ. ಸೆಕ್ರೆಟರಿಗೆ ಇಲ್ಲ. ನಿಜವಾದ ಅಧಿಕಾರ ಇದೆ. ಆದರೆ ತದ್ವಿರುದ್ಧವಾಗಿ ಈ ಎರಡೂ ಶಾಸನಗಳ ತಿದ್ದುಪಡಿಯಿಂದಾಗಿ ಅಧಿಕಾರವನ್ನು ಸೆಕ್ಷನ್168ರಿಂದ ಕಿತ್ತು 174ರಲ್ಲಿ ಮುಖ್ಯಕಾರ್ಯದರ್ಶಿಯವರಿಗೆ ಕೊಡತಕ್ಕ ಪ್ರಯತ್ನ ಏನು ಮಾಡಿದ್ದಾರೆ ಇದು ಜನತಂತ್ರಕ್ಕೆ ಮಾಡಿದ ಮೋಸ, ಜನತಂತ್ರ ವ್ಯವಸ್ಥೆಗೆ. ಮಾಡಿದಂತ ಮೋಸ.

ಶ್ರೀ ಬಿ. ಬಸವಲಿಂಗಪ್ಪ: ನೀವು ಯಾವ ಪದಬೇಕಾದರೂ ಬಳಸಿ ನಾವು ಏನು ಮಾಡಿದ್ದೇರೆಂದರೆ, 1986ರಲ್ಲಿ ಸೆಕ್ಷನ್ 168ರ ಕೆಳಗಡೆ ಅವರಿಗೆ ಕಾರ್ಯವ್ಯಾಪ್ತಿ ಏನು ಕೊಟ್ಟಿದ್ದೀರಿ, ಅದಕ್ಕೇನಾದರೂ ಹೆಚ್ಚಾಗಿ ಅದಕ್ಕಿಂತ ಜಾಸ್ತಿ ಕೊಟ್ಟಿದ್ದೇವೆಯೆ? ಅಥವಾ ಕಡಿಮೆ ಕೊಟ್ಟಿದ್ದೇವೆಯೇ ಹೇಳಿ. ನಿಮಗೆ ಅಧಿಕಾರ ಇದ್ದಾಗ, ಅ ಎಕ್ಸಿಕ್ಯೂಟಿವ್ ಪವರ್ ಅನ್ನು ನೀವು ಕೊಡಬಹುದಾಗಿತ್ತಲ್ಲ? ಹೊಸದಾಗಿ ಒಂದು ನೋಟಿಫಿಕೇಶನ್ ಮಾಡಿ ಎಕ್ಸಕ್ಯೂಟಿವ್‌ಪವರ್ಸ್‌ನ್ನು ಯಾವ ಕಲಂನಲ್ಲಿ? ನಮೂದಾಗಿದೆ ಎಂದು ಹೇಳಿ.

ಶ್ರೀ ಡಿ.ಬಿ. ಚಂದ್ರೇಗೌಡ : ನಾನು ಇಷ್ಟು ಹೊತ್ತು ವ್ಯಾಖ್ಯಾನ ಮಾಡಿದ್ದು ತಮಗೆ ಅರ್ಥವಾಗಿಲ್ಲವೆಂದು ಕಾಣುತ್ತದೆ.

Under sec 168itself you given powers. Under sec 168, The Adhyaksha shall be the executive head of the Zilla parishad ". what more do you want? Details are different. Details are corraborated in the notes. This is what you have produced. Eventhrough original powers were given under ಇದನ್ನು ತಿದ್ದು ಕೊಂಡಿರುವುದು ಮಾತ್ರವಲ್ಲದೇ,

Suction 168, What have you done in Section-174? 174 ರಲ್ಲಿ ನೀವು

ಎಷ್ಟು ದೂರಕ್ಕೆ ಹೋಗಿದ್ದೀರೆಂದರೆ....

SRI H. EKANTHAIAH : They have taken away all the powers of the Adhysksha under 174 and imposed it on the Secretary.

SRI D.B.CHANDRE GOWDA : Let me quote section 174, proposed amendment to Sub-section (2) (a) (ii). "Call for any information who will call for the information? It is the Chief Exective Officer who will call for information. From whom? From the elected president. ಇದು ಜನತಂತ್ರ ವಿರೋಧಿ ಅಲ್ಲವೇನು? Then, "call for return, statement of account or report from any officer or servant of, or holding officer under the Zilla panchayat Abhivruddhi Samithi, Taluk Panchayat Abhivruddhi Samithi and Grama Panchayat Abhivruddhi Samithi, Third," grant leave of absence for a period not exceeding two months to Group A and Group B officers." Fourth, "make during the absence on leave or on transfer of any officer, temporary provision for holding charge and the discharge of the functions of the officers." Fifth, "call for an explanation from any officers or servant of, or holding office under the Zilla Panchayat Abhivruddhi Samithi."

Apart from these things, after section 271 they have said the following sections be inserted, namely sections 271A to J. In addition to 174, they have brought Sections 271 A to J. Sections 271 of the original Act reads thus:

"271. Dissolution of Mandal Panchayat or Zilla Parishad:- If in the opinion of the Zilla Parishad, a Mandal Panchayat exceeds or abuses its powers or is not competent to perform or makes persistent default in the performance of the duties imposed on it under this Act or any other law for the time being in force or fails to levy a tax under sections 116 or refuses to carry out any of the directions of the Zilla parishad under this Act, the Zilla Parishad may by order published in the official Gazette dissolve such Mandal Panchayat."

Now, the powers of the Zilla Parishad under this Section 271 what has happened? let me quote, Sections 271A.

"The Government may give to any Zilla Panchayat Abhivruddhi Samithi general instructions as to matters of policy to be followed by the Zilla Panchayat Abhivruddhi Samithi in respect of their duties or functions andin particular it may issue directions in the interest of the National or State Development Development Plans in respect of the execution and maintenance of Works and Development Schemes..."

On the one hand the executive powers have been taken away; on the other hand it can issue instructions or directions. They say, "It shall be the duty of the Zilla panchayat Abhivruddhi Samithi to give effect to such instructions or directions." The power vested with the Zilla parishad has been transferred to the government and the government can direct. or instruct it and they have designated the officers viz., Asst. Commissioner, By Commissioner and the Divisional Commissioner. Let the government have the power.

I don't come in the way. But why do you pass it on to the executive authority? The whole Section 271 from A to J at every stage has taken away the residuary powers of the Zilla Parishads and transferred them to the government. what is the meaning of the government ? Is it the Minister? NO. Here it is the Assistant Commissioner, Deputy Commissioner or Divisional Commissioner.so, subjecting the elected representatives to the authority of the exective itself is anti-democratic, according to me. There fore, I am opposing these things. Then, "Inquiry into affairs of Zilla panchayat Abhivruddhi Samithis by Commissioner". I can go on quoting umpteen number of instances. According to Section 271B-

"The commissioner may at time cause an inquiry to be made by any of his officers not below the rank of the Deputy Commissioner in regard to any Zilla panchayat Abhivruddhi Samithi and assistant Commissioner in respect of Taluk Panchayat Abhivruddhi Samithi......"

The basic concept and the basic principle involved in the decentralisation process has been taken away from the elected representatives and passed it on to the Assistant Commissioners, Dy.Commissioners and Divisional Commissioners. This is what I am trying to bring it to the notice of the minister.

Further, "When the Mandal Panchayat or Zill Parishad is dissolve all the members of Mandal Panchayat or Zilla Parishad shall from the date specified in the order vacate their offices......."

ಇದೆಲ್ಲಾ ಒರಿಜಿನಲ್ ಆಕ್ಟ್‌ನಲ್ಲಿರತಕ್ಕಂತಾದ್ದು. ಆರು ತಿಂಗಳೊಳಗಡೆ ಚುನಾವಣೆ ಮಾಡಬೇಕು; ಅಂಡರ್ ದಿ ಆಕ್ಟ್. ನಿಮ್ಮ ಅಮೆಂಡ್‌ಮೆಂಟ್ ಏನು ಹೇಳುತ್ತದೆ;

ಈಗ ಇರತಕ್ಕಂಥ ಶಾಸನದಲ್ಲಿ ಆರು ತಿಂಗಳಲ್ಲಿ ಚುನಾವಣೆ ಮಾಡಬೇಕು ಎನ್ನತಕ್ಕಂಥ ಅಧಿಕಾರವನ್ನು ನೀವು ತೆಗೆದುಕೊಂಡಿದ್ದೀರಿ. But it doesn't say that elections will be held or shall be held within a period of six months. With the whims and fancies of the officers and with the pressure of the government you may not have elections at all so far as Zilla Parishad is concerned.

ಈ ಅಧಿಕಾರ ಅವಶ್ಯಕತೆ ಇದೆಯೇ. ಇಂತಹ ಮೂಲ ಪ್ರಶ್ನೆಗಳನ್ನು ಇಲ್ಲಿ ತಂದಿರುವುದರಿಂದಲೇ ನಾನು ಹೇಳಿದೆ ಏನೆಂದರೆ ಈ ಶಾಸನ ಸಾಕಷ್ಟು ಚರ್ಚೆಗೆ, ಸಾಕಷ್ಟು ಅಭಿಪ್ರಾಯ ಸಂಗ್ರಹಣೆಗೆ ಸಾಕಷ್ಟು ಆಲೋಚನೆಗೆ ಅವಕಾಶ ಇದೆ. ಆದ್ದರಿಂದ, ಕುಳಿತುಕೊಳ್ಳೋಣ, ಚರ್ಚೆಮಾಡೋಣ ಅವಸರ ಅವಸರವಾಗಿ ಇಂತಹ ತೀರ್ಮಾನ ಮಾಡಲಿಕ್ಕೆ ಏನು ಕಾರಣ ಇದೆ. ಆದ್ದರಿಂದ, ನಾನು ಇದನ್ನು ಎರಡು ಸದನಗಳ ಜಂಟಿ ಸಲಹಾ ಸಮಿತಿಗೆ ಕಳುಹಿಸಬೇಕೆಂದು ನನ್ನ ಸಲಹೆ. ಇನ್ನು 135 ಮತ್ತು 136 ತಾವು ತಂದಿರತಕ್ಕಂಥ ತಿದ್ದುಪಡಿಗಳು ಇದು ತಾಲ್ಲೂಕು ಪಂಚಾಯಿತಿ, ತಾಲ್ಲೂಕು ಅಭಿವೃದ್ಧಿ ಸಂಚಾಯಿತಿಗೆ ಸಂಬಂಧಪಟ್ಟಂಥ ವ್ಯವಸ್ಥೆ. ಈಗ ಇರತಕ್ಕಂಥ ವ್ಯವಸ್ಥೆಯಲ್ಲಿ ತಾಲ್ಲೂಕು ಪಂಚಾಯಿತಿಯ ಅಭಿವೃದ್ಧಿ ಸಮಿತಿಗೆ ಶಾಸಕ ಅಧ್ಯಕ್ಷನಾಗಿರತಕ್ಕಂತಾದ್ದು ಎನ್ನುವ ಅವಕಾಶ ಇದರಲ್ಲಿದೆ. ಇದರಲ್ಲಿ ಸ್ವಲ್ಪ ದ್ವಂದ್ವ ಇದೆ. ಏನೆಂದರೆ ಎರಡು ಜನ ಶಾಸಕರು ಇದ್ದರೆ, ಯಾರು ಇರಬೇಕು, ಯಾರು ಇರಬಾರದು ಎಂಬ ಮಾತುಗಳು ಬೇರೆ, ಆದರೆ ಇಲ್ಲಿ ಏನು ಮಾಡಿದ್ದಾರೆ. ಐದು ಜನರನ್ನು ಪರಿಶಿಷ್ಟ ಜನರನ್ನು, ಪರಿಶಿಷ್ಟವರ್ಗದವರನ್ನು, ಹಿಂದುಳಿದವರನ್ನು ಮತ್ತು ಹೆಣ್ಣುಮಕ್ಕಳನ್ನು ಹೀಗೆ ಐದು ಜನರನ್ನು ಈ ಒಂದು ತಾಲ್ಲೂಕು ಪಂಚಾಯಿತಿ ಸಮಿತಿಗೆ ಕೋ ಆಪ್ಟ್ ಮಾಡಿಕೊಳ್ಳತಕ್ಕಂಥ ಅಧಿಕಾರ ತಾಲ್ಲೂಕು ಪಂಚಾಯಿತಿಗೆ ಈಗ ಹಾಲಿ ಶಾಸನದಲ್ಲಿ ಇದೆ. ಈ ಅಧಿಕಾರ ಏನು ಇದೆ, ಐದು ಜನರನ್ನು ತಾಲ್ಲೂಕು ಪಂಚಾಯಿತಿಯವರು ಕುಳಿತು ಶಾಸನಸಭೆಯ ಸದಸ್ಯನ ಅಧ್ಯಕ್ಷತೆಯಲ್ಲಿ ಯಾವ ಯಾವ ವರ್ಗಗಳಿಗೆ ಅಲ್ಲಿ ಅವಕಾಶ ಸಿಕ್ಕಲಿಲ್ಲ ಅಂತಹವರನ್ನು ಗುರುತಿಸಿ ಐದು ಜನರನ್ನು ನಾಮ ನಿರ್ದೇಶನ ಮಾಡಲಿಕ್ಕೆ ಜಿಲ್ಲಾಪರಿಷತ್‌ಗೆ ಕಳುಹಿಸಿಕೊಡುತ್ತಾರೆ. ಯಾವಾಗ ಈ ಶಾಸನ ಇತ್ತು. ಈ ಶಾಸನ ಇದ್ದುದು ಮೀಸಲಾತಿ ಇಲ್ಲದೇ ಇದ್ದಾಗ. ಈಗ ಮೀಸಲಾತಿಯನ್ನು ನೀವು ಇಲ್ಲಿ ಹಾಕಿಸಿ ಅರ್ಥಾತ್ ಮೀಸಲಾತಿಯನ್ನು ಈ ಶಾಸನದಲ್ಲಿ ಒಪ್ಪಿಕೊಂಡರೆ ಯಾವ ಜನಕ್ಕೆ ಇಲ್ಲಿ ಅವಕಾಶ ಸಿಕ್ಕಿಲ್ಲ ಎಂದು ಹೇಳುತ್ತಿದ್ದೀರಿ, 135, 136ರಲ್ಲಿ ಆ ಅವಕಾಶಗಳು ಸಿಕ್ಕುತ್ತವೆ ಅಲ್ಲಿ. ಇದು ಸಿಕ್ಕಿದಮೇಲೂ ಕೂಡ ಪುನ: ಐದು ಜನ ನಾಮ ನಿರ್ದೇಶನ ಮಾಡತಕ್ಕ ಅಧಿಕಾರ ಸರ್ಕಾರಕ್ಕೆ ಏತಕ್ಕೆ ಬೇಕು? ಇದು ನನಗೆ ಅರ್ಥವಾಗುವುದಿಲ್ಲ.

ಯಾವ ಉದ್ದೇಶದಿಂದ ಇಲ್ಲಿ ಮೀಸಲಾತಿಯನ್ನು ತಂದಿದ್ದೀರಿ ಇದು ಸಫಲವಾಗುವುದಾದರೆ ಪುನ: 5 ಜನರನ್ನು ಸರ್ಕಾರದವರು ನಾಮಿನೇಷನ್ ಏತಕ್ಕೆ ಮಾಡುತ್ತೀರಿ? Why do you spoke your nose again in the administration of Taluk Panchayat Abhivruddi Samithis? This is the question.

ಎರಡನೆಯದಾಗಿ ಇಲ್ಲಿ 5 ಜನರನ್ನು ನೇರವಾಗಿ ನೇಮಕಾತಿ ಮಾಡುವುದಕ್ಕೆ ಅವಕಾಶವನ್ನು ಮಾಡಿಕೊಂಡಿದ್ದೀರಿ. ಇನ್ನೊಂದು ವಿಚಾರ ಎಂದರೆ, ಮಂತ್ರಿಯಾದವನು ತಾನು ತಾಲ್ಲೂಕು ಪಂಚಾಯಿತಿ ಸಭೆಯಲ್ಲಿ ಅಧ್ಯಕ್ಷನಾಗಿರುವುದಕ್ಕೆ ಸಾಧ್ಯವಿಲ್ಲ ಎಂಬುದನ್ನು 83ನೇ ಶಾಸನದಲ್ಲಿ ನಿಷೇಧ ಮಾಡುತ್ತದೆ. ಈಗ ತಾವು ಏನು ಹೇಳುತ್ತಿದ್ದೀರೆಂದರೆ, ಮಂತ್ರಿ ಅಲ್ಲಿ ಅಧ್ಯಕ್ಷರಾಗಿರಬಹುದು ಎಂದು ಅವಕಾಶವನ್ನು ಮಾಡಿಕೊಟ್ಟಿದ್ದೀರಿ.

ಅಂದಮೇಲೆ ಆತ ಮಂತ್ರಿಯಾಗಿ ತನ್ನ ಜವಾಬ್ದಾರಿಯನ್ನು ನಿರ್ವಹಿಸಬೇಕೆಂದು ಕಂಡರೆ, ತಾಲ್ಲೂಕು ಪಂಚಾಯಿತಿ ಸಭೆಯಲ್ಲಿ ಅಧ್ಯಕ್ಷತೆ ವಹಿಸುವುದು ಅಸಾಧ್ಯ ಎಂದು ಅಂದಾಗ, ಆ ತಾಲ್ಲೂಕು ಪಂಚಾಯಿತಿ ಸಭೆಯಲ್ಲಿ ಸೇರಿರತಕ್ಕ ಎಲ್ಲ ಮಾನ್ಯ ಸದಸ್ಯರೂ ಸೇರಿ ತಮಗೆ ಬೇಕಾದ ಒಬ್ಬರನ್ನು ಅಧ್ಯಕ್ಷರನ್ನಾಗಿ ಆಯ್ಕೆ ಮಾಡಿಕೊಳ್ಳಬಹುದು. ಇದು ಈಗಿರತಕ್ಕ ವ್ಯವಸ್ಥೆಯ ಪ್ರಕಾರ. ಆದರೆ ನೀವು ಮಾಡಿರತಕ್ಕದ್ದು ಏನೆಂದರೆ, ಅವನು ಮಂತ್ರಿಯಾದರೆ ಶಾಸಕ ನೇರವಾಗಿ ಅಧ್ಯಕ್ಷನಾಗಬಹುದು. ನೀವು ಹೇಳಿದವರನ್ನು ಅಧ್ಯಕ್ಷರನ್ನಾಗಿ ಮಾಡುವಂಥ ಅಧಿಕಾರವನ್ನು ಶಾಸಕರಿಗೆ ಕೊಡುವುದಾದರೆ ಶಾಸಕರಿಗೆ ಈಗಿರತಕ್ಕ ಅಧಿಕಾರವನ್ನು ಕಿತ್ತು ಡೀ ಸೆಂಟ್ರಲೈಸೇಷನ್ ಎನ್ನತಕ್ಕ ಹೆಸರಿನಲ್ಲಿ ಪುನ: ಜಿಲ್ಲಾ ಪರಿಷತ್ತು ಮತ್ತು ಮಂಡಲಪಂಚಾಯಿತಿಗಳಿಗೆ ಕೊಡತಕ್ಕ ಕಾರಣ ಇರಲಿಲ್ಲ. ಕೊಟ್ಟ ಉದ್ದೇಶ ಎಂದರೆ, ಅಧಿಕಾರದ ಕೇಂದ್ರೀಕರಣ ಆಗಬಾರದು, ಅದು ಹೆಪ್ಪುಗಟ್ಟಬಾರದು ಎಂದು. ಇದು ವಿಧಾನ ಸೌಧದಲ್ಲಿ ಅಧಿಕಾರ ಹೆಪ್ಪಾಗಬಾರದು ಎಂದು; ಅದನ್ನು ಒಡೆಯಬೇಕೆಂದು ಹೇಳುವುದಾದರೆ ಪುನ: ಅವನು ಮಂತ್ರಿಯಾದ ಕಾರಣದಿಂದ ತಾಲ್ಲೂಕು ಪಂಚಾಯಿತಿ ಅಧ್ಯಕ್ಷರನ್ನು ನಾಮಿನೇಟ್ ಮಾಡತಕ್ಕ ಅಧಿಕಾರವನ್ನು ನೀವು ಏತಕ್ಕೆ ಇಟ್ಟುಕೊಂಡಿದ್ದೀರಿ?

ಶ್ರೀ ಬಿ. ಬಸವಲಿಂಗಪ್ಪ : ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧಪಕ್ಷದ ನಾಯಕರು 2-3 ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ನಾವು 135ನೇ ಸೆಕ್ಷನ್‌ನ್ನು ರಿಪೀಟ್ ಮಾಡಿದ್ದೇವೆ. ಹಿಂದುಳಿದವರ್ಗದವರಿಗೆ, ನಿಮ್ನವರ್ಗದವರಿಗೆ ಮೀಸಲಾತಿಯನ್ನು ಇಟ್ಟಿದ್ದರೂ ಪುನ: ನಾಮಿನೇಷನ್ ವ್ಯವಸ್ಥೆಯ ಅಧಿಕಾರವನ್ನು ಏತಕ್ಕೆ ಇಟ್ಟುಕೊಂಡಿದ್ದೀರೆಂದು ಕೇಳುತ್ತಿದ್ದೀರಿ. ಈಗ ಮಂಡಲ್ ಕಮಿಷನ್ ವರದಿಯ ಪ್ರಕಾರ ಹೇಳುವುದಾದರೆ, ನಾಲ್ಕುನೂರು ಚಿಲ್ಲರೇ ಜಾತಿಗಳು ಇದ್ದುದನ್ನು ನಾವು ಕಡಿಮೆ ಮಾಡಿ 333 ಜಾತಿಗಳ ಒಂದು ಪಟ್ಟಿಯನ್ನು ಚಿನ್ನಪ್ಪರೆಡ್ಡಿ ಕಮಿಟಿಯವರು ಮಾಡಿದ್ದಾರೆ. ಈ ಮಾತನ್ನು ಅವರು ಹೇಳಿದ್ದಾರೆ. ಆದ್ದರಿಂದ ನಾನು ಹೇಳುವುದನ್ನು ತಾವು ದಯವಿಟ್ಟು ಪರಿಶೀಲಿಸಬಹುದು. ಬ್ಯಾಕ್‌ವರ್ಡ್ ಕ್ಲಾಸ್‌ನವರನ್ನು ಒಂದು ಮಂಡಲದಲ್ಲಿ ಎಷ್ಟು ಜನರನ್ನು ನೇಮಿಸಬಹುದು. ಸುಮಾರು 3-4-6ಜನರನ್ನು ನಾಮಿನೇಟ್ ಮಾಡಬಹುದೆಂದು ಇಟ್ಟು ಕೊಳ್ಳೋಣ. ಆದರೆ ಯಾವ ಜಾತಿಯವರಿಗೆ ಇಲ್ಲಿ ರೆಪ್ರೆಸೆಂಟೇಷನ್ ಸಿಕ್ಕುವುದಿಲ್ಲ ಎಂಬುದನ್ನು ನಾವು ರೆಕಗ್ನೈಸ್ ಮಾಡಿ ಅವರಿಗೆ ಪ್ರಾತಿನಿಧ್ಯವನ್ನು ಕೊಡುವುದಕ್ಕೆ ನಮ್ಮ ಸರ್ಕಾರದವರು ಈ ರೀತಿ ಮಾಡಿದ್ದೇವೆ. Representation to the unrepresented backward people-

ಇಂಥವರನ್ನು ನಾಮಿನೇಟ್ ಮಾಡಬೇಕೇಂದು ಮಾಡಿದ್ದೇವೆ.

ಇನ್ನು ಎರಡನೆಯದಾಗಿ ಮಂತ್ರಿಗಳ ವಿಚಾರದಲ್ಲಿ ತಾವು ಹೇಳಿದ್ದೀರಿ. ಮಂತ್ರಿಗಳನ್ನು ಏತಕ್ಕೆ ಮಾಡಬೇಕು. ಮಂತ್ರಿಗಳು ಇಲ್ಲೇ ಇರುತ್ತಾರೆ. ಅವರು ಅಲ್ಲಿ ಅಧ್ಯಕ್ಷರಾಗಿರತಕ್ಕದ್ದು ಸರಿಯಲ್ಲವೆಂದು ಹೇಳುತ್ತಿದ್ದೀರಿ; ಈ ಸಂದರ್ಭದಲ್ಲಿ ನನ್ನ ವೈಯಕ್ತಿಕ ಅನುಭವದ ಹಿನ್ನಲೆಯಲ್ಲಿ ಒಂದು ಮಾತನ್ನು ಹೇಳಬಯಸುತ್ತೇನೆ. ನಾನು ಕೂಡ ಹಿಂದೆ ಡೆಪ್ಯುಟಿ ಹೋಂ ಮಿನಿಸ್ಟರ್ ಆಗಿದ್ದೆ. ತಾಲ್ಲೂಕು ಅಭಿವೃದ್ಧಿ ಸಮಿತಿಗೆ ಏತಕ್ಕೆ ಹೋಗಬೇಕೆಂದು ನಾನು 5 ವರ್ಷಗಳಲ್ಲಿ ಒಂದು ದಿವಸವೂ ಹೋಗಲಿಲ್ಲ. ಆಮೇಲೆ ಚುನಾವಣೆ ಬಂತು. ಆ ಚುನಾವಣೆಯಲ್ಲಿ ನಾನು ಸೋತೆ. ಮಂತ್ರಿಯಾದವರು ಎಂ.ಎಲ್.ಎ. ಆಗಿರುತ್ತಾರೆ. ಆದರೆ ಮಂತ್ರಿಯಾದಕೂಡಲೇ ಜನರ ಸಂಪರ್ಕ ಕಳೆದುಕೊಂಡರೆ ಮತ್ತೆ ಅವನು ಅಲ್ಲಿ ಹೋಗುವುದಕ್ಕಾಗುವುದಿಲ್ಲ. ಇವನ ಜಾಗಕ್ಕೆ ಯಾರಾದರೂ ಇನ್ನೊಬ್ಬರು ಕೈ ಹಾಕುತ್ತಾರೆ. ತಾವೂ ಕೂಡ ಹಿಂದೆ ಮಂತ್ರಿಯಾಗಿದ್ದೀರಿ. ಇದು ತಮಗೂ

ಗೊತ್ತಿದೆ. ಮಂತ್ರಿಯಾದವನಿಗೆ ಲುಕ್ಸಾನಾಗುತ್ತದೆ, ಜನರ ಸಂಪರ್ಕ ಹೋಗುತ್ತದೆಂದು ನಾವು ಇದನ್ನು ಬಹಳ ದೀರ್ಘವಾಗಿ ಯೋಚನೆ ಮಾಡಿ ಈ ಸೆಕ್ಷನ್‌ನ್ನು ಹಾಕಿದ್ದೇವೆ. ಅವನು ಹೋಗಬಹುದು, ಹೋಗದೇ ಇರಬಹುದು. ಹೋಗದಿದ್ದರೆ ಇಲ್ಲದೆ ಯಾರನ್ನು ಬೇಕಾದರೂ ನಾಮಿನೇಟ್ ಮಾಡಬಹುದು. 135ನೇ ಸೆಕ್ಷನ್ ಪ್ರಕಾರ ಆಳುವ ಪಕ್ಷದವರೂ ಎಂ.ಎಲ್.ಎ. ಆಗಿರುತ್ತಾರೆ; ಅವರೂ ಅಧ್ಯಕ್ಷರಾಗುತ್ತಾರೆ. ಸೆಕ್ಷನ್ 135ರಲ್ಲಿ ನಾವು ಏನು ಅಧಿಕಾರವನ್ನು ಅವರಿಗೆ ಕೊಡಬೇಕೆಂದು ಮಾಡಿದ್ದೇವೆ ಅದು ವಿರೋಧಪಕ್ಷದವರಿಗೂ ಬರುತ್ತದೆ. ಅವರಿಗೂ ಅನುಕೂಲವಾಗುತ್ತದೆ. ಯಾರ್‍ಯಾರು ಎಂ.ಎಲ್.ಎ. ಆಗಿರುತ್ತಾರೆ, ಅವರಿಗೆ ನಿಜವಾಗಿ ಸ್ವಲ್ಪಮಟ್ಟಿಗಾದರೂ ಅಧಿಕಾರವನ್ನು ಕೊಡಬೇಕೆಂಬ ಉದ್ದೇಶದಿಂದ ನಾವು ಈ ಪ್ರಾವಿಷನ್ ಮಾಡಿದ್ದೇವೆ. ಇದುವರೆಗೂ ಡಿಸ್ಟ್ರಿಕ್ಟ್ ಕಮಿಟಿ ಎಂದು ಮಾಡಿದ್ದೆವು.

ಈಗ ಮಂಡಲ್ ಸ್ಕೀಮ್ ಎಂದು ಇತ್ತು. ಡಿಸ್ಟ್ರಿಕ್ಟ್ ಮತ್ತು ಮಂಡಲ್ ಸ್ಕೀಮ್‌ನ ಜೊತೆಗೆ ತಾಲ್ಲೂಕ್ ಸ್ಕೀಮನ್ನೂ ಕೂಡ ಮಾಡಿದ್ದೇವೆ. ಅಂದರೆ ಯಾರು ಎಂ.ಎಲ್.ಎ. ಆಗಿರುತ್ತಾರೆ ಅಂಥವರು ನಿಜವಾಗಲೂ ಕೂಡ ಅವರ ಕ್ಷೇತ್ರದಲ್ಲಿ ಜನರ ಸೇವೆ ಮಾಡಬಹುದು, ಮತ್ತು ಮಂಡಲ್ ಪಂಚಾಯತ್‌ಗಳಲ್ಲೂ ಕೂಡ ಅವರು ಬುದ್ಧಿವಾದ ಹೇಳಬಹುದು ಎನ್ನತಕ್ಕಂಥಾದ್ದು ಇದೆ. ಅದಕ್ಕೆ ಸಮಗ್ರವಾಗಿ ಈಗ ಎಂ.ಎಲ್.ಎ. ಅಗಿರತಕ್ಕಂಥವರಿಗೆ ಅರ್ಥಗರ್ಭಿತವಾಗಿ, ಅವಶ್ಯಕವಾಗಿ ಜನರ ಸೇವೆ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಹೇಳಿ ಅದನ್ನು ತಿಳಿದುಕೊಂಡು ಮಾಡಿದ್ದೇವೆಯೇ ಹೊರತು ನನ್ನ ದೃಷ್ಟಿಯಿಂದ ಮಾಡಿದ್ದಲ್ಲ.

ಶ್ರೀ ಹೆಚ್. ಏಕಾಂತಯ್ಯ : ಈಗ ತಾವು ಏನು ಹೇಳುತ್ತಿದ್ದೀರಿ ; ಅದಕ್ಕೆ ಇದು ವಿರುದ್ಧವಾದ ತಿದ್ದುಪಡಿಯಾಗಿರುತ್ತದೆಂದು ಹೇಳುತ್ತಿದ್ದೇವೆ.

ಶ್ರೀ ಎಸ್. ಹೆಚ್. ಕೌಜಲಗಿ : ಎಂ.ಎಲ್.ಎ.ಗಳಿಗೆ ಅಧ್ಯಕ್ಷರು ಇರುವಂಥದ್ದಕ್ಕೆ ಬಾರ್ ಏತಕ್ಕೆ ಹಾಕಿದ್ದೀರಿ. ಹಾಗಾದರೆ ಎಂ.ಎಲ್.ಎ.ಗಳಿಗೆ ಓಟಿಂಗ್ ಪವರ್ಸ್ ಕೊಟ್ಟಿದ್ದೀರಿ. ಆದರೆ ಎಂ.ಎಲ್.ಎ.ಗಳಿಗೆ ಅಧ್ಯಕ್ಷರಾಗಿರುವುದಕ್ಕೆ ಬಾರ್ ಏತಕ್ಕೆ ಇರಬೇಕು. ಅದನ್ನು ತೆಗೆದುಬಿಡಬೇಕಾಗಿತ್ತು. ಅಧ್ಯಕ್ಷರಾಗಿ ಎಂ.ಎಲ್.ಎ. ಆದವರು ಜಿಲ್ಲಾಪರಿಷತ್‌ಗೆ ಕಂಟೆಸ್ಟ್ ಮಾಡಲಿಕ್ಕೆ ಬರುವುದಿಲ್ಲ;

(ಗೊಂದಲ)

ಚೇರ್‌ಮೆನ್ : ಇಲ್ಲಿಯವರೆಗೆ ತಾವು 6 ತಾಸು ಮಾತನಾಡಿದ್ದೀರಿ. ಎಲ್ಲರಿಗೂ ಸಮಯ ಕೊಡಬೇಕಾಗಿದೆ. ಆದ್ದರಿಂದ ತಾವು ಜಾಗ್ರತೆ ಮುಗಿಸಿ.

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೇ, ಈಗ ಮುಖ್ಯವಾದ ವಿಚಾರ ಹೊರಗೆ ಬಂತು. ಈಗ ನಮ್ಮ ಶಾಸಕರಿಗೆ ಅಧಿಕಾರವನ್ನು ಕೊಟ್ಟಿದ್ದೇವೆ ಎನ್ನುವ ಮಾತನ್ನು ಹೇಳಿ ಬೇರೆ ಬೇರೆ ಕಡೆಯಿಂದ ಕಿತ್ತುಕೊಂಡಿರುವುದಕ್ಕಾಗಿ ಶಾಸಕರಿಂದ ಮತವನ್ನು ಹಾಕಿಸಿಕೊಳ್ಳಬೇಕಾಗಿದೆ. ಅದಕ್ಕಾಗಿ ಈ ಪ್ರಯತ್ನವೆಂದರೆ ತಾವು ತಪ್ಪುತಿಳಿದುಕೊಳ್ಳಬೇಡಿ. ನಾನು ಎಂ.ಎಲ್.ಎ. ಆಗಿ ವಿರೋಧಪಕ್ಷದ ನಾಯಕನಾಗಿ ಸಹ ಪ್ರಿಸೈಡ್ ಮಾಡುತ್ತೇನೆ. ನಮ್ಮ ತಾಲ್ಲೂಕಿನಲ್ಲಿ ಇಂಥ ಗೊಂದಲಗಳೂ ಇಲ್ಲ. ನಾನೇ ಹೋಗಿ ಅಲ್ಲಿ ಪ್ರಿಸೈಡ್ ಮಾಡುತ್ತೇನೆ. ರಿಸರ್ವೇಷನ್ ಬಗ್ಗೆ ಆಮೇಲೆ ಬರುತ್ತೇನೆ. ಇಲ್ಲಿ ಬಹಳ ಮುಖ್ಯವಾಗಿರತಕ್ಕಂಥದ್ದು ಮಂಡಲ್ ಪ್ರಧಾನವನ್ನು ತೆಗೆಯುವುದಕ್ಕೆ ಮೂರನೇ ಎರಡು ಭಾಗ ಮೆಜಾರಿಟಿ ಇರಬೇಕು. ಆದರೆ ಜಿಲ್ಲಾಪರಿಷತ್ ಅಧ್ಯಕ್ಷರನ್ನು ತೆಗೆಯಲಿಕ್ಕೆ ಸಿಂಪಲ್ ಮೆಜಾರಿಟಿ; ಏತಕ್ಕೆ ಇದು? ಹಿಂದೆ ನಾವು ಅವರ ಜೊತೆಗೆ ಮಾತನಾಡಿದಾಗ ಒಂದು ಸಲಹೆಯನ್ನು ಕೊಟ್ಟಿದ್ದೇನೆ.

ಏನೆಂದರೆ ನೀವು ಸಿಂಪಲ್ ಮೆಜಾರಿಟಿ ಮಾಡಿಕೊಳ್ಳುವುದಕ್ಕೆ ನನ್ನ ಅಭ್ಯಂತರವಿಲ್ಲ; ಆದರೆ ಶಾಸಕರಿಗೆ ಮತಧಾನದ ಹಕ್ಕು ಇರಕೂಡದು. ಮತದಾನದ ಹಕ್ಕು ಇರುವುದಾದರೆ ಅದಕ್ಕೆ ಮೂರನೇ ಎರಡು ಭಾಗದ ಮೆಜಾರಿಟಿ ಇರಲಿ. ಕಾರಣವೇನು? ಜಿಲ್ಲಾಪರಿಷತ್ತಿನ ಒಂದು ವ್ಯವಸ್ಥೆಯನ್ನು ನಾವು ಸೀಮಿತವಾದಂಥ ಪರ್ಯಾಯ ಸರ್ಕಾರವೆಂದು ಹೇಳಿ ನಿಜವಾದ ಕಲ್ಪನೆ ನಿಮ್ಮ ಮನಸ್ಸಿನಲ್ಲಿದ್ದರೆ ಶಾಸನಸಭೆಗೆ ಚುನಾವಣೆ ಆದಾಗಲೆಲ್ಲ ಜಿಲ್ಲಾಪರಿಷತ್ತಿನ ಕಾಂಪೋಡಿಷನ್ ಬದಲಾವಣೆಯಾಗಿ ತೆಗೆದುಕೊಳ್ಳಕೂಡದು. ಇಲ್ಲಿ ಏನಾಗುತ್ತದೆ ಅಂದರೆ ಚುನಾವಣೆಗಳು ಆಯಿತು. ಇದು ನಾವು ಮಾಡಿದ ಅಪರಾಧವೇ? 83ನೇ ಶಾಸನದಲ್ಲಿ ನಾವು ಮಾಡಿದ ಅಪರಾಧ ಇವತ್ತು ನೀವು ಪುನ: ಈ ಅಪರಾಧ ಮಾಡುತ್ತಿದ್ದೀರಿ. ಇದರ ಪರಿಣಾಮ ಏನು? ಮುಂದೆ ಬರತಕ್ಕಂಥ ಚುನಾವಣೆಗಳಲ್ಲಿ ಈಗ ಕಾಂಗ್ರೆಸ್ ಅಧಿಕಾರ ಬಂದಿದೆ,ಮುಂದೆ ಜನತಾದಳಕ್ಕೆ ಅಧಿಕಾರ ಬಂದರೆ ಮತ್ತೆ ಜಿಲ್ಲಾಪರಿಷತ್‌ಗಳನ್ನು ಅವರ ಕೈಗೆ ಕೊಡತಕ್ಕ ಪ್ರಯತ್ನ ಆಗುತ್ತದೆ. ಮುಂದೆ ಯಾವ ಸರ್ಕಾರ ಅಧಿಕಾರ ಬರುತ್ತದೆ, ಅವರ ಕೈಗೆ ಅಧಿಕಾರ ಕೊಡಬೇಕು. ಆದ್ದರಿಂದ ಜಿಲ್ಲಾಪರಿಷತ್ತಿನ ವ್ಯವಸ್ಥೆ.

ಶ್ರೀ ಆರ್.ಎನ್. ನಾಯಕ್ : ಆ ಅಧಿಕಾರವನ್ನು ಏತಕ್ಕೆ ಕೊಟ್ಟದ್ದು. ನೀವೇ ಅಧಿಕಾರವನ್ನು ಕೊಟ್ಟು ಅಪರಾಧ ಮಾಡಿದ್ದೇವೆಂದು ಹೇಳಿದ್ದೀರಿ. ಹಾಗಿದ್ದರೆ ಅಧಿಕಾರವನ್ನು ಏತಕ್ಕೆ ಕೊಟ್ಟದ್ದು.

ಶ್ರೀ ಡಿ.ಬಿ. ಚಂದ್ರೇಗೌಡ : ಅಧಿಕಾರ ಬಂದುದು ಸರ್ಕಾರ ರಚನೆ ಮಾಡುವುದಕ್ಕೆ ಜಿಲ್ಲಾಪರಿಷತ್ತನ್ನು ಬದಲಾವಣೆ ಮಾಡುವುದಕ್ಕಲ್ಲ;

ಶ್ರೀ ಆರ್. ಎನ್. ನಾಯಕ್ : ನೀವೇ ಮಾಡಿದ್ದಂಥ ಹಲವಾರು ಅಪರಾಧಗಳನ್ನು ರಿಪೇರಿ ಮಾಡುವುದಕ್ಕೆ ಅವರು ತಿದ್ದುಪಡಿಗಳನ್ನು ತಂದಿದ್ದಾರೆ.

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ : ಅವರು ಹುಟ್ಟನಿಂದ ನಾಯಕರು. ಆದ್ದರಿಂದ ಅವರಿಗೆ ಅವಕಾಶ ಕೊಡಬೇಕಾಗುತ್ತದೆ. ತಪ್ಪಿಲ್ಲ ಅದು. ಆ ನಾಯಕರಿಗೆ ಒಂದು ಮಾತು ನಾನು ಹೇಳಬೇಕಾಗುತ್ತದೆ. ಮಂತ್ರಿಗಳು ಉತ್ತರ ಹೇಳುವುದಕ್ಕೆ ಸಮರ್ಥರಿದ್ದಾರೆ. ನನ್ನ ವಾದವನ್ನು ಶ್ರೀ ಆರ್. ಎನ್. ನಾಯಕ್ ಅವರು ಅರ್ಥ ಮಾಡಿಕೊಳ್ಳಲಿಲ್ಲ. ನನ್ನ ವಾದ ಏನೆಂದರೆ ಶಾಸನಸಭಾ ಸದಸ್ಯರು....

ಶ್ರೀ ಆರ್.ಎನ್. ನಾಯಕ್ : ಅವರು ಉತ್ತರ ಹೇಳುವುದಕ್ಕೆ ತುಂಬಾ ಸಮರ್ಥರಿದ್ದಾರೆಂದು ಅವರನ್ನು ನಮ್ಮ ಪಕ್ಷ ಆ ಜಾಗದಲ್ಲಿ ಕೂರಿಸಿದೆ. ಆದರೆ ವಿಚಾರ ಇಷ್ಟೆ, ಅವರಿಗೆ ಸಾಮರ್ಥ್ಯ ಇದೆ ಎಂದು ನೀವು ನಾವು ಯಾರೂ ಕುಳಿತುಕೊಳ್ಳುವುದು ಬೇಡವೇ? ನೀವಿಬ್ಬರೇ ಕುಳಿತುಕೊಳ್ಳುವುದಕ್ಕಾಗುತ್ತದೆಯೆ? ಈ ವ್ಯವಸ್ಥೆಯಲ್ಲಿ ಚರ್ಚೆ ನೀವು ನಮ್ಮನ್ನು ಒಳಪಡಿಸಿದಾಗ ಕೆಲವು ವಿಚಾರಗಳನ್ನು ತಮ್ಮ ಮುಂದೆ ಇಡಬೇಕಾಗುತ್ತದೆ. ಕಾನೂನಿನಲ್ಲಿ ಆದಿಲ್ಲ ಎಂದರೆ ನಾನು ಹೇಳುವುದೇ ಇಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ : ಈಗ ಒಂದು ಕಣ್ಣಿಗೆ ಸುಣ್ಣ, ಮತ್ತೊಂದು ಕಣ್ಣಿಗೆ ಬೆಣ್ಣೆ ಏತಕ್ಕೆ ? ಮಾನ್ಯ ನಾಯಕರೇ, ನಿಮ್ಮ ಶಾಸನ ತಿದ್ದುಪಡಿಯಲ್ಲಿ ಮಂಡಲಕ್ಕೆ ಮೂರನೇ ಎರಡು ಭಾಗ ಇಟ್ಟು ಕೊಳ್ಳುತ್ತೀರಿ. ಆದರೆ ಜಿಲ್ಲಾ ಪರಿಷತ್ತಿಗೆ ಏತಕ್ಕೆ ಸಿಂಪಲ್ ಮೆಜಾರಿಟಿ? ಉತ್ತರ ಹೇಳಿ. ಮಂಡಲದಲ್ಲಿ ಮೂರನೇ ಎರಡು ಭಾಗ ಮೆಜಾರಿಟಿ ಇಟ್ಟಮೇಲೆ ಜಿಲ್ಲಾ ಪರಿಷತ್ತಿನಲ್ಲೂ ಮೂರನೇ ಎರಡು ಭಾಗ

ಮೆಜಾರಿಟಿ ಇಡಬೇಕು. ಇಲ್ಲಿ ಸಿಂಪಲ್ ಮೆಜಾರಿಟಿ ಏತಕ್ಕೆ? ಇಲ್ಲಿ ಸಿಂಪಲ್ ಮೆಜಾರಿಟಿ ಇದ್ದ ಮೇಲೆ ಅಲ್ಲೂ ಸಿಂಪಲ್ ಮೆಜಾರಿಟಿ ಇರಬೇಕು. ಇಲ್ಲಿ ನಾನು ರಾಜಕಾರಣವನ್ನು ಏನು ಗುರುತಿಸುತ್ತೇನೆಂದರೆ ಇಲ್ಲಿ ಶಾಸಕರು ಮತದಾನ ಮಾಡತಕ್ಕವರು. ಮಂಡಲದಲ್ಲಿ ಶಾಸಕರಿಗೆ ಏನೂ ಕೆಲಸ ಇಲ್ಲ. ಆದ್ದರಿಂದ ಅದು ಇರಲಿ, ಇಲ್ಲಿ ನಿಮಗೆ ಅಧಿಕಾರ ಬೇಕು. ಪರಿಷತ್ತಿನಲ್ಲಿ ಸಿಂಪಲ್ ಮೆಜಾರಿಟಿ. ಇದು ನಿಮ್ಮ ಅಧಿಕಾರಕ್ಕಾಗಿ ಆದರೆ This is exactly what I call a bad law. I want a good law from an experienced minister like Sri Basavalingappa. I expect from him a good law. But it is not a good law.

ಶ್ರೀ ಬಿ. ಬಸವಲಿಂಗಪ್ಪ : ಅಧ್ಯಕ್ಷರೇ, ಈಗ ನಮ್ಮ ಸದನದಲ್ಲಿ ಬಹುಮತದಿಂದ ನಮ್ಮ ನಿರ್ಣಯ ಆಗುತ್ತದೆ. ಸಿಂಪಲ್ ಮೆಜಾರಿಟಿ ಇಲ್ಲೂ ಕೂಡ ಇದೆ. ಪಾರ್ಲಿಮೆಂಟಿನಲ್ಲೂ ಸಿಂಪಲ್ ಮೆಜಾರಿಟಿ ಇದೆ. ಈಗ ಜಿಲ್ಲಾ ಪರಿಷತ್ತಿನಲ್ಲಿ ಸಿಂಪಲ್ ಮೆಜಾರಿಟಿ ನಾವು ಮಾಡಿದ್ದೇವೆ. ಮಂಡಲದಲ್ಲಿ ಏತಕ್ಕೆ ಉಳಿಸಿಕೊಂಡಿದ್ದೀರಿ ಎಂದು ಅವರು ಹೇಳುತ್ತಾರೆ. 64ನೇ ರಾಜ್ಯಾಂಗದ ತಿದ್ದುಪಡಿ ಏನಿದೆ, ಅದರಲ್ಲಿ ಇರತಕ್ಕ ಲಾಂಗ್ವೇಜನ್ನು ಇಲ್ಲಿ ರಿಪೀಟ್ ಮಾಡಿದ್ದೇನೆ. ಓದಬೇಕು ಎಂದರೆ ಓದುತ್ತೇನೆ. ಜನತಾ ದಳದ ಪಾರ್ಟಿ ಮುಖಂಡರು 64ನೇ ರಾಜ್ಯಾಂಗದ ತಿದ್ದುಪಡಿ ವಿರುದ್ಧವಾಗಿ ಅಮೆಂಡ್‌ಮೆಂಟ್ ತಂದಿದ್ದಾರೆ ಎಂದು ಒಳ್ಳೆಯ ಸಲಹೆಯನ್ನು ಮಾಡಿದ್ದೀರಿ. ಅದನ್ನು ತೆಗೆದುಕೊಂಡು ಇದನ್ನು ರಿಪೀಟ್ ಮಾಡೋಣ ಎಂದು ಮಾಡಿದ್ದೇವೆ. ಜಿಲ್ಲಾ ಪರಿಷತ್ತಿಗೆ ಮೂರನೇ ಎರಡು ಭಾಗದಷ್ಟು ಮೆಜಾರಿಟಿ ಅನಾವಶ್ಯಕ. ಮಂಡಲಕ್ಕೆ ಅವಶ್ಯಕತೆ ಏತಕ್ಕೆ ಎಂದು ಹೇಳಿದ್ದೇವೆ. ಅಲ್ಲಿ ಹಳ್ಳಿ ಹಂತದಲ್ಲಿ ಹಲವಾರು ರಾಜಕೀಯ ಒತ್ತಡಗಳು ಮತ್ತು ಪ್ರಭಾವ ಶಕ್ತಿಗಳು ಬರುತ್ತವೆ. ಆದ್ದರಿಂದ ಮೆಜಾರಿಟಿ ಮೈನಾರಿಟಿ ಹೋಗಿ ಅಳಿಸುವುದು ಮತ್ತೆ ಬರಿಸುವುದು ಈ ವ್ಯವಹಾರ ಆದೀತು. ಆದ್ದರಿಂದ ಅದಕ್ಕೆ ತಡೆ ಮಾಡಬೇಕು ಎಂದು ಮೂರನೇ ಎರಡು ಭಾಗ ಇಟ್ಟಿದ್ದೇನೆ.

ಶ್ರೀ ಬಿ.ಹೆಚ್. ಬನ್ನಿಕೋಡ್ : ಅದೇ ವಿಚಾರ ಜಿಲ್ಲಾ ಪರಿಷತ್ತಿನಲ್ಲೂ ಆಗುವುದಿಲ್ಲವೇ?

ಶ್ರೀ ಎಸ್. ಎಚ್. ಕೌಜಲಗಿ : ಅಲ್ಲೂ ಅದೇ ಆಗುತ್ತದೆ.

SRI . D.B.CHANDRE GOWDA : No. the mischief is not complete.

ಇಲ್ಲಿ ಮತ್ತಷ್ಟು ತಾವು ನೋಡಬೇಕು. ಎಷ್ಟು ದೂರಕ್ಕೆ ಪೊಲಿಟಿಕಲ್ ಮಿಸ್‌ಚೀಫ್ ಎಂದು ನೋಡಬೇಕು. ಇಲ್ಲಿ ರಾಜಕೀಯ ದುರುದ್ದೇಶ ಎಲ್ಲಿಯವರೆಗೆ ಹೋಗಿದೆ ಎಂದರೆ ಮೊದಲನೆಯದು ಹೇಗಾದರೂ ಮಾಡಿ ಈಗಿರತಕ್ಕ ಜಿಲ್ಲಾಪರಿಷತ್ತುಗಳನ್ನು ಕಾಂಗ್ರೆಸ್ ವಶಕ್ಕೆ ತೆಗೆದುಕೊಳ್ಳಬೇಕು. ಅದಕ್ಕೆ ಏನೇನು ಮಾಡಬೇಕು? ನಾನು ಒಂದು ವಿಚಾರವನ್ನು ಮಾನ್ಯ ಸದಸ್ಯರ ಗಮನಕ್ಕೆ ತರುವುದಕ್ಕ ಇಚ್ಛೆಪಡುತ್ತೇನೆ. 139ರಲ್ಲಿ ಏನು ಮಾಡಿದ್ದಾರೆ? ಬಹುಮುಖ್ಯವಾಗಿ

ಶ್ರೀ ಜಿ.ಎಸ್. ಶಿವನಂಜಪ್ಪ : ಅಧ್ಯಕ್ಷರೆ, ನಮ್ಮ ತುಮಕೂರು ಜಿಲ್ಲಾ ಪರಿಷತ್ತಿನಲ್ಲಿ ವಿಚಿತ್ರ ಏನಾಗಿದೆ ಎಂದರೆ 46 ಜನ ಕಾಂಗ್ರೆಸ್ಸಿನವರಿದ್ದೇವೆ.. 24 ಜನ ಜನತಾ ದಳದವರು. ಒಬ್ಬರೋ ಇಬ್ಬರೋ ಇಂಡಿಪೆಂಡೆಂಟ್ ಇದ್ದಾರೆ. ಒಂದೂ ಕೆಲಸ ಮಾಡುವುದಕ್ಕಾಗುತ್ತಿಲ್ಲ, ಅಲ್ಲಿ ಈಗಿನ ಕಾನೂನು ಪ್ರಕಾರ. ಅದಕ್ಕೆ ಏನುಮಾಡಬೇಕು ಎಂಬ ಬಗ್ಗೆ ಒಂದು ಸಲಹೆ ಕೊಡುತ್ತೀರಾ?

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೇ ...

ಶ್ರೀ ಎಸ್.ಹೆಚ್. ಕೌಜಲಗಿ : ಚಂದ್ರೇಗೌಡರನ್ನು ಮಂತ್ರಿ ಮಾಡಿ ಆಮೇಲೆ ತಾವು ಕೇಳಿ, ಆದರೆ ಇವತ್ತು ಬಸಲಿಂಗಪ್ಪನವರು ಮಂತ್ರಿಗಳಿದ್ದಾರೆ.

(ಗೊಂದಲ)

ಶ್ರೀ ಬಿ.ಹೆಚ್. ಬನ್ನಿಕೋಡ್ : ಈ ತಿದ್ದುಪಡಿ ತರುವುದಕ್ಕಿಂತಲೂ ಒಂದೇ ಮಾತಿನಲ್ಲಿ ಹೇಳಬೇಕಾಗಿತ್ತು. ಜನತಾದಳದವರು ಅಧಿಕಾರದಲ್ಲಿ ಇರತಕ್ಕ ಎಲ್ಲಾ 9 ಜಿಲ್ಲಾ ಪರಿಷತ್ತುಗಳನ್ನು ತೆಗೆದುಹಾಕುತ್ತೇವೆಂದು ಒಂದು ಮಾತಿನಲ್ಲಿ ಹೇಳಿದ್ದರೆ ಈ ತಿದ್ದುಪಡಿಗಳ ಅವಶ್ಯಕತೆ ಇರಲಿಲ್ಲ. ಇದೇ ರಾಜಕೀಯ ದುರುದ್ದೇಶ ಎಂದು ಹೇಳುತ್ತಿದ್ದೇವೆ.

(ಗೊಂದಲ)

ಶ್ರೀ ಆರ್.ಎನ್. ನಾಯಕ್ : ನಮ್ಮ ಸರ್ಕಾರ ನಿಮ್ಮನ್ನು ತೆಗೆದುಹಾಕಿಲ್ಲ. ಅದೇ ನಮ್ಮ ತಪ್ಪು.

ಶ್ರೀ ಡಿ.ಬಿ. ಚಂದ್ರೇಗೌಡ : ನಾನು ಈ ಮಸೂದೆಯನ್ನು ಒಂದು ರೀತಿಯ ಪ್ರಾಂಜಲ ಮನಸ್ಸಿನಿಂದ ನೋಡುತ್ತಿದ್ದೇನೆ. ಅದಕ್ಕಾಗಿಯೇ 139ನೇ ನಿಯಮದಲ್ಲಿ ಏನು ತಿದ್ದುಪಡಿ ತಂದಿದ್ದಾರೆಂದು ನಾನು ಹೇಳಿದೆ. ಶಿವನಂಜಪ್ಪನವರು, ಹೇಳಿದರಲ್ಲಾ, ಅವರಲ್ಲಿ ಒಂದು ಪ್ರಶ್ನೆ ನಾನು ಕೇಳಬೇಕು. ನಿಮ್ಮ ಭಾಷಣದಲ್ಲಿ ಇದಕ್ಕೆ ಉತ್ತರ ಏನು?

ಶ್ರೀ ಜಿ.ಎಸ್. ಶಿವನಂಜಪ್ಪ : ತಾವು ಇಷ್ಟೊಂದು ಹಾರ್ಷ ಆಗುತ್ತೀರಿ ಎಂದು ನಾನು ತಿಳಿದುಕೊಂಡಿದ್ದರೆ ನಾನು ಹೇಳುತ್ತಲೇ ಇರಲಿಲ್ಲ. ತಾವು ಹಿರಿಯರಿದ್ದೀರಿ. ಈ ಮನೆಗೆ ತಾವು ಏನಾದರೂ ಮಾರ್ಗದರ್ಶನ ಮಾಡುತ್ತೀರಿ ಎಂದು ಹೇಳಿದೆ. ನಾವು ಈ ಬಗ್ಗೆ ಚರ್ಚೆ ಮಾಡಿದ್ದೇವೆ. ಮುಂದೆ ಇಲ್ಲಿ ಭಾಷಣ ಮಾಡುತ್ತೇವೆ. ನೀವೂ ನಾವೂ ಇಲ್ಲಿ ಕೂತು ಕಾನೂನು ಮಾಡುವಾಗ ಕೇವಲ ನಿಮ್ಮ ಧೋರಣೆ ಒಂದೇ ಕಡೆ ಇರಬಾರದು. ಈ ಕಡೆಯೂ ಇರಬೇಕೆಂದು ಹೇಳಿದೆ.

ಶ್ರೀ ಡಿ.ಬಿ. ಚಂದ್ರೇಗೌಡ : ನಾನೂ ಅದನ್ನೇ ಹೇಳುವುದಕ್ಕೆ ಹೊರಟಿದ್ದೆ. ನಾನು ಪೂರ್ತಿ ಹೇಳುವುದನ್ನು ಏತಕ್ಕೆ ಕೇಳಬಾರದು?

ಶ್ರೀ ಬಿ.ಹೆಚ್. ಬನ್ನಿಕೋಡ್ : ಜಂಟೀ ಸಲಹಾ ಸಮಿತಿಗೆ ಇದನ್ನು ಒಪ್ಪಿಸಿ ಎಂದು ನಮ್ಮ ನಾಯಕರು ಹೇಳಿದ್ದಾರೆ. ಅದರಲ್ಲಿ ಎಲ್ಲರೂಕೂತು ಚರ್ಚೆ ಮಾಡಿ ಒಳ್ಳೆಯ ಕಾನೂನು ತರೋಣ, ಎಂದು ಸಲಹೆ ಮಾಡಿದ್ದಾರೆ.

ಶ್ರೀ ಡಿ.ಬಿ. ಚಂದ್ರೇಗೌಡ : ನಮ್ಮ ಹಿರಿಯ ಶಾಸಕರಾದ ಶಿವನಂಜಪ್ಪನರರು ಒಂದು ಒಳ್ಳೆಯ ಪ್ರಶ್ನೆ ಕೇಳಿದ್ದಾರೆ. ಅಧ್ಯಕ್ಷ ಸ್ಥಾನದ ಬಗ್ಗೆ ವರ್ಷಕ್ಕೆ ಒಬ್ಬರು ಎಂದರೆ ಬೈ ರೊಟೇಶನ್ ಎಂದು ಇಟ್ಟಿದ್ದಾರೆ. ಈ ಬಗ್ಗೆ ನಾನು ಒಂದು ಪ್ರಶ್ನೆ ಕೇಳುತ್ತೇನೆ. ಇದರ ಬಗ್ಗೆ ಆಮೇಲೆ ದೀರ್ಘವಾದ ಚರ್ಚೆ ಮಾಡೋಣ. ಇವತ್ತು ಒಂದು ಜಿಲ್ಲಾಪರಿಷತ್ತಿನ ಅಧ್ಯಕ್ಷ ಸ್ಥಾನ. ಇವತ್ತು ನಾವು ಪಾರ್ಟಿ ಸಿಸ್ಟಮ್‌ನ್ನು ಅಳವಡಿಕೆ ಮಾಡಿಕೊಂಡಿದ್ದೇವೋ ಇಲ್ಲವೋ ? ಪಾರ್ಟಿಸಿಸ್ಟಮ್‌ನ್ನು ನಾವು ಅಳವಡಿಸಿಕೊಂಡಿದ್ದೇವೆ. ಈ ಪಾರ್ಟಿ ಸಿಸ್ಟಮ್ ವ್ಯವಸ್ಥೆಯಲ್ಲಿ ಒಂದು ವೇಳೆ ತುಮಕೂರು ಜಿಲ್ಲಾಪರಿಷತ್ತಿನಲ್ಲೇ ಒಬ್ಬ ಎಸ್.ಟಿ ಮೆಂಬರ್ ಜನತಾದಳದಿಂದ ಆಯ್ಕೆಯಾದ ಎಂದು ಇಟ್ಟುಕೊಳ್ಳೋಣ, ಉಳಿದಿರುವ 45 ಜನ ಕಾಂಗ್ರೆಸ್ ಪಕ್ಷದವರು ಮತ್ತು ಇತರೇ ಪಕ್ಷದವರು ಒಬ್ಬ ಎಸ್.ಟಿ ಮೆಂಬರ್‌ನ್ನು ಅಧ್ಯಕ್ಷನನ್ನಾಗಿ ಮಾಡುವುದಕ್ಕೆ

ಇಲ್ಲವೇ ಒಬ್ಬ ಜನತಾದಳದವನನ್ನು ಅಧ್ಯಕ್ಷನನ್ನಾಗಿ ಮಾಡುವುದಕ್ಕೆ ನೀವು ಒಪ್ಪಿಕೊಳ್ಳುತ್ತೀರೇನು ?

ಶ್ರೀ ಜಿ.ಎಸ್. ಶಿವನಂಜಪ್ಪ : ಮಾಡಿದ್ದೇವಲ್ಲಾ?

ಶ್ರೀ ಡಿ.ಬಿ. ಚಂದ್ರೇಗೌಡ : ಎಲ್ಲಿ? ಬಹುಮತವನ್ನೇ ಕಿತ್ತುಕೊಂಡಿರಿ. ನಿಮಗೆ ಇದು ಅರ್ಥವಾಗಲಿಲ್ಲ.

(ಗೊಂದಲ)

ಶ್ರೀ ಆರ್.ಎನ್. ನಾಯಕ್ : ನೀವು ಅಧಿಕಾರದಲ್ಲಿ ಇದ್ದಾಗ ಅವರಿಗೆ ನೀವು ಏನೂ ಮಾಡಿಲ್ಲ. ಸುಮ್ಮನೆ ಭಾಷಣ..

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ : ನಾಯಕರೇ, ನೀವು ರಾಜಕೀಯವಾಗಿ ವ್ಯಾಖ್ಯಾನ ಮಾಡುತ್ತಿದ್ದೀರಿ. ಇಂತಹ ಒಂದು ವಿಷಯ ಬಂದರೆ, ರಿಸರ್ವೇಷನ್ ಇದ್ದಾಗ ಪರಿಹಾರ ಏನು? Here, you are taking away 2 things.

ಒಂದು ನೀವು ಅಧ್ಯಕ್ಷನನ್ನು ಆಯ್ಕೆ ಮಾಡುವ ಅಧಿಕಾರ, ಇನ್‌ಹೆರೆಂಟ್ ರೈಟ್ ನಿಮಗೆ ಇದೆಯೋ ಅದು ಹೋಗುತ್ತದೆ. ಅಧ್ಯಕ್ಷರನ್ನು ಇಳಿಸುವುದಕ್ಕೆ ಬೇಕಾಗಿರತಕ್ಕ ಅಧಿಕಾರ ಇದೆಯಲ್ಲಾ, ಅದೂ ಸಹ ಹೋಗುತ್ತದೆ. ಇವೆರಡೂ ಸಹ ಹೋಗುತ್ತದೆ. ತಾವು ಆಲೋಚನೆ ಮಾಡಿ. ನಿಮಗೆ ಮೆಜಾರಿಟಿ ಇದೆ, ಪಾಸ್ ಮಾಡಿಕೊಳ್ಳಿ, ಆದರೆ ವಿಷಯ ಅದಲ್ಲ, The Dichotomy is, the power to elect the President is also taken away and the power to move the no-confidence motion is also taken away because you have reserved the post. This is the conflict.

ಆದುದರಿಂದ ಇವತ್ತು ಈ ಮೈನಾರಿಟಿ, ಮೆಜಾರಿಟಿ, ಎಂದು ಏನು ತರುತ್ತಿದ್ದೀರಿ, ಪ್ರತಿನಿತ್ಯ ಇದನ್ನು ಅನುಭವಿಸಬೇಕಾಗುತ್ತದೆ. ಇದನ್ನು ಜ್ಞಾಪಕದಲ್ಲಿಟ್ಟುಕೊಳ್ಳಿ. ಇದರಲ್ಲಿ ಇರುವ ಮಿಶ್ಚೀಫ್ ಏನು ಎಂದು ನಾವು ಹೇಳಬೇಕಾಗುತ್ತದೆ. 139ರಲ್ಲಿ ಕೌನ್ಸಿಲ್ ಮೆಂಬರ್ಸ್‌ನ್ನು ಸದಸ್ಯರನ್ನಾಗಿ ಮಾಡಿದ್ದೇವೆ. ಹೆಚ್ಚು ಜನ ಜನತಾದಳದವರು ಇದರಲ್ಲಿ ಇದ್ದಾರೆ, ಆದ್ದರಿಂದ ಇವರನ್ನು ತೆಗೆಯುವುದು ಹೇಗೆ? ಅದಕ್ಕೆ 139 ಪ್ರೊವೈಡ್ ಮಾಡುತ್ತದೆ.

"Subject to the provisions of clause (b), the members of the State Legislative Assembly and the State Legislative Council and members of Parliment representing a part or whole of the district whose constituencies lie within the jurisdiction of the Zilla Parishad and the members of the State Legislative Council not elected from territorial constituencies and ordinarily resident in the District shall be entitled to take part in the proceedings of and to vote the meetings of the Zilla Parishad", ಅಮೆಂಡೆಡ್ ಸೆಕ್ಷನ್‌ನಲ್ಲಿ ಏನಾಗುತ್ತದೆ, ಇದನ್ನು ತೆಗೆದು ಬಿಟ್ಟಿದೆ, you have brought it as follows.

"Subject to the provisions of clause (b), the members of the State Legislative Assembly and the Members of the House of the people representing a part or whole of the district, whose constituencies lie within the jurisdiction of the Zilla Panchayat Abhivruddi Samithi, and the members of the Council

of States and the Legislative Council who are ordinarily residents in the districts shall be ex-officio members and are entitled to take part in the proceedings and vote at the meetings of the Zilla Panchayat Abhivruddhi Samithi" ಇಲ್ಲಿ ಲಿಜಿಸ್ಲೇಟೀವ್ ಕೌನ್ಸಿಲ್ ಅನ್ನುಬಿಟ್ಟರು ಟೆರಿಟೋರಿಯಲ್ ಕಾನ್‌ಸ್ಟಿಟ್ಯೂಷನ್ನಿನಿಂದ ಬರತಕ್ಕಂತಹ ರೆಪ್ರಸೆಂಟೇಟಿವ್ಸ್ ಏನಿದ್ದಾನೆ, ಅಲ್ಲಿ ಕೌನ್ಸಿಲ್ ಅನ್ನು ಕಿತ್ತು ಹಾಕಿರುವುದು. ಕಿತ್ತು ಹಾಕಿ ಏನು ಹೇಳಿದಿರಿ, ರಾಜ್ಯಸಭೆಯವರಿಗೆ ಮತದಾನದ ಹಕ್ಕು ಇರಲಿಲ್ಲ. ಈಗ ಮತದಾನದ ಹಕ್ಕನ್ನು ತಂದಿರಿ. ಲೋಕ ಸಭಾ ಸದಸ್ಯರು ಇರಬಹುದು ವಿಧಾನ ಸಭಾ ಸದಸ್ಯರು ಇರಬಹುದು ರಾಜ್ಯಸಭಾ ಒಂದನ್ನು ಏಕೆ ಹೊರಗಿಟ್ಟಿದ್ದೀರಿ, ಇದನ್ನೂ ಸೇರಿಸಿದ್ದೀರಿ. ಸಂತೋಷ. 'Members of the Council of States and the Legislative Council who are ordinarily residents of the District.' This is what you have said. While omiting the territorial constituency you have brought in ordinary resident. This is another mischief.

ಕೌನ್ಸಿಲ್ ಸದಸ್ಯರಿಗೆ ಮತದಾನದ ಹಕ್ಕು ಇರಬಾರದು ಎಂದು ಹೇಳುತ್ತಾರೆ. ಇದರ ಬಗ್ಗೆ ನಾವು ವಿಚಾರ ಮಾಡಬೇಕಾಗುತ್ತದೆ. ಕೆಲವು ಜಿಲ್ಲಾ ಪರಿಷತ್ತುಗಳಲ್ಲಿ ಇವತ್ತಿಗೂ ನಮ್ಮ ಕೌನ್ಸಿಲ್ ಸದಸ್ಯರ ಒಂದು ಬಲದಿಂದ ಇನ್ನೂ ಕೆಲವು ದಿವಸ ಉಳಿಯಬಹುದು. ಆದರೆ ಅದು ಉಳಿಯಬಾರದು ಕಿತ್ತುಹಾಕಬೇಕು ಎಂದು ನಿಮ್ಮ ಉದ್ದೇಶವೇ ?

ಮೀಸಲಾತಿಯ ಬಗ್ಗೆ ಬಹಳ ಮಾತುಗಳನ್ನು ನಾವೆಲ್ಲರೂ ಮಾಡಿದ್ದೇವೆ. ಎಲ್ಲಾ ಪಕ್ಷದವರೂ ಆಡಿದ್ದಾರೆ. ನನ್ನ ಪಕ್ಷ ಏನು ಹೇಳುತ್ತದೆಂಬುದನ್ನು ಮೊದಲು ಹೇಳಿ ನಂತರ ಉಳಿದ ಪಕ್ಷಗಳ ವ್ಯಾಖ್ಯೆಗೆ ಹೋಗುತ್ತೇನೆ. ನನ್ನ ಪಕ್ಷದ ರಿಸರ್ವೇಷನ್ಸ್ ಬಗ್ಗೆ ಕೊಟ್ಟ ಭರವಸೆಗಳು, ಗ್ರಾಮ ಸ್ವರಾಜ್ಯಕ್ಕೆ ದಾಪುಗಾಲು. ಪ್ರಜಾಪ್ರಭುತ್ವವನ್ನು ಪಡೆದಿರತಕ್ಕಂತಹ ನಮ್ಮ ದೇಶದಲ್ಲಿ ಅವಶ್ಯಕವಾಗಿ ಹಾಗೂ ಸಕ್ರಿಯವಾಗಿ ಗ್ರಾಮೀಣ ಜನರು ರಾಜ್ಯದ ಆಡಳಿತದಲ್ಲಿ ಪಾಲುಗೊಳ್ಳಬೇಕು. ಈ ತತ್ವವನ್ನು ಆಡಳಿತದ ವಿಕೇಂದ್ರಿಕರಣವನ್ನು ರಾಜ್ಯದಲ್ಲಿಯೇ ಪ್ರಪ್ರಥಮವಾಗಿ ಜಾರಿಗೆ ತಂದೆವು. ಇದರ ಪರಿಣಾಮವಾಗಿ ತಮಗೆ ಗೊತ್ತಿರುವ ಹಾಗೆ ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯತಿಗಳು ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿವೆ. ಭರವಸೆ ಪಂಚಾಯತ್ ರಾಜ್ ವ್ಯವಸ್ಥೆ ಪ್ರಥಮ ಹಂತದ ಕಾರ್ಯ ಮುಗಿದಿದ್ದು ಸಾಮಾಜಿಕ ನ್ಯಾಯವನ್ನು ಈ ವ್ಯವಸ್ಥೆಯಲ್ಲಿ ಸರಿದೂಗಿಸಲು ಶೇಕಡಾ 60 ಸ್ಥಾನಗಳನ್ನು ಹಿಂದುಳಿದ ವರ್ಗಗಳು, ಅಲ್ಪಸಂಖ್ಯಾತರು, ಮಹಿಳೆಯರು ಹಾಗೂ ಪರಿಶಿಷ್ಟ ವರ್ಗಗಳಿಗೆ ಮೀಸಲಿಡುವ ಕ್ರಾಂತಿಕಾರಿ ನೀತಿಯನ್ನು ಅನುಸರಿಸುತ್ತೇವೆ. ಹಾಗೂ ರಾಜ್ಯ ಸರಕಾರದ ಅರ್ಧದಷ್ಟು ಸಂಪನ್ಮೂಲವನ್ನು ಪಂಚಾಯತ್ ರಾಜ್ಯ ಸಂಸ್ಥೆಗಳಿಗೆ ಕೊಡಲು ಭರವಸೆ ಮಾಡುತ್ತೇವೆ. ಜನತಾ ದಳದಲ್ಲಿ ನಾನು ಕೂತು ಚರ್ಚೆ ಮಾಡುವಾಗ ನನ್ನ ಕಮಿಟ್‌ಮೆಂಟ್ ಏನು ಇದೆ ಭರವಸೆ ಕೊಡುತ್ತೇನೆ. ಜೊತೆಗೆ ರಾಜ್ಯದ ಒಟ್ಟಾರೆ ಆಯವ್ಯಯದ ಅರ್ಧದಷ್ಟನ್ನು ಗ್ರಾಮೀಣ ಜನತೆಗೆ ಮೀಸಲಿಡುತ್ತೇವೆನ್ನುವಂತಹ ಮಾತನ್ನು ಇಲ್ಲಿ ಹೇಳಿದ್ದೇವೆ. ಆದರೆ ಇಲ್ಲಿ ಮೀಸಲಾತಿ ಹೆಸರಿನಲ್ಲಿ ಒಂದು ದೊಡ್ಡ ರಾಜಕೀಯ ನಾಟಕವನ್ನು ಆಡಿದ್ದೇವೆ. ಏನು ಮಾಡಿದ್ದೀರಿ ನೀವು ಎಂದು ಮಾನ್ಯ ನಾಯಕರು ಕೇಳುತ್ತಿದ್ದಾರೆ. ಇದಕ್ಕೆ ಒಂದು ಉದಾಹರಣೆ ಕೊಡುತ್ತೇನೆ. ಮಂಗಳೂರು ಜಿಲ್ಲಾ ಪರಿಷತ್ತಿನಲ್ಲಿ 59 ಜನ ಸದಸ್ಯರಿದ್ದಾರೆ. ಅಲ್ಲಿ ಅಘೋಷಿತವಾಗಿರತಕ್ಕಂತಹ ಮೀಸಲಾತಿ

ಇದೆ. ಆದರೆ ಅದು ಘೋಷಣೆಯಾಗಿಲ್ಲ. 59ರಲ್ಲಿ 33 ಜನ ಸದಸ್ಯರು ಹಿಂದುಳಿದ ವರ್ಗಕ್ಕೆ ಸೇರಿದವರು. ಇದನ್ನೇ ಅಘೋಷಿತ ಮೀಸಲಾತಿ ಎಂದು ಹೇಳುತ್ತೇವೆ. ನೀವು ಘೋಷಿತ ಮೀಸಲಾತಿಯಿಂದ ಎಷ್ಟು ಜನರನ್ನು ತರುತ್ತೀರಿ ಎಂಬುದನ್ನು ನಾವೂ ನೋಡುತ್ತೇವೆ. ಇದನ್ನು 50-55 ಕ್ಕೆ ಇಳಿಸುತ್ತೀರಿ. ಈಗ ಮಾಡಿರತಕ್ಕಂಥಾದ್ದಕ್ಕೆ ಮತ್ತೆ ಎಷ್ಟು ಅಮೆಂಡ್‌ಮೆಂಟ್ ಬರುತ್ತದೆಂಬುದನ್ನು ಕಾದು ನೋಡಬೇಕು. ಈಗ ಇಟ್ಟಿರತಕ್ಕಂತಹ ಮೀಸಲಾತಿಯನ್ನು ಶಾಸನದ ಒಳಗೆ ಅಳವಡಿಸತಕ್ಕಂತಹ ಪ್ರಯತ್ನ ನಡೆದಿಲ್ಲ. ಸರಕಾರದ ಮುಂದೆ ಮಾಡತಕ್ಕಂತಹ ನಿರ್ಣಯದ ಮೇಲೆ ಒಂದು ತೂಗು ಕತ್ತಿಯನ್ನು ಹೆಗಲ ಮೇಲೆ ಇಡುವಂತಹ ಪ್ರಯತ್ನ ಈಗ ನಡೆದಿದೆ.

ಶ್ರೀ ಪಿ. ಬಸವರಾಜ್ : ಮಂಗಳೂರು ಜಿಲ್ಲಾ ಪರಿಷತ್ತು ಕಾಂಗ್ರೆಸ್ ಪಕ್ಷದವರು ಆಡಳಿತದಲ್ಲಿರುವಂಥಾ ಜಿಲ್ಲಾ ಪರಿಷತ್.

ಶ್ರೀ ಡಿ.ಬಿ. ಚಂದ್ರೇಗೌಡ : ಆಗಲಿ ಸ್ವಾಮಿ, ಆ ಕಿರೀಟ ನೀವೇ ಇಟ್ಟುಕೊಳ್ಳಿ. ಬೇರೆ ಬೇರೆ ಜಿಲ್ಲೆಗಳದ್ದನ್ನು ಸಹ ಬೇಕಾದರೆ ಪ್ರಸ್ತಾಪ ಮಾಡುತ್ತೇನೆ. ಆದರೆ ಪ್ರಶ್ನೆ ಅದಲ್ಲ.

ಶ್ರೀ ಜಿ.ಎಸ್. ಶಿವನಂಜಪ್ಪ : ಇಲ್ಲಿ ಒಂದು ಪ್ರಶ್ನೆ, ತುಮಕೂರು ಜಿಲ್ಲೆಯಲ್ಲಿ 27 ಪರ್ಸೆಂಟ್ ಹಿಂದುಳಿದ ಜನಾಂಗ ಎಂದು ಜನಗಣತಿಯಲ್ಲಿ ಬಂದಿದೆ. ನೀವು 60 ಪರ್ಸೆಂಟ್ ಕೊಡುತ್ತೇವೆಂದು ಹೇಳುತ್ತೀರಿ. ಎಲ್ಲಿಂದ ತಂದು ಕೊಡುತ್ತೀರಿ? ಅಲ್ಲಿ ಇರುವುದೇ 27 ಪರ್ಸೆಂಟ್

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಸದಸ್ಯರು ಬಹಳ ಒಳ್ಳೆಯ ಪ್ರಶ್ನೆ ಕೇಳಿದ್ದಾರೆ ನಾವೇನು ಮಾಡಿದ್ದೇವೆಂದರೆ, ಈ ಒಂದು ರಿಸರ್ವೇಶನ್ ವ್ಯಾಪ್ತಿ ಮಂಡಲ್ ಕಮೀಷನ್ ವರದಿ ರಾಷ್ಟ್ರಕ್ಕೆ ಸೀಮಿತವಾದುದು. ಚಿನ್ನಪ್ಪರೆಡ್ಡಿಯವರ ಕಮೀಷನ್ ವರದಿ ರಾಜ್ಯಕ್ಕೆ ಸೀಮಿತವಾದುದು. ನೀವು ಈಗ ತರತಕ್ಕ ಮೀಸಲಾತಿ ಮಂಡಲಕ್ಕೆ ಸೀಮಿತವಾದದ್ದು. ಈ ಸೀಮಿತಗಳನ್ನು ದಯಮಾಡಿ ಅರ್ಥಮಾಡಿಕೊಳ್ಳಿ. ನಿಮಗೆ ಅರ್ಥವಾಗದಿದ್ದರೆ ತಿಳಿಯುವುದು ಬಹಳ ಕಷ್ಟ. ಯಾವಾಗ ನೀವು...

ಶ್ರೀ ಜಿ.ಎಸ್. ಶಿವನಂಜಪ್ಪ : ನೀವು ರಾಜಕಾರಣ ಮಾಡುತ್ತೀರಿ ಎಂದು ನನಗೆ ಅರ್ಥವಾಗಿದೆ. ಡೀಲಿಮಿಟೇಶನ್ ಮಾಡಿ ಆಯಾಯ ಕ್ಷೇತ್ರದಲ್ಲಿ ಎಷ್ಟೆಷ್ಟು ಬರುತ್ತದೆ, ಅಷ್ಟು ರಿಸರ್ವೇಶನ್ ಮಾಡಬೇಕೆಂದು ನಾವು ಮಾಡಿದ್ದೇವೆ. ಇದರಲ್ಲಿ ನೀವು ರಾಜಕೀಯ ಮಾಡಿದರೆ ಏನು ಮಾಡುವುದು?

ಶ್ರೀ ಡಿ.ಬಿ. ಚಂದ್ರೇಗೌಡ : ಹಾಗೆಂದು ಎಲ್ಲಿ ಮಾಡಿದ್ದೀರಿ.

ಶ್ರೀ ಜಿ.ಎಸ್. ಶಿವನಂಜಪ್ಪ : ನೀವು ರಾಜಕೀಯ ಮಾಡಿದರೆ ಏನು ಮಾಡಬೇಕು? ಅದು ಇದೆಯಲ್ಲ, ನೀವು ನೋಡದಿದ್ದರೆ ನಾನೇನು ಮಾಡಲಿ?

ಶ್ರೀ ಡಿ.ಬಿ. ಚಂದ್ರೇಗೌಡ : ಯಾವ ಸೆಕ್ಷನ್ ತೋರಿಸಿ?

ಶ್ರೀ ಜಿ.ಎಸ್. ಶಿವನಂಜಪ್ಪ : ತೆಗೆದು ನೋಡಿ.

ಶ್ರೀ ಬಿ.ಹೆಚ್. ಬನ್ನಿಕೋಡ್ : ಎಲ್ಲಿಯಾದರೂ ಇದ್ದರೆ ಹೇಳಿ. ನಾವು ನೋಡೇ ಇಲ್ಲ.

SRI D.B. CHANDREGOWDA : The concept of reservation that my party is committed, we did not go back.

ಶ್ರೀ ಜಿ.ಎಸ್. ಶಿವನಂಜಪ್ಪ : ಓದದಿದ್ದರೆ ಅದು ನಿಮ್ಮ ಕರ್ಮ.

ಶ್ರೀ ಡಿ.ಬಿ. ಚಂದ್ರೇಗೌಡ : ಅಘೋಷಿತ ಮೀಸಲಾತಿ ಇದೆ ಎಂಬುದನ್ನು ಸಭೆಯ ಗಮನಕ್ಕೆ ಹಾಗೂ ಮಾನ್ಯ ಮಂತ್ರಿಗಳ ಗಮನಕ್ಕೆ ತಮ್ಮ ಮುಖಾಂತರ ತರುತ್ತಿದ್ದೇನೆ. ಇಲ್ಲಿರತಕ್ಕ ಮೀಸಲಾತಿಯನ್ನು ಯಾವರೀತಿ ಮಾಡಬೇಕು, ಅದರ ಪ್ರಯೋಜನ ಅವರಿಗೆ ಬೇಕಾದರೆ ಯಾವರೀತಿ ಒಂದು ನೀತಿ ನಿರೂಪಣೆ ಮಾಡಬೇಕಾಗುತ್ತದೆ ಎಂಬುದನ್ನು ಕೂತು ಚರ್ಚೆ ಮಾಡೋಣವೆಂದು ಒಂದು ಸಾರಿ 50 ಪರ್ಸೆಂಟ್ ಎಂದು ಹಾಕುವುದು ಮತ್ತೆ ಅದನ್ನು ತಿದ್ದುಪಡಿ ಮಾಡಿ ಕಿತ್ತುಹಾಕಿ ಅದನ್ನು ಸರ್ಕಾರ ತೆಗೆದುಕೊಂಡಿದೆಯೆಂದು ಹೇಳುವುದು this is a vital question. ಆದ್ದರಿಂದ...

ಶ್ರೀ ಎಲ್.ಆರ್. ಶಿವರಾಮೇಗೌಡ : ಡೀಲಿಮಿಟೇಶನ್ ವಿಚಾರ ಹೇಳುತ್ತಿದ್ದೀರಿ, ಈಗ ಅದನ್ನು ಚೇಂಜ್ ಮಾಡಬೇಕೆಂದು ಹೊರಟಿದ್ದಾರೆ. ಹಿಂದೆ ನಿಮ್ಮ ಕಾಲದಲ್ಲಿ ಎಲ್ಲಿ ಬ್ಯಾಕ್‌ವರ್ ಕ್ಲಾಸ್ ಜನರು ಬರುತ್ತಾರೆ ಅಲ್ಲಿ ಅದಕ್ಕನುಗುಣವಾಗಿ ಮಾಡಬೇಕೆಂದು ಕಾನೂನಿನಲ್ಲಿ ಅಳವಡಿಸಿಕೊಂಡಿದ್ದಾರೆ. ಹಿಂದೆ ಮಾಡುವಾಗ, ಇಲ್ಲಿ ತಿಮ್ಮನಹಳ್ಳಿ ಇದ್ದರೆ, ಯಾರು ಅವರಿಗೆ ಓಟು ಕೊಡುವುದಿಲ್ಲ ಅಂತಹ ಊರುಗಳನ್ನು ಬಿಟ್ಟು ಅವರಿಗೆ ಬೇಕಾದ ಊರುಗಳನ್ನು ಹಾಕಿಕೊಂಡಿರುವುದು ಇದೆ. ಅದನ್ನು ಸರಿಪಡಿಸುವುದಕ್ಕೆ ಈಗ ತಿದ್ದುಪಡಿಯನ್ನು ಮಾಡಿದ್ದೇವೆ.

ಶ್ರೀ ಡಿ.ಬಿ. ಚಂದ್ರೇಗೌಡ : ಇವರಿಗೆ ಏನು ಹೇಳಬೇಕೋ ನನಗೆ ಗೊತ್ತಾಗುತ್ತಿಲ್ಲ. ಅವರಿಗೆ ಏನಾಗಿದೆ ಅಂದರೆ, ನಾನೇನು ಬೇರೆ ಹೇಳುವುದಕ್ಕೆ ಹೋಗುವುದಿಲ್ಲ, ನಿಮ್ಮ ಸಂವಿಧಾನ ಏನು ಹೇಳಿದೆ ಎನ್ನುವುದನ್ನು ಹೇಳಿಬಿಟ್ಟು, ನಿಮ್ಮ ಪ್ರಣಾಳಿಕೆ 1989-90ರಲ್ಲಿ ಏನು ಹೇಳಿದೆ? ನಿಮ್ಮ ಪ್ರಣಾಳಿಕೆ ಏನು ಹೇಳಿದೆ ಅದನ್ನು ಹೇಳುವುದಕ್ಕೆ ಮುಂಚೆ ಹಿಂದೆ ಇಲ್ಲಿ ಮುಖ್ಯಮಂತ್ರಿಗಳಾಗಿದ್ದ ವೀರೇಂದ್ರ ಪಾಟೀಲರು ಅಪ್ಪಣೆ ಕೊಡಿಸಿದ್ದರು, ನನ್ನ ಪ್ರಣಾಳಿಕೆ ನನಗೆ ಬೈಬಲ್, ನನ್ನ ಪ್ರಣಾಳಿಕೆ ನನಗೆ ಖುರಾನ್. ನನ್ನ ಪ್ರಣಾಳಿಕೆ ನನಗೆ ಭಗವದ್ಗೀತೆ. ಆದ್ದರಿಂದ ನಾನು ನನ್ನ ಪ್ರಣಾಳಿಕೆಯ ವ್ಯಾಪ್ತಿಯನ್ನು ಮೀರಿ ನಾನು ಹೋಗುವುದಿಲ್ಲವೆಂದು ಹೇಳಿದ್ದಾರೆ. ಆದ್ದರಿಂದ ನಿಮ್ಮ ಪ್ರಣಾಳಿಕೆಯಲ್ಲಿ ಏನು ಹೇಳಿದೆ ಅದನ್ನು ನೋಡೋಣ. ಸಂವಿಧಾನದ 64ನೇ ತಿದ್ದುಪಡಿ ಬಗ್ಗೆ ನಾವು ಚರ್ಚೆಮಾಡಿದ್ದೇವೆ. ಇವರ ಪ್ರಣಾಳಿಕೆಯಲ್ಲಿ ಏನು ಹೇಳುತ್ತಾರೆಂದರೆ ಅದು ಆ ರೀತಿ ಇದೆ.

"Under the dynamic leadership of Sri Rajiv Gandhi, the Congress has taken this decisive step to accord Constitutional status to Panchayati raj institutions in the countryside and to Nagarpalikas in the rapidly growing urban settlements. This is not a mere legal and Constitutional exercise. In a profound political sense, it is the completion of the democratic structure of India. It is a measure that will unleash the creative energies of our talented people at all levels by trans ferring to them control over their own destiny".

ನಿಮ್ಮ ಭವಿಷ್ಯವನ್ನು ನೀವೇ ರೂಪಿಸಿಕೊಳ್ಳುವುದಕ್ಕೆ ನಿಮಗೆ ಈ ಅಧಿಕಾರವನ್ನು ಪರಿಪೂರ್ಣವಾಗಿ ಕೊಡತಕ್ಕಂಥ ತೀರ್ಮಾನವನ್ನು ಮಾಡಿದ್ದೇವೆ. ನನ್ನದು ಅಲ್ಲ, ನಿಮ್ಮದೂ ಅಲ್ಲ. ಅವರದ್ದು, ಈಗ ನಿಮ್ಮದು ಎಂದು ಹೇಳುತ್ತೀರಿ. ಆಮೇಲೆ. ಮತ್ತೊಂದು...

"They would have involve the people directly in planning, for development and in the implementation of the development projects. They would have stopped the practice of planning from above and started a process of planning from the grossroots."

This is the basis of the Panchayati raj system. The planning process should take from the grossroots and not from Vidhana Soudha or from Delhi.

ಇಲ್ಲಿ ಪುನಃ ಅಧಿಕಾರವನ್ನು ತೆಗೆದುಕೊಂಡಿದ್ದೀರಿ.

This is your Constitution and not mine.

"The common people of India no longer have needed to use the intermediation of power-brokers to reach centres of authority in State capitals and the national capital. The Solution to their everyday problems would have been found at a distance not farther than the panchayat ghar or the local ward office of the Nagarpalika."

ಅವರ ಸಮಸ್ಯೆಗಳ ಪರಿಹಾರವನ್ನು ಎಲ್ಲಿ ಪಂಚಾಯತ್ ರಾಜ್ ಮನೆಯಿದೆಯಲ್ಲ, ಆ ಮನೆಯೊಳಗೆ ಪರಿಹಾರ ಮಾಡಿಕೊಳ್ಳಬೇಕು. ಈಗ ಪುನಃ ತಮ್ಮ ಅಸ್ಥಾನಕ್ಕೆ ಅರ್ಜಿ ತೆಗೆದುಕೊಂಡು ಬರುವಂಥ ವ್ಯವಸ್ಥೆ ಮಾಡಿದ್ದೀರಿ. ಇದನ್ನೇ ಬೇಕಾದರೆ ಇನ್ನೊಂದು ಸಲ ಹೇಳುತ್ತೇನೆ.

ಶ್ರೀ ಎಲ್.ಆರ್. ಶಿವರಾಮೇಗೌಡ : ಕೇಂದ್ರಸರ್ಕಾರದಲ್ಲಿ ರಾಜೀವ್ ಗಾಂಧಿಯವರು ತಂದರಲ್ಲ. ಆಗ ಲೋಕಸಭೆಯಲ್ಲಿ ಪಾಸ್ ಆಗಿದ್ದನ್ನು ರಾಜ್ಯಸಭೆಯಲ್ಲಿ ಕೆಡವಿದಿರಲ್ಲ, ಅದಕ್ಕೇನು ಹೇಳುತ್ತೀರಿ?

ಶ್ರೀ ಡಿ.ಬಿ. ಚಂದ್ರೇಗೌಡ : ಒಬ್ಬೊಬ್ಬರು ಒಂದೊಂದು ಸಲ ಶಾಸನಸಭೆಗೆ ಆರಿಸಿ ಬರುತ್ತಾರೆ. ಪ್ರತಿಯೊಬ್ಬರಿಗೆ ನಾನು ಉತ್ತರ ಹೇಳುವುದಕ್ಕೆ ಆಗುವುದಿಲ್ಲ.

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ : ದಯವಿಟ್ಟು ನನ್ನ ಭಾಷಣವನ್ನು ಓದಿ. Regarding 64th amendment bill, I have made my position very clear on that point.

"The Congress affirms before the people of India its pledge to bring back to Parliament the Panchayati raj and Nagarapalika Bills which will usher in the most significant systematic transformation in the country polity. Since the Constitution was brought into force 40 years ago, and involve the people in the development process thus accelerating growth for all."

83ರಲ್ಲಿ ನಾವು ಕೊಟ್ಟಂಥ ಪರಿಪೂರ್ಣ ಅಧಿಕಾರವನ್ನು ಪ್ಲಾನಿಂಗ್, ಡೆವಲಪ್‌ಮೆಂಟ್ ಇಂಪ್ಲಿಮೆಂಟೇಶನ್ ಎಲ್ಲವನ್ನೂ ಕಿತ್ತುಕೊಂಡು ಈ ಅಧಿಕಾರವನ್ನು 174ರಲ್ಲಿ ಮತ್ತು 271ರಲ್ಲಿ ಎ ಯಿಂದ ಜೆವರೆಗೆ ಈ ಅಧಿಕಾರವನ್ನು ಎಕ್ಸಿಕ್ಯೂಟಿವ್ ಅಥಾರಿಟಿಗೆ ಕೊಟ್ಟು ಇದನ್ನು ಡಿಸೆಂಟ್ರಲೈಸೇಷನ್ ಅಂತ ಕರೆಯಿರಿ ಎಂದರೆ ಹೇಗೆ?

I would ask one simple question before I close. Whether it is fit in our system? Or whether it will fit in the Party's manifesto? Or whether it will

fit in the objectives as claimed by the Centre when the bill was introduced?"

ಇದು ಬೈಬಲ್, ಖುರಾನ್, ಭಗವದ್ಗೀತೆ ಆಗಿದ್ದರೆ, ಇದು ಭಗವದ್ಗೀತೆ ಎಂದು ಹೇಳಿಕೊಂಡು 89-90ರಲ್ಲಿ ಚುನಾವಣೆಯಲ್ಲಿ ಗೆದ್ದುಬಂದಿರಿ, ಇದು ಇಂಪ್ಲಿಮೆಂಟ್ ಮಾಡುವುದಕ್ಕೆ ಸಾಧ್ಯ ಆಗಿದೆಯೇ? ಈ ವ್ಯವಸ್ಥೆ ಇಲ್ಲಿದೆಯೇ? ಅಥವಾ ಯಾರನ್ನು ಪವರ್ ಬ್ರೋಕರ್ಸ್ ಎಂದು ಕರೆಯುತ್ತಿದ್ದೀರಿ, ಅವರಿಗೆ ಪುನಃ ಅಧಿಕಾರವನ್ನು ಕೊಡುತ್ತಿದ್ದೀರಿ ಎನ್ನತಕ್ಕಂಥ ಮಾತನ್ನು ಹೇಳಿ...

1.10 ಪಿ.ಎಂ.

ಶ್ರೀ ಕೆ.ಹೆಚ್. ಹನುಮೇಗೌಡ : ತಾವು ಇಷ್ಟೆಲ್ಲಾ ಹೇಳಿದ್ದೀರಿ. ಎಲ್ಲರೂ ಪ್ರಯತ್ನ ಮಾಡುತ್ತಿರುವುದು ಜನಗಳ ಹಿತದೃಷ್ಟಿಯಿಂದ; ಜನಗಳಿಗೆ ಒಳ್ಳೆಯದಾಗಲಿ ಎಂದು. ಎಲ್ಲಾ ಹೇಳುತ್ತಿರುವುದೂ ಜನಗಳಿಗೋಸ್ಕರ. ಜನ ಬೇಡ ಎನ್ನುವುದನ್ನು, ಜನ ವಿರೋಧ ಮಾಡುವುದನ್ನು, ಜನಗಳು ತಿರಸ್ಕಾರ ಮಾಡಿರುವುದನ್ನು ಇಲ್ಲಿ ಪದೇಪದೇ ಶಾಸನಸಭೆಯಲ್ಲಿ ಹೇಳುತ್ತಿರುವುದಕ್ಕೆ ಏನು ಅರ್ಥ ಇದೆ, ದಯಮಾಡಿ ಹೇಳಿ.

ಶ್ರೀ ಡಿ.ಬಿ. ಚಂದ್ರೇಗೌಡ : ಜನ ತಿರಸ್ಕಾರ ಮಾಡಿದ್ದಾರೆಂದು ಹೇಳುತ್ತಿದ್ದಾರೆ, ನಾನು ಅದಕ್ಕೆ ಹಿಂದಿನಸಾರಿ ಹೇಳಿದ್ದೇನೆ. ಜನರ ತಿರಸ್ಕಾರಕ್ಕೆ ನೀವು ಇಲ್ಲಿ ಏನೇನು ಹೇಳಿದ್ದೀರಿ; ನಿಮ್ಮ ರಾಜ್ಯದ ಚುನಾವಣಾ ಪ್ರಣಾಳಿಕೆಯಲ್ಲಿರುವುದನ್ನು ತೆಗೆದು ನೋಡಿ ಕರ್ನಾಟಕದಲ್ಲಿರತಕ್ಕ ಮಂಡಲ್ ಪಂಚಾಯ್ತಿಗಳನ್ನು ಬದಲಾಯಿಸುತ್ತೇವೆಂದು ಹೇಳಿದ್ದೀರಾ?

(ಗೊಂದಲ)

ಶ್ರೀ ಎಲ್.ಆರ್. ಶಿವರಾಮೇಗೌಡ : ಮಾನ್ಯ ಅಧ್ಯಕ್ಷರೇ..

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಶಿವರಾಮೇಗೌಡರು ಕಾಂಗ್ರೆಸ್ ಪಕ್ಷವನ್ನು ವಾಚಾಮಗೋಚರವಾಗಿ ಬೈಯ್ದು ಚುನಾವಣೆಯಲ್ಲಿ ಗೆದ್ದು ಬಂದು ಈಗ ಪುನಃ ಅದೇ ಪಕ್ಷವನ್ನು ಹೊಗಳುತ್ತಿದ್ದಾರೆ.

(ಗೊಂದಲ)

ಶ್ರೀ ಎಲ್.ಆರ್. ಶಿವರಾಮೇಗೌಡ : ಕಾಂಗ್ರೆಸ್ ಟಿಕೆಟ್ ಸಿಗುವುದಕ್ಕೆ ಮುಂಚೆ ನಾನು ಕಾಂಗ್ರೆಸ್‌ನಲ್ಲೇ ಇದ್ದೆ. ನಾನು ಕಾಂಗ್ರೆಸ್ ಸಿದ್ಧಾಂತವನ್ನು ಮೆಚ್ಚಿಕೊಂಡಿದ್ದೇನೆ. ಅದಕ್ಕೆ ಮತ್ತೆ ಕಾಂಗ್ರೆಸ್‌ಗೇ ಬಂದಿದ್ದೇನೆ. ಬರೀ ವಿತಂಡವಾದ ಮಾಡುವುದು ಬೇಡ, ಸರಿಯಾದ ವಾದ ಮಾಡಿ.

ಶ್ರೀ ಡಿ.ಬಿ. ಚಂದ್ರೇಗೌಡ : ಅವರು ಕಾಂಗ್ರೆಸ್‌ಗೆ ಬಂದಿದ್ದಾರೆ ಎಂದು ಹೇಳಿದ್ದು ರೆಕಾರ್ಡ್‌ನಲ್ಲಿ ಇರಲಿ..

ಶ್ರೀ ಎಲ್.ಆರ್. ಶಿವರಾಮೇಗೌಡ : ಇರಲಿ ಬಿಡಿ ಚಂದ್ರೇಗೌಡರೇ ಏನಾಗುತ್ತದೆ..

ಶ್ರೀ ಡಿ.ಬಿ. ಚಂದ್ರೇಗೌಡ : ಏನಾಗುತ್ತದೆಂದು ಹೇಳಿದರೆ, ನಾಳೆ ದಿವಸ ಸದಸ್ಯತ್ವ ಹೋಗುತ್ತದೆ..

ಶ್ರೀ ಎಲ್.ಆರ್. ಶಿವರಾಮೇಗೌಡ : ಕಾಂಗ್ರೆಸ್ ಸಹ ಸದಸ್ಯ ಎಂದು ನಾನು ಇಲ್ಲಿ ಘೋಷಣೆ ಮಾಡಿ ಬಂದಿದ್ದೇನೆ. ಇದರ ಬಗ್ಗೆ ಅನುಮಾನ ಬೇಡ.

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೇ, ಈ ಮಸೂದೆ ವಿಕೇಂದ್ರೀಕೃತ ವ್ಯವಸ್ಥೆಯ ಆಧಾರಸ್ತಂಭವಾಗಿರತಕ್ಕಂಥ 83ನೇ ತಿದ್ದುಪಡಿಯನ್ನು ವಿಕೃತಗೊಳಿಸುವಂಥ ಪ್ರಯತ್ನ ಕಾಂಗ್ರೆಸ್ ಪಕ್ಷ ಹೇಳಿರತಕ್ಕಂಥ, ತನ್ನದೇ ಆದ ಪ್ರಣಾಳಿಕೆಯ ವಿರುದ್ಧವಾಗಿರುವ ಒಂದು ತಿದ್ದುಪಡಿ. ಜೊತೆಗೆ. ಯಾವ ತಿದ್ದುಪಡಿಗಳನ್ನು ಇವರು ತಂದಿದ್ದಾರೆ, ಇವು ಪರಿಪೂರ್ಣವಾಗಿ ಚರ್ಚೆ ಎಲ್ಲಾ ಹಂತಗಳನ್ನೂ ಮೀರದೇ ಇರುವುದು. ಮತ್ತೆ ಇವುಗಳಿಗೆ ತಿದ್ದುಪಡಿ ತರತಕ್ಕ ಪ್ರಯತ್ನ ನೋಡಿದರೆ, ಇದರ ಬಗ್ಗೆ ಚರ್ಚೆ ಅಗತ್ಯ ಇದೆ ಎನ್ನತಕ್ಕಂಥ ವಾಸ್ತವಾಂಶ ಗಣನೆಗೆ ಬರುತ್ತದೆ. ಮತ್ತೆ ಕಾಂಗ್ರೆಸ್ ಪಕ್ಷ ತಂದಂಥ ರಾಜ್ಯಾಂಗದ 64ನೇ ತಿದ್ದುಪಡಿಗೆ ವಿರುದ್ಧವಾಗಿದೆ. ಆಗಿನ ಪ್ರಧಾನ ಮಂತ್ರಿಗಳಾದ ರಾಜೀವ್ ಗಾಂಧಿಯವರು, 1989ನೇ ಇಸವಿ ಸೆಪ್ಟಂಬರ್ 8ನೇ ತಾರೀಖು ಕರ್ನಾಟಕದ ಮಂಡಲ ಪಂಚಾಯ್ತಿ ಪ್ರಧಾನರಿಗೆ ಬರೆದ ಪತ್ರದ ವಿರುದ್ಧವಾಗಿದೆ. ಮತ್ತು ರಾಜ್ಯಾಂಗದ ಕಟ್ಟಳೆಗಳಿಗೆ ವಿರುದ್ಧವಾಗಿದೆ. ಎಲ್ಲದಕ್ಕಿಂತ ಮಿಗಿಲಾಗಿ, 64ನೇ ತಿದ್ದುಪಡಿಯ ಷೆಡ್ಯೂಲ್ 11ರಲ್ಲಿ ಸೇರಿಸಿರತಕ್ಕ 29, ಒಟ್ಟಾರೆ ಯಾರು ಯಾವುದನ್ನು ಕೊಡಬೇಕೆಂದು ಇದರಲ್ಲಿ ಸೇರಿಸಿದ್ದಾರೆ. ಹೈಯರ್ ಪ್ರೈಮರಿ ಮತ್ತು ಪ್ರೈಮರಿ ವಿದ್ಯಾಭ್ಯಾಸ ಇವನ್ನು ಕಿತ್ತುಕೊಳ್ಳತಕ್ಕ ಪ್ರಯತ್ನ ಮಾಡಿದ್ದಾರೆ. ಈ ಎಲ್ಲಾ ಕಾರಣಗಳಿಂದ ಈ ಮಸೂದೆ ತಿರಸ್ಕಾರಕ್ಕೆ ಯೋಗ್ಯವಾಗಿದ್ದರೂ, ವಿಕೇಂದ್ರಿಕೃತ ವ್ಯವಸ್ಥೆಯ ವಿಶ್ವಾಸ ಇರತಕ್ಕಂಥ ನನ್ನಂಥ ಕೆಲವರು ನಮ್ಮ ಅಭಿಪ್ರಾಯದ ಬಗ್ಗೆ ಪುನಃ ಇದರ ಬಗ್ಗೆ ಕುಳಿತುಕೊಂಡು ಚರ್ಚೆಮಾಡೋಣ. ಚರ್ಚೆಯಿಂದ ಬರತಕ್ಕ ಅಭಿಪ್ರಾಯಗಳನ್ನು ಏನು ರೂಢಿಸುತ್ತೇವೆ. ಅದರ ಆಧಾರದ ಮೇಲೆ, ಕೀರ್ತಿ ಬರತಕ್ಕ, ಶಾಶ್ವತ ವ್ಯವಸ್ಥೆ ಇರತಕ್ಕ ಒಂದು ತಿದ್ದುಪಡಿ ತರುವುದಕ್ಕೆ ಪ್ರಯತ್ನವನ್ನು ಮಾಡಬೇಕೆಂದು ಹೇಳಿ, ಈ ಮಸೂದೆಯನ್ನು ವಿರೋಧ ಮಾಡಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ (ಸಾಗರ) : ಮಾನ್ಯ ಅಧ್ಯಕ್ಷರೇ, ವಿರೋಧಪಕ್ಷದ ನಾಯಕರು ನಮ್ಮ ಮುಂದೆ ಜಿಲ್ಲಾಪರಿಷತ್ತು ಮತ್ತು ಮಂಡಲ್ ಪಂಚಾಯ್ತಿ ಕಾನೂನಿಗೆ ತಂದಂಥ ತಿದ್ದುಪಡಿ ಮಸೂದೆ ಬಗ್ಗೆ ವಿಪುಲವಾದ ಚರ್ಚೆಯನ್ನು ಮಾಡಿದ್ದಾರೆ.

ಮೂರು ದಿವಸಗಳ ಕಾಲ ನಿರಂತರವಾಗಿ ಕಾವೇರಿ ಗಂಗೆ ಹರಿದಂತಹ ರೀತಿಯಲ್ಲಿ ಚರ್ಚೆ ಮಾಡಿದ್ದಾರೆ. ಒಂದು ಸಂತೋಷದ ಸಂಗತಿ ಎಂದರೆ, ಅವರ ಸಹಾಯಕ್ಕೆ ಕಾಂಗ್ರೆಸ್ ಪಕ್ಷದ ಪ್ರಣಾಳಿಕೆ ಹಾಗೂ ನಮ್ಮ ನಾಯಕರಾದಂಥ ರಾಜೀವ್ ಗಾಂಧಿಯವರ ಆಶೀರ್ವಾದ ಪಡೆಯತಕ್ಕಂಥ ಒಂದು ಸನ್ನಿವೇಶ ಅವರಿಗೆ ಒದಗಿ ಬಂದಿದೆ. ನನಗಾದರೂ ಅನ್ನಿಸುತ್ತದೆ, ಕಾಂಗ್ರೆಸ್ ಪಕ್ಷದಲ್ಲಿ ಅವರ ಪಕ್ಷವನ್ನು ಯಾವಾಗ ವಿಲೀನ ಮಾಡುತ್ತಾರೆ. ಸಿದ್ಧತೆ ನಡೆಯುತ್ತಿದೆ ಒಳ್ಳೆಯದು, ಏತಕ್ಕೆಂದರೆ ರಾಷ್ಟ್ರದಲ್ಲಿ..

ಶ್ರೀ ಡಿ.ಬಿ. ಚಂದ್ರೇಗೌಡ : ಜನತಾದಳ ಎಸ್. ಎಂದು ಮಿಸ್ಟೇಕ್ ಮಾಡಿಕೊಂಡಿದ್ದೀರಿ. ಸರಿಪಡಿಸಿಕೊಳ್ಳಿ.

ಶ್ರೀ ಕಾಗೋಡು ತಿಮ್ಮಪ್ಪ : ಪಾಪ ಜನತಾದಳ ಎಸ್‌ನವರು ತಮ್ಮದೇ ಆದ ರೀತಿಯಲ್ಲಿ ನಮ್ಮ ಪಕ್ಷದ ಕಾರ್ಯಕ್ರಮವನ್ನು ಒಪ್ಪಿಕೊಂಡು ನಮ್ಮ ಸಹಾಯ ಪಡೆದು ಸರಕಾರ ನಡೆಸುತ್ತಿದ್ದಾರೆ. ಇದು ಬಹಿರಂಗವಾಗಿ ಗೊತ್ತಿರತಕ್ಕಂಥಾದ್ದು. ಇದಕ್ಕೆ ಮುಚ್ಚುಮರೆ ಏನೂ ಇಲ್ಲ, ಆದರೆ ನೀವು ನೇರವಾಗಿ ಬರುವುದಕ್ಕೆ ಸಿದ್ಧತೆ ಮಾಡಿಕೊಳ್ಳಬೇಕೆಂದು ನಿಮ್ಮ ಮನಸ್ಸಿನಲ್ಲಿ ಕಾಡುತ್ತಿದೆ. ಹೋಗ್ರಿ, ಸೇರ್ರಿ, ನಿಮಗೆ ಉಳಿದಿರತಕ್ಕಂಥಾದ್ದು ಒಂದೇ ಒಂದು ನೆರಳು ಎಂದರೆ ರಾಜೀವ್ ಗಾಂಧಿಯವರು, ಅವರ ಪ್ರಣಾಳಿಕೆ, ಅವರ ಕಾರ್ಯಕ್ರಮ ಎಂದು ನಿಮ್ಮನ್ನು ಕಾಡುತ್ತಿದೆ. ಈ ರೀತಿ ನಿಮ್ಮನ್ನು

ಕಾಡುತ್ತಿರಬೇಕಾದರೆ, ನೇರವಾಗಿ ಬಂದು ಸೇರುತ್ತೇವೆಂದು ಹೇಳುವುದಕ್ಕೆ ಬದಲು, ನಮ್ಮ ಪ್ರಣಾಳಿಕೆಯನ್ನು ಓದುತ್ತಿದ್ದೀರಿ.

ಶ್ರೀ ಬಿ.ಹೆಚ್. ಬನ್ನಿಕೋಡ್ : ನೀವು ನಮ್ಮ ದೇವರಿಗೆ ನಡೆದುಕೊಳ್ಳುವುದಿಲ್ಲ, ನಿಮ್ಮ ದೇವರಿಗೆ ನೀವು ನಡೆದುಕೊಳ್ಳುತ್ತಿದ್ದೀರಿ, ಅದಕ್ಕೆ ಈ ರೀತಿ ಅವರು ಹೇಳಿದ್ದು.

(ಗೊಂದಲ)

ವೈಸ್ ಚೇರ್ಮೆನ್ : ಯಾರೂ ಇಂಟರ್‌ಫಿಯರ್ ಮಾಡಬಾರದು.

ಶ್ರೀ ಕಾಗೋಡು ತಿಮ್ಮಪ್ಪ : ನಾನು ಜನತಾದಳ ಪಕ್ಷದ ಪ್ರಣಾಳಿಕೆ, ಕಾರ್ಯಕ್ರಮ ಸಿದ್ಧಾಂತ, ತತ್ವ ಇವುಗಳ ಆಧಾರವನ್ನು ಇಟ್ಟುಕೊಂಡು ನಮ್ಮ ವಿರೋಧ ಪಕ್ಷದ ನಾಯಕರು ಚರ್ಚೆ ಮಾಡಿದ್ದಾರೆ, ಇದು ನಮ್ಮ ಪ್ರಣಾಳಿಕೆ, ನಮ್ಮ ಕಾರ್ಯಕ್ರಮ, ನಮ್ಮ ತತ್ವ ಮತ್ತು ಸಿದ್ಧಾಂತದ ಪ್ರಕಾರವಾಗಿ ಈ ಒಂದು ವ್ಯವಸ್ಥೆಯನ್ನು ಮಾಡಿದ್ದೇವೆ, ಅದನ್ನು ಕಿತ್ತು ಹಾಕುವುದಕ್ಕೆ ಹೊರಟಿದ್ದೀರಿ, ನಿಮ್ಮ ಪಕ್ಷದ ಕಾರ್ಯಕ್ರಮ ಸಿದ್ಧಾಂತಕ್ಕೆ ಈ ತಿದ್ದುಪಡಿ ವಿರುದ್ಧವಾಗಿದೆ ಎಂದು ಹೇಳಿದ್ದರೆ, ನಾನು ಏನೇನೂ ಚಿಂತೆ ಮಾಡಬೇಕಾದ ಅಗತ್ಯ ಬರುತ್ತಿರಲಿಲ್ಲ.

ಏತಕ್ಕೆಂದರೆ ಹೆತ್ತವರಿಗೆ ಹೆಗ್ಗಣ ಮುದ್ದು. ಜನತಾ ದಳ ಆಡಳಿತ ಪಕ್ಷ ಆಗಿದ್ದಾಗ, ಕಾಂಗ್ರೆಸ್ ಪಕ್ಷ ವಿರೋಧ ಪಕ್ಷವಾಗಿದ್ದಾಗ, ಈ ಒಂದು ಕಾನೂನನ್ನು ತಂದಿದ್ದರು. ಈ ಒಂದು ವ್ಯವಸ್ಥೆ ಪ್ರಾಯೋಗಿಕವಾಗಿ ನಡೆಯುತ್ತಿದೆ. ಅದನ್ನು ರಕ್ಷಣೆ ಮಾಡುವುದಕ್ಕೆ ಆ ಮರಿಯನ್ನು ಮುದ್ದು ಮಾಡುವುದಕ್ಕೆ ಏನು ಬೇಕೋ ಎಲ್ಲವನ್ನೂ ಮಾಡಿರಿ, ಅದನ್ನು ಬೇಡ ಅನ್ನುವುದಿಲ್ಲ. ಆದರೆ ನಿಮ್ಮ ಪಕ್ಷದ ಸಿದ್ಧಾಂತ ಮತ್ತು ನಿಮ್ಮ ಪಕ್ಷದ ಪ್ರಣಾಳಿಕೆ ಬಿಟ್ಟು, ಇವತ್ತು ನಮ್ಮ ಪಕ್ಷದ ನಾಯಕರು ನಮ್ಮ ಪಕ್ಷದ ಪ್ರಣಾಳಿಕೆ ಇವುಗಳನ್ನು ಅಪ್ಪಿಕೊಳ್ಳುವುದಕ್ಕೆ ಏನು ಪ್ರಯತವನ್ನು ನಡೆಸುತ್ತಿದ್ದೀರಿ. ಇದಕ್ಕೆ ಕಾರಣ ಏನು?

ಶ್ರೀ ಡಿ.ಬಿ. ಚಂದ್ರೇಗೌಡ : ನೀವು ಬಂದಿರಲಿಲ್ಲ. ಆಗ ನಮ್ಮದೂ ಹೇಳಿದ್ದೇನೆ. ನೀವು ಹೇಳಿದುದನ್ನೂ ಹೇಳಿದ್ದೇನೆ, ನಮ್ಮದನ್ನೂ ಹೇಳಿದ್ದೇನೆ.

ಶ್ರೀ ಕಾಗೋಡು ತಿಮ್ಮಪ್ಪ : ಕೊನೆ ಪಕ್ಷ ನಿಮ್ಮ ರಕ್ಷಾ ಕವಚವಾಗಿ ನಮ್ಮ ಪಕ್ಷದ ಸಿದ್ಧಾಂತ ಕಾರ್ಯಕ್ರಮ ನಮ್ಮ ಪಕ್ಷದ ಪ್ರಣಾಳಿಕೆ ಬಂದಿದ್ದರೆ ಬಹಳ ಸಂತೋಷ.

ಶ್ರೀ ಆರ್.ಎಲ್. ಜಾಲಪ್ಪ : ಮಾನ್ಯ ಅಧ್ಯಕ್ಷರೇ, ಹೆತ್ತವರಿಗೆ ಹೆಗ್ಗಣ ಮುದ್ದು ಅವರು ಇತ್ತೀಚೆಗೆ ಅವರು ಆ ಕಡೆ ಹೋಗಿ ಕೂಡಿಕೊಂಡಿದ್ದಾರೆ. ಅವರಿಗೆ ಕೋಣ ಮುದ್ದು ಏನು ಮಾಡುವುದಕ್ಕೆ ಆಗುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ : ಯಾರು ಯಾವಕಡೆ ಇದ್ದರು, ಯಾವಾಗ ಸೇರಿದರು ಅದು ಅಪ್ರಕೃತ. ಸೇರಿದ ಮೇಲೆ ಆ ಪಕ್ಷದ ಸಿದ್ಧಾಂತಕ್ಕೆ, ಕಾರ್ಯಕ್ರಮಕ್ಕೆ ನಿಷ್ಠರಾಗಿರಬೇಕು. ನಾನು ನಿಷ್ಠನಾಗಿದ್ದೇನೆ. ಭಿನ್ನಭಿಪ್ರಾಯ ಇಲ್ಲ. ಭಿನ್ನಾಭಿಪ್ರಾಯ ಬಂದರೆ ಇಲ್ಲಿರುವುದಕ್ಕೆ ಆಗುವುದಿಲ್ಲ. ಆದುದರಿಂದ ನೀವು ಬೇರೆ ಪಕ್ಷ ಎಂದು ಇಟ್ಟುಕೊಂಡು ಬೇರೆ ಕಾರ್ಯಕ್ರಮವನ್ನು ಪ್ರತಿಪಾದನೆ ಮಾಡಿ, ಇವೊತ್ತು ಒಂದು ರಾಷ್ಟ್ರಮಟ್ಟದ ಆಡಳಿತ ಪಕ್ಷವಾಗಿದ್ದು, ಮತ್ತೆ ಆಡಳಿತ ತಮ್ಮ ಕೈಯಿಂದ ಕಿತ್ತುಹೋದಮೇಲೆ, ಇವತ್ತು ಯಾರ ನೆರಳನ್ನು ನೀವು ನಿರೀಕ್ಷಣೆ ಮಾಡುತ್ತಿದ್ದೀರಿ. ಕಾಂಗ್ರೆಸ್ ಪಕ್ಷದ ಕಾರ್ಯಕ್ರಮ, ಪ್ರಣಾಳಿಕೆ, ಸಿದ್ಧಾಂತವನ್ನು ಹೇಳುತ್ತಿದ್ದೀರಿ. ಆದುದರಿಂದ ಇಂತಹ ಪರಿಸ್ಥಿತಿ ತಮ್ಮ ಪಕ್ಷಕ್ಕೆ ಬಂದಿದೆ ಎಂದು ಹೇಳಿದರೆ, ತಾವು ತಮ್ಮ ಪಕ್ಷವನ್ನು ಈ ವಿಸರ್ಜಿಸಿ

ಕಾಂಗ್ರೆಸ್ ಪಕ್ಷ ಸೇರಿದರೆ ಒಟ್ಟಾಗಿ ಸೇರಿಕೊಂಡು ಚರ್ಚೆ ಮಾಡೋಣ. ಒಟ್ಟಿಗೆ ಸೇರಿ ದುಂಡು ಮೇಜಿನ ಚರ್ಚೆ ಮಾಡೋಣ.

ಶ್ರೀ ಆರ್.ಎಲ್. ಜಾಲಪ್ಪ : 40 ವರ್ಷಗಳು ಕಾಂಗ್ರೆಸ್‌ನವರು ಈ ರಾಷ್ಟ್ರವನ್ನು ಆಳಿದ್ದಾರೆ. .ಯಾವತ್ತೂ ಕೂಡಾ

(ಗೊಂದಲ)

ಶ್ರೀ ಆರ್.ಎಲ್. ಜಾಲಪ್ಪ : ಹೌದು ನಾನೂ ಕೆಲವು ದಿವಸ ಇದ್ದೆ...

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ : ನಾಗಮಂಗಲದ ಗೌಡರನ್ನು ಆದಷ್ಟು ಬೇಗ ಸೇರಿಸಿಕೊಳ್ಳಿ ಅವರ ಕಾಟ ನಮಗೆ ತಡೆಯುವುದಕ್ಕೆ ಆಗುತ್ತಿಲ್ಲ.

(ಗೊಂದಲ)

ಶ್ರೀ ಆರ್.ಎಲ್. ಜಾಲಪ್ಪ : 40 ವರ್ಷಗಳಿಂದ ಅವರು ಆಡಳಿತ ನಡೆಸಿದರು. ಆಗ ಅವರಿಗೆ ಯಾವತ್ತೂ ಜ್ಞಾನೋದಯವಾಗಿರಲಿಲ್ಲ. ಅಧಿಕಾರ ವಿಕೇಂದ್ರಿಕರಣದ ಕಾನೂನು ಜಾರಿಗೆ ತಂದು ಹಳ್ಳಿಯವರ ಕೈಗೆ ತಮ್ಮ ಆಡಳಿತವನ್ನು ಕೊಟ್ಟು, ಅವರೇ ನಡೆಸಲಿ, ಅದು ಅವರ ಹಣೆಬರಹ ಏನಾದರೂ ಮಾಡಿಕೊಳ್ಳಲಿ ಎನ್ನುವ ಯೋಚನೆ ಆಗ ಮಾಡಲಿಲ್ಲ. ಕರ್ನಾಟಕ ರಾಜ್ಯದಲ್ಲಿ ನಾವು ಇದನ್ನು ಮೊಟ್ಟಮೊದಲನೆಯದಾಗಿ ಯೋಚನೆ ಮಾಡಿ ಆಡಳಿಕ ವಿಕೇಂದ್ರಿಕರಣ ಮಾಡಿ ಕೊಟ್ಟ ಮೇಲೆ ಅದೂ ಸಹ ಎರಡು ವರ್ಷಗಳು ಕೇಂದ್ರದಲ್ಲಿ ಬಿದ್ದಿತ್ತು. ಅದಕ್ಕೆ ಅಪ್ರೂವ್ ಮಾಡಲಿಲ್ಲ, ಆಮೇಲೆ ಅಬ್ದುಲ್ ನಜೀರ್‌ಸಾಬ್‌ರವರು ಉಪವಾಸ ಸತ್ಯಾಗ್ರಹ ಮಾಡುತ್ತೇನೆಂದು ಹೆದರಿಸಿದ ಮೇಲೆ ಅಪ್ರೂವ್ ಮಾಡಿಸಿಕೊಂಡು ಬಂದರು. ಕರ್ನಾಟಕ ರಾಜ್ಯದಲ್ಲಿ ಇದನ್ನು ಜಾರಿಗೆ ತಂದ ಮೇಲೆ ಅವರೂ ಸಹ ಚುನಾವಣೆ ಇನ್ನು 6 ತಿಂಗಳಿದೆ ಎನ್ನುವಾಗ ರಾಜ್ಯಾಂಗದ 64ನೇ ವಿಧಿಗೆ ತಿದ್ದುಪಡಿ ಮಾಡಿದರು. ನಾವು ನಿಮ್ಮ ನೆರಳನ್ನು ಆಶ್ರಯಿಸಿ ಬರಲಿಲ್ಲ. ನೀವು ನಮ್ಮನ್ನು ಕಾಪಿ ಮಾಡಿದರಿ. That does not mean to say that we are taking protection under that.

ಈಗ ನಿಮಗೆ ಮೆಜಾರಿಟಿ ಇದೆ. ನಿಮಗೆ ಆಡಳಿತ ವಿಕೇಂದ್ರಿಕರಣ ಬೇಕಾಗಿಲ್ಲ, ನಿಮಗೆ ಅಧಿಕಾರ ಇದೆ, ತೆಗೆದುಕೊಳ್ಳಿ. ನಿಮಗೆ ಅಧಿಕಾರ ಇದೆ ಮೆಜಾರಿಟಿ ಇದೆ ನೀವು ಏನು ಬೇಕಾದರೂ ಮಾಡಬಹುದು. ನಿಮ್ಮಲ್ಲಿ ಒಬ್ಬರು ಭಾಷಣ ಮಾಡುವಾಗ ಹೇಳಿದರು, ಎಲ್ಲಾ ಜನಗಳಿಗೂ ಅನುಕೂಲವಾಗುವ ರೀತಿಯಲ್ಲಿ ಇದನ್ನು ಮಾಡಿದ್ದೇವೆಂದು, ಆದರೆ ಅದರಲ್ಲಿ ಅಂತಹ ಒಂದು ಕಲಮ್ ಏನಾದರೂ ಇದೆಯೇ ಜನಗಳಿಗೆ ಅನುಕೂಲವಾಗುವುದು ?

(ಗೊಂದಲ)

ಆದ್ದರಿಂದ ನಾವು ನಿಮ್ಮ ಆಶ್ರಯ ತೆಗೆದುಕೊಂಡು ಅಥವಾ ನಿಮ್ಮ ಪ್ರೊಟೆಕ್ಷನ್ ತೆಗೆದುಕೊಳ್ಳಬೇಕಾಗಿಲ್ಲ.

(ಗೊಂದಲ)

ಶ್ರೀ ಎಲ್.ಆರ್. ಶಿವರಾಮೇಗೌಡ : ಮಾನ್ಯ ಸದಸ್ಯರು ಮಾತನಾಡತಕ್ಕಂಥ ಸಂದರ್ಭದಲ್ಲಿ ವಿಷಯ ತಿಳಿದು ಮಾತನಾಡಬೇಕು...

(ಗೊಂದಲ)

ಶ್ರೀ ಆರ್.ಎಲ್. ಜಾಲಪ್ಪ : ಮಾನ್ಯ ಅಧ್ಯಕ್ಷರೇ, ಇಲ್ಲಿ ವಿಪರ್ಯಾಸ ಏನೇಂದರೆ ಅವರಿಗೆ ಕಾಂಗ್ರೆಸ್ಸ್ ಪಕ್ಷದಿಂದ ಟಿಕೆಟ್ ಕೊಡಲಿಲ್ಲವೆಂದು ಚುನಾವಣೆಯಲ್ಲಿ

ಬಾಯಿಗೆ ಬಂದ ಹಾಗೆ ನಿಮ್ಮನ್ನು ಬೈದರು. ಅವರನ್ನು ನೀವು ಈಗ ಸೇರಿಸಿಕೊಂಡಿದ್ದೀರಿ. ಏಕೆ ನಿಮ್ಮ ಹತ್ತಿರ ಜನ ಇಲ್ಲವೇ? ಇಂತಹವರನ್ನು ಸೇರಿಸಿಕೊಂಡರೆ ನಿಮ್ಮ ಪಕ್ಷಕ್ಕೆ ಕೆಟ್ಟ ಹೆಸರು ಬರುತ್ತದೆ ಅಷ್ಟೇ...

(ಗೊಂದಲ)

ಶ್ರೀ ಬಿ.ಎಂ. ಇದಿನಬ್ಬ : ಮಾನ್ಯ ಅಧ್ಯಕ್ಷರೇ, ಮಾನ್ಯ ಕಾಗೋಡು ತಿಮ್ಮಪ್ಪನವರು ಮಾತನಾಡುವಾಗ ಮಾನ್ಯ ಸದಸ್ಯರುಗಳು ಈ ರೀತಿ ಅಡ್ಡ ಬಂದರೆ ಮಾತನಾಡುವವರ ಶಕ್ತಿ ಕಡಿಮೆಯಾಗುತ್ತದೆ.

(ಗೊಂದಲ)

ಶ್ರೀ ಕಾಗೋಡು ತಿಮ್ಮಪ್ಪ : 40 ವರ್ಷಗಳ ಕಾಲ ಆಡಳಿತ ಮಾಡಿದರೂ ಸಹ ಬಹಳ ವರ್ಷಗಳ ಕಾಲ ಮಾನ್ಯ ಜಾಲಪ್ಪನವರು ಸಹ ಕಾಂಗ್ರೆಸ್ ಪಕ್ಷದಲ್ಲಿದ್ದರು.

ಶ್ರೀ ಆರ್.ಎಲ್. ಜಾಲಪ್ಪ : 4 ವರ್ಷ ಮಾತ್ರ ಇದ್ದೆ.

ಛೇರ್ಮನ್ : ಅಂತೂ ನೀವು ಸಹ ಕಾಂಗ್ರೆಸ್ ಪಕ್ಷದಲ್ಲಿದ್ದಿರಿ.

ಶ್ರೀ ಆರ್.ಎಲ್. ಜಾಲಪ್ಪ : ನಾನು ಬೇರೆಯವರಂತೆ 10ಪಾರ್ಟಿ ಬದಲಾಯಿಸಲಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ : ಆದ್ದರಿಂದ ಕಾಂಗ್ರೆಸ್ಸ್ ಪಕ್ಷ 1959ರಿಂದಲೂ ಕೂಡ ಆಗ ಜಯಪ್ರಕಾಶ್ ನಾರಾಯಣ್‌ರವರ ನಾಯಕತ್ವದಲ್ಲಿ ಮತ್ತು ಶ್ರೀ ಎಸ್.ಕೆ.ಡೇಯವರ ನಾಯಕತ್ವದಲ್ಲಿ ಪಂಚಾಯತ್ ರಾಜ್ ವ್ಯವಸ್ಥೆ ಬಗ್ಗೆ ರಾಷ್ಟ್ರವ್ಯಾಪಿ ಚರ್ಚೆ ಮಾಡಿ ಒಂದು ಕಾನೂನನ್ನು ಆಗಲೂ ಜಾರಿಗೆ ತಂದರು. ಆಗಲೂ ಈ ಒಂದು ಪ್ರಯೋಗ ನಡೆದಿತ್ತು. ನಿಮ್ಮ ಪಂಚಾಯತ್ ರಾಜ್ ವ್ಯವಸ್ಥೆಯ ಹೊಸ ಕಾನೂನು ಕರ್ನಾಟಕ ರಾಜ್ಯದಲ್ಲಿ ಜಾರಿಗೆ ಬರುವುದಕ್ಕಿಂತ ಮುಂಚೆ ಹಿಂದೆ ಇದ್ದಂತಹ ಕಾನೂನು ಪ್ರಕಾರ ತಾಲ್ಲೂಕು ಅಭಿವೃದ್ಧಿ ಮಂಡಲಿ ಪಂಚಾಯಿತಿ ಮತ್ತು ಜಿಲ್ಲಾ ಅಭಿವೃದ್ಧಿ ಮಂಡಳಿಗಳು ಅಸ್ತಿತ್ವದಲ್ಲಿ ಇದ್ದವು. ಅದನ್ನು ರದ್ದು ಮಾಡಿ ಹೊಸ ಕಾನೂನು ಜಾರಿಗೆ ತಂದಿರಿ. ಆದ್ದರಿಂದ ಪಂಚಾಯತ್ ರಾಜ್ ವ್ಯವಸ್ಥೆ ಬಗ್ಗೆ ನಮ್ಮ ಪಕ್ಷ ಆಲೋಚನೆಯೇ ಮಾಡಿಲ್ಲ. ಆ ಬಗ್ಗೆ ವಿಚಾರವೇ ಮಾಡಿರಲಿಲ್ಲ ಎನ್ನತಕ್ಕಂಥಾದ್ದು ಸರಿಯಲ್ಲ. ಅದರಲ್ಲಿ ತಪ್ಪುಗಳು ಇರಬಹುದು. ಅದರಲ್ಲಿ ಕೆಲವು ತಿದ್ದುಪಡಿಗಳನ್ನು ಮಾಡಿ ಇನ್ನೊಂದು ಕಾನೂನು ತಂದು ಜಾರಿಗೆ ಕೊಟ್ಟಿರಬಹುದು, ಆದರೆ ಪಂಚಾಯಿತಿ ವ್ಯವಸ್ಥೆ ಬಗ್ಗೆ ಕಲ್ಪನೆಗಳೇ ಇರಲಿಲ್ಲ, ಆ ವಿಚಾರವೇ ಕಾಂಗ್ರೆಸ್ಸ್ ಪಕ್ಷಕ್ಕೆ ಇರಲಿಲ್ಲ ಎನ್ನುವುದು ಸರಿಯಲ್ಲ. ಆದ್ದರಿಂದ ಇವತ್ತು ಹೊಸ ಒಂದು ವ್ಯವಸ್ಥೆಯನ್ನು ನೀವು ತಂದಿದ್ದೀರಿ? ಆದರೆ ಇವತ್ತು ಇರತಕ್ಕಂತಾದ್ದು ಏನು? ಹೌದು ಮಾನ್ಯ ಚಂದ್ರೇಗೌಡರು ಹೇಳಿದರು; ಹಿಂದೆ ಅಂದರೆ ಚುನಾವಣೆಗಿಂತ ಮುಂಚೆ ಮಾನ್ಯ ರಾಜೀವ್ ಗಾಂಧಿಯವರು ಪಂಚಾಯತ್ ರಾಜ್ ವ್ಯವಸ್ಥೆಗೆ ರಾಜ್ಯಾಂಗ ಬದ್ಧವಾದ ರಕ್ಷಣೆ ಬೇಕು ಎಂದು ರಾಜ್ಯಾಂಗದಲ್ಲಿ ತಿದ್ದುಪಡಿ ಮಾಡಿ ರಕ್ಷಣೆ ಕೊಟ್ಟರೆ ಆ ಒಂದು ವ್ಯವಸ್ಥಿತವಾಗಿ ಶಾಶ್ವತವಾಗಿರುತ್ತದೆಂದು ರಾಷ್ಟ್ರವ್ಯಾಪಿ ಅನೇಕ ರಾಜ್ಯ ಸರ್ಕಾರಗಳೊಡನೆ ಚರ್ಚೆ ನಡೆಸಿ ರಾಜ್ಯಾಂಗಕ್ಕೆ ತಿದ್ದುಪಡಿಯನ್ನು ತಂದರು. ಆ ತಿದ್ದುಪಡಿ ಲೋಕಸಭೆಯಲ್ಲಿ ಪಾಸ್ ಆಯಿತು. ಆದರೆ ರಾಜ್ಯ ಸಭೆಯಲ್ಲಿ ಅದನ್ನು ತಿರಸ್ಕಾರ ಮಾಡಿದರು, ತಿರಸ್ಕಾರ ಮಾಡತಕ್ಕಂಥ ಕಾಲದಲ್ಲಿ ಅದರ ವಿರುದ್ಧ ಮತದಾನ ಮಾಡಿರತಕ್ಕವರು ಯಾರು ಅಂದರೆ ಶ್ರೀಮಾನ್ ಚಂದ್ರೇಗೌಡರ ಪಕ್ಷದವರು.

SRI D.B. CHANDREGOWDA : I was the whip of the party. I made only one point, 'you shall not by-pass the State'. That was the only thing.

ಶ್ರೀ ಕಾಗೋಡು ತಿಮ್ಮಪ್ಪ : ಈಗ ಯಾವುದು ಪಾಯಿಂಟ್ ಯಾವುದು ಪಾಯಿಂಟ್ ಅಲ್ಲ ಎನ್ನುವುದು ಅಪ್ರಕೃತ. ಅಂದು ಅದು ರಾಜ್ಯ ಸಭೆಯಲ್ಲಿ ತಿರಸ್ಕಾರವಾಯಿತು. ಅದು ತಿರಸ್ಕಾರ ಆಗಬೇಕಾದರೆ ಕಾರಣ ಯಾರು? ಇಂದು ಅವರು ಹೇಳಿದ ರೀತಿಯಲ್ಲಿ ಆ ದಿವಸ ರಾಜ್ಯಾಂಗದ 64ನೇ ತಿದ್ದುಪಡಿ ಮಾಡುವುದಕ್ಕೆ ತಿರಸ್ಕಾರ ಮಾಡುವುದಕ್ಕೆ ಕಾರಣರಾಗಿದ್ದರೋ ಅಂಥಾ ಜನ ಇವತ್ತು 64ನೇ ತಿದ್ದುಪಡಿ ರೀತ್ಯ ನಮ್ಮ ಪಂಚಾಯತ್ ರಾಜ್ಯ. ವ್ಯವಸ್ಥೆ ಬರಬೇಕಾಗಿತ್ತು, ಅದರ ವಿರುದ್ಧವಾಗಿ ಹೋಗಿದ್ದೀರಿ ಎಂದು ಹೇಳುವುದಕ್ಕೆ ನಿಮಗೆ ಯಾವ ರೀತಿ ನೈತಿಕ ಹಕ್ಕು ಬಂದಿದೆ?

ಶ್ರೀ ಡಿ.ಬಿ. ಚಂದ್ರೇಗೌಡ : ಆ ದಿವಸವೂ ಸಹಾ ನಾವು 64ನೇ ತಿದ್ದುಪಡಿಯನ್ನು ಇನ್ ಟೋಟೋ ನಾವು ವಿರೋಧ ಮಾಡಿರಲಿಲ್ಲ. 64ನೇ ತಿದ್ದುಪಡಿಯಲ್ಲಿ ಬಹುತೇಕ ಅಂಶಗಳನ್ನು ನಾವು ಒಪ್ಪಿಕೊಂಡಿದ್ದೆವು. ಆದರೆ ಒಂದೇ ಒಂದು ವಿಚಾರದ ಬಗ್ಗೆ. ಅದೇನೆಂದರೆ, ರಾಜ್ಯವನ್ನು ಬೈಪಾಸ್ ಮಾಡತಕ್ಕಂಥ ವ್ಯವಸ್ಥೆ ಸರಿಯಲ್ಲವೆಂದು ಹೇಳಿದ್ದೇವೆ. ಇವತ್ತೂ ಚರ್ಚೆಗೆ ಬಂದಿರತಕ್ಕಂತಾದ್ದೂ ಅದೇ. ನೇರವಾಗಿ ಜವಹಾರ್ ರೋಜ್ಗಾರ್ ಹಣ ಪಂಚಾಯಿತಿಗಳಿಗೆ ಹೋದರೆ ಅಲ್ಲಿ ಮಿಸ್ ಅಪ್ರೊಪ್ರಿಯೇಷನ್ ಆಗುತ್ತದೆ, ಮಿಸ್ ಅಪ್ಲಿಕೇಶನ್ಸ್ ಆಗುತ್ತದೆಂದು ಹೇಳಿದ್ದೇವೆ. ಇವತ್ತೂ ಅದೇ ಆಗಿದೆ. ಅದರಿಂದಲಾದರೂ ನೀವು ಪಾಠ ಕಲಿಯಬೇಕಲ್ಲಾ?

ಶ್ರೀ ಕಾಗೋಡು ತಿಮ್ಮಪ್ಪ : ಇವತ್ತು ವಿರೋಧ ಪಕ್ಷದ ನಾಯಕರು ಈ ರೀತಿ ಹೇಳುತ್ತಿದ್ದಾರೆ. ಬಹುಶಃ ನೀವು ಅದು ಒಂದೇ ವಿಷಯದ ಬಗ್ಗೆ ವಿರೋಧ ಮಾಡುವ ಹಾಗಿದ್ದಿದ್ದರೆ, 64ನೇ ತಿದ್ದುಪಡಿಯಲ್ಲಿ ಅನೇಕ ಕ್ಲಾಸಸ್‌ಗಳು ಇದ್ದವು. ಅಲ್ಲಿ ಒಂದು ಸೆಕ್ಷನ್ ಅಲ್ಲ, ಒಂದು ಕ್ಲಾಸ್ ಅಲ್ಲ ಇರುವುದು, ಸಾಕಷ್ಟು ಸೆಕ್ಷನ್ಸ್ ಮತ್ತು ಕ್ಲಾಸಸ್‌ಗಳು ಇವೆ. ಅವತ್ತು ತಾವು ಹೇಳತಕ್ಕಂಥಾ ವಾದ ಏನು? ಇದರಲ್ಲಿ ಒಂದು ಪ್ರಸ್ತಾಪ ಇತ್ತು. ಮಂಡಲ ಪಂಚಾಯಿತಿ ಮತ್ತು ಜಿಲ್ಲಾ ಪರಿಷತ್ತುಗಳನ್ನು ವಿಸರ್ಜನೆ ಮಾಡತಕ್ಕಂಥ ಅಧಿಕಾರವನ್ನು ರಾಜ್ಯಪಾಲರಿಗೆ ಕೊಟ್ಟಿದ್ದರು. ಆ ಅಧಿಕಾರ ರಾಜ್ಯಪಾಲರಿಗೆ ಕೊಟ್ಟಿರತಕ್ಕಂತಾದ್ದು ಸರಿಯಲ್ಲವೆಂದು ಆಗಿದ್ದರೆ ಅಥವಾ ಮಂಡಲ ಪಂಚಾಯಿತಿ ವ್ಯವಸ್ಥೆಯನ್ನು ಕಿತ್ತುಹಾಕಬೇಕಾದರೆ, ರಾಜ್ಯ ಸರ್ಕಾರಗಳನ್ನು ಬೈ-ಪಾಸ್ ಮಾಡತಕ್ಕದ್ದರ ಬಗ್ಗೆ ಮಾತ್ರ ವಿರೋಧ ಮಾಡುವುದಾಗಿದ್ದರೆ ಆ ಒಂದು ಪರ್ಟಿಕ್ಯುಲರ್ ಕ್ಲಾಸ್‌ಗೆ ಅಮೆಂಡ್‌ಮೆಂಟ್ ಸೂಚಿಸಿ ಅಷ್ಟಕ್ಕೆ ವಿರೋಧ ಮಾಡಬಹುದಾಗಿತ್ತು. It is totally rejected.

SRI D.B. CHANDREGOWDA : Yes, we have given.

ಚರ್ಚೆಗೆ ಪ್ರಧಾನ ಮಂತ್ರಿಗಳ ಹತ್ತಿರ ಹೋಗಿದ್ದವರಲ್ಲಿ ನಾನೂ ಒಬ್ಬ. ಅದರ ಬಗ್ಗೆ ಸುದೀರ್ಘವಾಗಿ ಚರ್ಚೆ ಮಾಡುವುದಕ್ಕೆ ನಾನು ಈಗಲೂ ತಯಾರಾಗಿದ್ದೇನೆ.

ಶ್ರೀ ಕಾಗೋಡು ತಿಮ್ಮಪ್ಪ : ಅವತ್ತು ಎಂಟೈರ್ ಬಿಲ್ ರಿಜೆಕ್ಟ್ ಆಯಿತು ತಾವು ಆ ಒಂದು ವಿಚಾರಕ್ಕೆ ವಿರೋಧ ಮಾಡಿದ್ದರೆ ಆ ಒಂದು ಕ್ಲಾಸ್ ಮಾತ್ರ ತಿರಸ್ಕಾರ ಮಾಡಿ, ಉಳಿದಂಥ ಮಸೂದೆಯನ್ನು ಸ್ವೀಕಾರ ಮಾಡುವುದಕ್ಕೆ ಏನೂ ತೊಂದರೆ ಇರಲಿಲ್ಲ. ಆದರೆ, ಪೂರ್ಣ ಮಸೂದೆ ಅಲ್ಲಿ ತಿರಸ್ಕಾರ ಮಾಡಿರಬೇಕಾದರೆ, ಇವತ್ತು ಕೇವಲ ಒಂದು ಅಂಶಕ್ಕೆ ಮಾತ್ರ ನಾವು ವಿರೋಧ ಮಾಡಿದೆವೆಂದು ಹೇಳುವುದು ಅರ್ಥವಿಲ್ಲದ ಮಾತು. ಆದ್ದರಿಂದ ಇವತ್ತು ಯಾವ ಮಸೂದೆಯನ್ನು ರಾಜ್ಯ ಸಭೆಯಲ್ಲಿ ತಿರಸ್ಕಾರ ಮಾಡಿದರೋ? ಅದೇ ಮಸೂದೆಯ

ರಕ್ಷಣೆ ಮುಖಾಂತರ ಈ ತಿದ್ದುಪಡಿ ಆಗಬೇಕಾಗಿತ್ತೆಂದು,ಇದರ ವಿರುದ್ಧ ಹೋಗಿದ್ದೀರಿ. ಎಂದು ಅವರ ಚರ್ಚೆ ಕಾಲದಲ್ಲಿ ಅವರು ಪ್ರಸ್ತಾಪ ಮಾಡಿದ್ದಾರೆ. ನಾನು ಇಷ್ಟೇ ಹೇಳುತ್ತೇನೆ. ನಮ್ಮ ಪಕ್ಷವೇ ಬೇರೆ, ನಮ್ಮ ಪಕ್ಷದ ವಿಚಾರಧಾರೆಗಳೇ ಬೇರೆ ಇವೆ. ಅವರು ಯಾವ ಯಾವ ಕಾರಣಗಳಿಗೆ ವಿರೋಧ ಮಾಡುತ್ತಾರೋ ಅದು ಅಪ್ರಕೃತ. ಆದರೆ ಒಂದು ಪ್ರಾಸಂಗಿಕವಾಗಿ ಚರ್ಚೆ ಕಾಲದಲ್ಲಿ ಹೇಳತಕ್ಕಂತಾದ್ದು ಎಂದರೆ, ನಾನು ಇಷ್ಟಕ್ಕೆ ಮಾತ್ರ ಸೀಮಿತಗೊಳಿಸುತ್ತೇನೆ. ಆದರೆ, 64ನೇ ರಾಜ್ಯಾಂಗದ ತಿದ್ದುಪಡಿ ಪ್ರಕಾರ.

ಶ್ರೀಮಾನ್ ರಾಜೀವ್ ಗಾಂಧಿಯವರು ಪಂಚಾಯತ್ ರಾಜ್ ವ್ಯವಸ್ಥೆಗೆ ಭದ್ರವಾದ ಬುನಾದಿಯನ್ನು ಏನು ರಾಷ್ಟದಲ್ಲಿ ಹಾಕಬೇಕೆಂದು ತಿದ್ದುಪಡಿಯನ್ನು ತಂದಿದ್ದರು ಅದಕ್ಕೆ ವಿರುದ್ಧವಾಗಿ ನೀವು ಮಾಡುತ್ತಿದ್ದೀರಿ ಎಂಬ ವಿಷಯವನ್ನು ಅವರು ಪ್ರಸ್ಥಾವನೆ ಮಾಡುತ್ತಿದ್ದಾರೆ.

ಛೇರ್ಮನ್ : ಸಭೆಯು ಈಗ ಮುಕ್ತಾಯವಾಗಿ ಮತ್ತೆ 2.30ಕ್ಕೆ ಸಮಾವೇಶಗೊಳ್ಳುತ್ತದೆ.

(ಸದನವು 1ಗಂಟೆ 30ನಿಮಿಷಕ್ಕೆ ಮುಕ್ತಾಯವಾಗಿ ಮತ್ತೆ 2.30ಕ್ಕೆ ಸಮಾವೇಶಗೊಳ್ಳಲು ನಿಶ್ಚಯಿಸಿತು).

(ಸದನವು ಮಧ್ಯಾಹ್ನ 2 ಘಂಟೆ 45 ನಿಮಿಷಕ್ಕೆ ಪುನಃ ಸಮಾವೇಶಗೊಂಡಿತು)

(ಉಪಾಧ್ಯಕ್ಷಣಿಯವರಾದ ಶ್ರೀಮತಿ ನಾಗಮ್ಮ ಕೇಶವಮೂರ್ತಿ ಅವರು ಅಧ್ಯಕ್ಷ ಪೀಠದಲ್ಲಿ ಉಪಸ್ಥಿತರಿದ್ದರು).

ಉಪಾಧ್ಯಕ್ಷನಿಯವರು : ಕಾಗೋಡು ತಿಮ್ಮಪ್ಪನವರೇ, ತಾವು ಮುಂದುವರಿಸಿ.

ಶ್ರೀ ಕಾಗೋಡು ತಿಮ್ಮಪ್ಪ : ಸನ್ಮಾನ್ಯ ಉಪಾಧ್ಯಕ್ಷಣಿಯವರೇ, ನಮ್ಮ ವಿರೋಧ ಪಕ್ಷದ ನಾಯಕರು ಇಲ್ಲ. ಅವರು ಬರುತ್ತಾರೆಂದು ನಿರೀಕ್ಷೆಯನ್ನು ಇಟ್ಟುಕೊಂಡಿದ್ದೇನೆ. ಪಾಪ ಅವರಿಗೆ ಉತ್ಸಾಹ ಇಲ್ಲ. ಅದು ಕುಗ್ಗಿ ಹೋಗಿದೆ. ಏಕೆಂದರೆ ಈ ಮಸೂದೆಯ ಮೇಲೆ ಚರ್ಚೆ ಮಾಡುವುದಕ್ಕೆ ಹೆಚ್ಚು ಅವಕಾಶಗಳು ಬೇಕು, ಚರ್ಚೆಗೆ ನಾವು ಪೂರ್ವಭಾವಿ ಸಿದ್ಧತೆಯನ್ನು ಮಾಡಿಕೊಂಡು ಬರಬೇಕಾಗುತ್ತದೆ ಎನ್ನುವ ಅಂಶಗಳನ್ನು ಮುಖ್ಯವಾಗಿ ಇಟ್ಟುಕೊಂಡು ಸಾಕಷ್ಟು ಕಾಲಾವಕಾಶ ಪಡೆದು, ಈಗ ಸದನಕ್ಕೆ ಬಾರದಿರುವುದನ್ನು ನೋಡಿದರೆ ಅವರಿಗೆ ಉತ್ಸಾಹ ಕಡಿಮೆಯಾಗಿದೆ ಎಂದು ಕಾಣುತ್ತದೆ. ಅದು ಏನೇ ಆಗಲಿ, ಕಾಂಗ್ರೆಸ್ ಪಕ್ಷ ಈ ಪಂಚಾಯತ್‌ರಾಜ್ಯ ವ್ಯವಸ್ಥೆಗೆ ಒಂದು ಶಾಶ್ವತವಾದ ಭೂಮಿಕೆಯನ್ನು ರಕ್ಷಣೆಯನ್ನು ಕೊಡಬೇಕೆಂದು, ಹಿಂದಿನ ಪ್ರಧಾನ ಮಂತ್ರಿಗಳಾಗಿದ್ದಂಥ ಮಾನ್ಯ ರಾಜೀವ್ ಗಾಂಧಿಯವರು ರಾಷ್ಟವ್ಯಾಪಿ ಪ್ರಚಾರ ಮಾಡಿ, ಪ್ರವಾಸ ಮಾಡಿ, ಚರ್ಚೆ ಮಾಡಿ, ರಾಜ್ಯಾಂಗಕ್ಕೆ ಒಂದು ತಿದ್ದುಪಡಿಯನ್ನು ತಂದರು.

ಕಾರಣವೇನು ಎನ್ನುವುದಾದರೆ, ನಾವು ವಿರೋಧಪಕ್ಷದಲ್ಲಿದ್ದು ಕೆಲಸ ಮಾಡಿದ್ದೇವೆ. ಮತ್ತು ಕಾಂಗ್ರೆಸ್ ಪಕ್ಷದಲ್ಲಿದ್ದು ಕೆಲಸ ಮಾಡಿದ್ದೇವೆ. ಹೆಚ್ಚುಕಡಿಮೆ ರಾಷ್ಟದಲ್ಲಿ ಎಲ್ಲಾ ಪಕ್ಷಗಳು ಕೂಡ ಈ ಪಂಚಾಯತ್ ರಾಜ್ ವ್ಯವಸ್ಥೆಯ ಸಂಸ್ಥೆಗಳನ್ನು ನಡೆಸಿಕೊಳ್ಳತಕ್ಕಂಥ ರೀತಿಯಲ್ಲಿ ಒಂದಲ್ಲ ಒಂದು ರೀತಿಯಲ್ಲಿ ತಪ್ಪು ಮಾಡಿದ್ದಾರೆ. ಕಾರಣವೇನೆಂದರೆ, ಅವುಗಳಿಗೆ ರಾಜ್ಯಾಂಗಬದ್ಧವಾದ ರಕ್ಷಣೆ ಇರಲಿಲ್ಲ ಎನ್ನುವ ಒಂದೇ ಒಂದು ಕಾರಣಕ್ಕೆ ಈ ಸಂಸ್ಥೆಗಳಿಗೆ ಸಮಯಕ್ಕೆಸರಿಯಾಗಿ ಚುನಾವಣೆಗಳನ್ನು ಮಾಡದೇ ಇರತಕ್ಕಂಥಾದ್ದು ಮತ್ತು ಸಾಕಷ್ಟು ಹಣ ಕೊಡದೆ ಇರತಕ್ಕಂಥಾದ್ದು ಅವುಗಳಿಗೆ ನಿರ್ಧಿಷ್ಟಪಡಿಸಿದ ಅಧಿಕಾರವನ್ನು ಮೊಟಕುಗೊಳಿಸತಕ್ಕಂಥಾದ್ದು, ಇವೆಲ್ಲವೂ ಹೆಚ್ಚುಕಡಿಮೆ ಯಾವುದೇ

ಒಂದು ರಾಜ್ಯ ಎಂದು ಪ್ರತ್ಯೇಕವಾಗಿ ಹೇಳಬೇಕಾದ ಅವಶ್ಯಕತೆ ಇಲ್ಲ ರಾಷ್ಟ್ರದಲ್ಲಿರುವ ಎಲ್ಲಾ ರಾಜ್ಯಗಳು ಕೂಡ 1961ನೇ ಇಸವಿಯಲ್ಲಿ ಅಸ್ತಿತ್ವದಲ್ಲಿ ಬಂದ ಪಂಚಾಯತ್ ವ್ಯವಸ್ಥೆಯನ್ನು ನಿರ್ದಿಷ್ಟವಾದ ರೀತಿಯಲ್ಲಿ ನಡೆಸಿಕೊಂಡು ಹೋಗುವುದರಲ್ಲಿ ವಿಫಲರಾಗಿದ್ದಾರೆ ಎಂದು ಹೇಳಿದರೆ, ಅದು ಕೇವಲ ಕಾಂಗ್ರೇಸ್ ಪಕ್ಷಕ್ಕೆ ಸೀಮಿತವಾಗಿದೆ ಎಂದು ಯಾರೂ ತಪ್ಪು ತಿಳಿದುಕೊಳ್ಳಬಾರದು. ಎಲ್ಲಾ ಪಕ್ಷಗಳು ಇದನ್ನು ಮಾಡಿವೆ. ಆದರೆ ಇದನ್ನು ಮಾಡಬಾರದು, ಇವುಗಳಿಗೆ ಒಂದು ಶಾಶ್ವತವಾದ ರಕ್ಷಣೆ ಬೇಕು. ಅದಕ್ಕೆ ರಾಜ್ಯಾಂಗದಲ್ಲಿ ಅವರ ಅಸ್ತಿತ್ವದ ಬಗ್ಗೆ ಅವರ ಅಧಿಕಾರ ವ್ಯಾಪ್ತಿಯ ಬಗ್ಗೆ ಹಣಕಾಸು ಕೊಡುವ ಬಗ್ಗೆ ವ್ಯವಸ್ಥಿತವಾಗಿ ಒಂದು ಕಾನೂನನ್ನು ರಾಜ್ಯಾಂಗದಲ್ಲಿ ಅಳವಡಿಸಿದರೆ ಮುಂದೆ ಯಾವ ರಾಜ್ಯದಲ್ಲೂ ಕೂಡ ಯಾವುದೇ ಪಕ್ಷ ಅಧಿಕಾರಕ್ಕೆ ಬಂದರೂ ಕೂಡ ಈ ಸಂಸ್ಥೆಗಳಿಗೆ ಇರುವ ಅಧಿಕಾರವನ್ನು ಮೊಟಕು ಮಾಡುವುದಕ್ಕೆ ಹೋಗುವುದಿಲ್ಲ ಎನ್ನುವ ದೃಷ್ಟಿಯಿಂದ ಶ್ರೀಮಾನ್ ರಾಜೀವ್ ಗಾಂಧಿಯವರು ಮೊದಲ ಬಾರಿಗೆ ರಾಜ್ಯಾಂಗದ 64ನೇ ವಿಧಿಗೆ ತಿದ್ದುಪಡಿ ತಂದರು. ಅದು ಲೋಕಸಭೆಯಲ್ಲಿ ಪಾಸಾದ ಮೇಲೆ ರಾಜ್ಯ ಸಭೆಯಲ್ಲಿ ಸೋತು ಹೋಯಿತು. ಈಗ ಅದಕ್ಕೆ ಸಣ್ಣ ಪುಟ್ಟ ಬದಲಾವಣೆಗಳನ್ನು ಮಾಡಿ, ಹಿಂದೆ ಇದ್ದಂತಹ ಶ್ರೀ ವಿ.ಪಿ. ಸಿಂಗ್‌ರವರು ಪ್ರಧಾನಿಗಳಾಗಿದ್ದಾಗ ಅವರು ಕೂಡ ಈ ಮಸೂದೆಯನ್ನು ಮಂಡನೆ ಮಾಡಿದ್ದಾರೆಂದು ಕಾಣುತ್ತದೆ. ಈಗ ನಮ್ಮ ಮಾನ್ಯ ಸದಸ್ಯರಾದ ಜಾಲಪ್ಪನವರು ಹೇಳಿದರು. ಕಾಂಗ್ರೇಸ್‌ಪಕ್ಷಕ್ಕೆ ಈ ಬಗ್ಗೆ ಕಳಕಳಿ ಇಲ್ಲ ಎಂದು, ಆದರೆ ಹಿಂದೆ ನೆಹರೂರವರು ಮಾಡದೆ ಇರತಕ್ಕಂಥ ಕೆಲಸವನ್ನು ಶ್ರೀಮಾನ್ ರಾಜೀವ್ ಗಾಂಧೀಯವರು ಮಾಡಿದ್ದಾರೆಂದು ಹೇಳಿದರೆ, ಈ ಒಂದು ಸಂಸ್ಥೆಗಳ ಬಗ್ಗೆ ಕಾಂಗ್ರೇಸ್ಸ್ ಪಕ್ಷಕ್ಕೆ ಎಷ್ಟು ಕಳಕಳಿ ಇದೆ, ಎಷ್ಟು ಕಾಳಜಿ ಇದೆ, ಎಷ್ಟು ಆಸಕ್ತಿ ಇದೆ ಎನ್ನುವುದನ್ನು ಎತ್ತಿ ತೋರಿಸುತ್ತದೆ. ಆದ್ದರಿಂದ ಇವತ್ತು ಜಿಲ್ಲಾ ಪರಿಷತ್ತು ಮಸೂದೆಗೆ ತಿದ್ದುಪಡಿ ತರುವ ಮುಖಾಂತರ ಈ ಸಂಸ್ಥೆಗಳಿಗೆ ಇರತಕ್ಕಂಥ ಅಧಿಕಾರವನ್ನು ಮೊಟಕು ಮಾಡಿದ್ದಾರೆ, ಅವುಗಳ ಕತ್ತು ಹಿಸುಕುವಂತಹ ಕೆಲಸ ಮಾಡುತ್ತಿದ್ದಾರೆ. ಎನ್ನುವ ದೋಷಾರೋಪಣೆ ಮಾಡುವುದು ಸಾಧುವಲ್ಲ. ಆ ರೀತಿಯಲ್ಲಿ ಎಲ್ಲೂ ಮಾಡಿಲ್ಲ. ಅಥವಾ ಇಡೀ ಕಾನೂನಿಗೆ ಸಮಗ್ರವಾಗಿ ಬದಲಾವಣೆ ಮಾಡಿ ಹೊಸ ಕಾನೂನು ತಂದಿಲ್ಲ. ಇದೊಂದು ಪ್ರಯೋಗ. ಯಾರೂ ಕೂಡ ಪಂಚಾಯತ್ ರಾಜ್ ವ್ಯವಸ್ಥೆಗೆ ಶಾಶ್ವತ ಪರಿಹಾರ ಕೊಟ್ಟಿಲ್ಲ, ರಾಜ್ಯಾಂಗದ 64ನೇ ವಿಧಿಗೆ ತಿದ್ದುಪಡಿಯನ್ನು ಮೊದಲ ಬಾರಿಗೆ ತಂದಾಗ ಈ ಸಂಸ್ಥೆಗಳಿಗೆ ನಿರ್ದಿಷ್ಟವಾದ ಒಂದು ಜವಾಬ್ದಾರಿ ಇರಬೇಕು ಅವರು ಹೇಗೆ ಕೆಲಸ ಮಾಡಬೇಕು ಅವರಿಗೆ ಹಣಕಾಸನ್ನು ಯಾವ ರೀತಿ ಕೊಡಬೇಕು ಮತ್ತು ಈ ಬಗ್ಗೆ ಸರ್ಕಾರಗಳು ವ್ಯವಹಾರಿಕವಾಗಿ ನಡೆದುಕೊಳ್ಳಬೇಕು ಎಂಬ ಬಗ್ಗೆ ಒಂದು ದೃಷ್ಟಿಕೋನವನ್ನು ಕೊಡಲಾಗಿದೆ. ಆ ಮೂಲಭೂತ ದೃಷ್ಟಿಕೋನಗಳಿಂದ ಯಾವುದೇ ಕಾರಣದಿಂದ ಬದಲಾವಣೆ ಆಗಿಲ್ಲ. ಈ ಮಸೂದೆಗೆ ತಿದ್ದುಪಡಿ ತಂದು ಅನಾವಶ್ಯಕವಾಗಿ ತೊಂದರೆ ಮಾಡುತ್ತಿದ್ದಾರೆ ಎನ್ನುವ ವಾದವನ್ನು ಅನಾವಶ್ಯಕವಾಗಿ ನಮ್ಮ ಮಾನ್ಯ ವಿರೋಧಪಕ್ಷದ ನಾಯಕರು ಏನು ಮಾಡುತ್ತಿದ್ದಾರೆ, ಅದು ಸಾಧುವಲ್ಲ, ನಾವು ಎಲ್ಲಿ ಇವರ ಅಧಿಕಾರಮೊಟಕು ಮಾಡಿದ್ದೇವೆ. ನಾವು ಯಾವ ಅಧಿಕಾರವನ್ನು ಕಿತ್ತುಕೊಂಡಿದ್ದೇವೆ. ಇದನ್ನು ದಯವಿಟ್ಟು ಅವರು ಹೇಳಬೇಕು.

ಶ್ರೀ ಎಚ್. ಏಕಾಂತಯ್ಯ : ನಾವು ಮಾತನಾಡುವಾಗ ಅದನ್ನೇ ಹೇಳಿದ್ದೇವೆ. ನಾವು ನಿಮಗೆ ಅಡ್ಡಿ ಮಾಡಬೇಕೆನ್ನುವ ಇಚ್ಛೆ ಇಲ್ಲ, ಮಾನ್ಯ ವಿರೋಧ ಪಕ್ಷದ

ನಾಯಕರು ಬರುತ್ತಾರೆ. ಅವರ ಪರವಾಗಿ ಈಗ ನಾವು ಇಲ್ಲಿದ್ದೇವೆ. ನಾವು ಮಾತನಾಡುವಾಗ ನೀವು ಸಭೆಯಲ್ಲಿರಬೇಕೆಂದು ಮಾತ್ರ ನಾವು ಕೇಳಿಕೊಳ್ಳುತ್ತೇವೆ.

ಶ್ರೀ ಕಾಗೋಡು ತಿಮ್ಮಪ್ಪ : ಇದು ಹೆಸರಿನಿಂದ ಪ್ರಾರಂಭ ಆಯಿತು, ನಮ್ಮ ಮಾನ್ಯ ವಿರೋಧಪಕ್ಷದ ನಾಯಕರು ಹೇಳಿದರು. ಹಿಂದೆ ಇದ್ದಂಥ ಹೆಸರುಗಳು ಹೆಚ್ಚುಕಡಿಮೆ ಜನ ಬಳಕೆಯಲ್ಲಿ ಬಂದಿದೆ. ಆ ಹೆಸರುಗಳನ್ನು ಕಿತ್ತು ಹಾಕುವುದು ಬೇಡ. ಅದರ ಜೊತೆಗೆ ಹೆಸರುಗಳನ್ನು ಬದಲಾವಣೆ ಮಾಡುವುದರಿಂದ ಬೋರ್ಡ್‌ಗಳನ್ನು ಹೊಸದಾಗಿ ಬರೆಸುವುದಕ್ಕೆ ಸುಮಾರು 4 ಕೋಟಿ ರೂಪಾಯಿಗಳು ಖರ್ಚಾಗುತ್ತವೆಂದು ಹೇಳಿದ್ದಾರೆ. ಇದು ಸಾಧುವಾದುದಲ್ಲ, ಹೊಸ ಬೋರ್ಡ್‌ಗಳನ್ನು ಬರೆಸುವುದಕ್ಕೆ 4 ಕೋಟಿ ರೂಪಾಯಿಗಳು ಖರ್ಚಾಗುತ್ತದೆಂದರೆ ನಾನು ನಂಬುವುದಕ್ಕಾಗುವುದಿಲ್ಲ.

ಶ್ರೀ ಸಿ. ಬೈರೇಗೌಡ : ಈ ರಾಜ್ಯದಲ್ಲಿ ಎಷ್ಟು ಪಂಚಾಯಿತಿಗಳು ಇವೆಯೆಂದು ನೀವೇ ಲೆಕ್ಕ ಹಾಕಿ.

ಶ್ರೀ ಕಾಗೋಡು ತಿಮ್ಮಪ್ಪ : ಮಂಡಲ ಪಂಚಾ ಯಿತಿಗಳು ನಮ್ಮ ರಾಜ್ಯದಲ್ಲಿ 2500 ಇವೆ, ಜಿಲ್ಲಾಪರಿಷತ್ತುಗಳು 20 ಇವೆ. ಬೋರ್ಡ್‌ಗಳನ್ನು ಬರೆಸುವುದಕ್ಕೆ ಹೆಚ್ಚು ಅಂದರೆ 10 ಲಕ್ಷ ರೂಪಾಯಿಗಳಾಗಬಹುದು. ಒಟ್ಟು 20 ಜಿಲ್ಲೆಗಳು ಇವೆ. ಒಂದೊಂದು ಜಿಲ್ಲೆಗೆ 50 ಸಾವಿರ ರೂಪಾಯಿಗಳು ಎಂದು ಇಟ್ಟುಕೊಂಡರೂ 10 ಲಕ್ಷ ರೂಪಾಯಿಗಳು ಖರ್ಚು ಆಗಬಹುದು.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ಈಗಾಗಲೇ ಬರೆಸಿರುವ ಬೋರ್ಡ್‌ಗಳು ಹಾಳಾಗಿವೆ. ಮತ್ತೆ ಅವುಗಳನ್ನು ಬರೆಸಿದರೂ ಇಷ್ಟು ಹಣ ಖರ್ಚಾಗುವುದಿಲ್ಲವೆ?

ಶ್ರೀ ಕಾಗೋಡು ತಿಮ್ಮಪ್ಪ : ಆದರೆ ಒಂದು ಅಂಶವನ್ನು ಅವರ ಗಮನಕ್ಕೆ ತರುತ್ತೇನೆ. ಒಂದು ಬೋರ್ಡ್ ಬರೆಸಿದ ಮೇಲೆ ಯಾವ ಜಿಲ್ಲಾಪರಿಷತ್ತು ಮತ್ತು ಮಂಡಲ ಪಂಚಾಯಿತಿ ಶಾಶ್ವತವಾಗಿ ಎಷ್ಟು ಕಾಲ ಇರುತ್ತವೋ, ಅಲ್ಲಿಯವರೆಗೆ ಅವು ಇರುವುದಿಲ್ಲ. ಪ್ರತಿ ಎರಡು ವರ್ಷಕ್ಕೆ ಹೊಸ ಬಣ್ಣ ಹಾಕಿಸುತ್ತೇವೆ, ಫರ್ಲಾಂಗ್ ಕಲ್ಲುಗಳಿಗೆ ಬಣ್ಣ ಹಾಕಿಸಲೇಬೇಕು. ವಾರ್ಷಿಕ ರಿಪೇರಿ ಎಂದು ರಸ್ತೆ ಮೇಲೆ ಮೈಲಿ ಕಲ್ಲುಗಳಿಗೆ ಬಣ್ಣ ಹಾಕಿಸುತ್ತೇವೆ. ಪ್ರತಿಯೊಂದು ಇಲಾಖೆಯಲ್ಲೂ ಕೂಡ ಬಣ್ಣ ಸುಣ್ಣ ಹಾಕತಕ್ಕಂಥ ಕೆಲಸವನ್ನು ನಿರಂತರವಾಗಿ ಮಾಡುತ್ತಾ ಬಂದಿದೆ. ಜನತಾದಳ ಪಕ್ಷ ಅಧಿಕಾರದಲ್ಲಿದ್ದಾಗ 1983 ರಿಂದ 1989ರವರೆಗೆ ಅಂದರೆ 7 ವರ್ಷಗಳ ಕಾಲ ಯಾವುದಕ್ಕೂ ಬೋರ್ಡ್ ಬರೆಸಲಿಲ್ಲವೆ? ಬಣ್ಣ ಹಾಕಿಸಲಿಲ್ಲವೆ? ಯಾವ ಬಿಲ್ಡಿಂಗ್‌ಗೂ ನಾವು ಸುಣ್ಣ ಹಚ್ಚಲಿಲ್ಲವೆಂದು ಹೇಳುವುದಾದರೆ ನಾನು ಹೇಳುತ್ತೇನೆ. ಆದ್ದರಿಂದ ನಾರ್ಮಲ್ ಆಗಿ ಪ್ರತಿ ವರ್ಷ ಸುಣ್ಣ ಬಣ್ಣಕ್ಕೆ ಏನು ಖರ್ಚು ಮಾಡುತ್ತೇವೆಯೋ, ಅದಕ್ಕಿಂತ ಹೆಚ್ಚಿನ ಖರ್ಚು ಈ ಹೆಸರನ್ನು ಅಳಿಸಿ ಬೇರೆ ಹೆಸರುಗಳನ್ನು ಬರೆಸುವುದಕ್ಕೆ ಆಗುವುದಿಲ್ಲ.

ಶ್ರೀ ಹೆಚ್. ಏಕಾಂತಯ್ಯ : ಅದೇ ಮುಖ್ಯ ಕಾರಣವಲ್ಲ, ಸನ್ಮಾನ್ಯ ಕಾಗೋಡು ತಿಮ್ಮಪ್ಪನವರು ವಿಕೇಂದ್ರೀಕರಣದ ತತ್ವ ಒಪ್ಪಿದ್ದರೆ ಅದಕ್ಕೆ ವಿರುದ್ಧವಾಗಿ ಯಾವುದಿದೆ, ಯಾವುದಿಲ್ಲ ಎಂದು ಹೇಳಿದರೆ, ನಾವು ಅದನ್ನು ಕೇಳುತ್ತೇವೆ.

ಶ್ರೀ ಕಾಗೋಡು ತಿಮ್ಮಪ್ಪ : ಅಲ್ಲಿಗೆ ನಿಮ್ಮ ಮೊದಲನೇ ಅರ್ಗ್ಯುಮೆಂಟ್ ಏನಿದೆ ಅದು It collapsed to the ground because they have fairly conceded that there is no case in it.

SRI H. EKANTHAIAH : We have failed but we have not so so fairly failed.

SRI KAGODU THIMMAPPA : Fairly conceded the first issue.

ಶ್ರೀ ಹೆಚ್. ಏಕಾಂತಯ್ಯ : ವಿಕೇಂದ್ರಿಕರಣದ ತತ್ವಕ್ಕೆ ತಾವು ಏನು ಮಾಡಿದ್ದೀರಿ? ಅದನ್ನು ತಾವು ಒಪ್ಪಿಕೊಂಡರೆ ಇದಕ್ಕೆ ಅರ್ಥ ಇರುತ್ತದೆ.

ಶ್ರೀ ಬಿ.ಹೆಚ್. ಬನ್ನಿಕೋಡ್ : ಹೆಸರುಗಳನ್ನು ಬದಲಾಯಿಸುವುದರಿಂದ ಏನು ಸಾರ್ಥಕ?

ಶ್ರೀ ಕಾಗೋಡು ತಿಮ್ಮಪ್ಪ : ಇದು ಸಾರ್ಥಕದ ಪ್ರಶ್ನೆ. ನಾವು ಏನು ಮಾಡಿದ್ದೇವೆ? ಮಂಡಲ ಪಂಚಾಯಿತಿ ಬದಲು ಗ್ರಾಮ ಪಂಚಾಯಿತಿ ಎಂದು ಹೇಳಿದ್ದೇವೆ. ಮಾನ್ಯ ಅಧ್ಯಕ್ಷರೇ, ಇದು ಶತಶತಮಾನಗಳಿಂದ ನಾವು ಗ್ರಾಮ ಪಂಚಾಯಿತಿ ಎಂದು ಹೇಳಿಕೊಂಡು ಬಂದಿರತಕ್ಕದ್ದು ನಿಮಗೂ ಗೊತ್ತಿದೆ. ತೀರ ಜನ ಸಾಮಾನ್ಯರು ಹತ್ತಿರದಲ್ಲಿ ಬಳಸುವಂಥ ಭಾಷೆ ಇದು. ಈ ಬಾಷೆಯನ್ನು ಮೊದಲು ಬಿಟ್ಟದ್ದು ಮೊದಲನೆಯ ಅಪರಾಧ. ಮಂಡಲ ಯಾರು?

ಶ್ರೀ ಎಲ್.ಆರ್. ಶಿವರಾಮೇಗೌಡ : ಈಗಿರುವ ಮಂಡಲ ಪಂಚಾಯಿತಿ ಹೆಸರನ್ನು ಜನರು ನಮ್ಮ ಕಡೆ ಮರ್ಡರ್ ಪಂಚಾಯಿತಿ ಎಂದು ಕರೆಯುತ್ತಿದ್ದಾರೆ.

ಶ್ರೀ ಕಾಗೋಡು ತಿಮ್ಮಪ್ಪ : ನಮ್ಮಲ್ಲಿ ಕೊಳಕು ಮಂಡಲ ಎಂದು ಹೇಳುತ್ತಾರೆ. ಗ್ರಾಮ ಪಂಚಾಯಿತಿ ಎಂದು ನಮ್ಮ ಮೂಲಭೂತ ವ್ಯವಸ್ಥೆಯಾಗಿ ಬಂದುಬಿಟ್ಟಿದೆ. ಗ್ರಾಮದ ಜನರುಗಳಿಂದ ಆಯ್ಕೆ ಮಾಡಿ ಸೇರುವ ಪಂಚಾಯಿತಿಗೆ ಗ್ರಾಮ ಪಂಚಾಯಿತಿ ಎನ್ನುವ ಹೆಸರಿನಿಂದ ಕರೆದರೆ ಎಷ್ಟು ಸುಂದರವಾಗಿ ಇರುತ್ತದೆ? ಎಷ್ಟು ಅಚ್ಚುಮೆಚ್ಚಾಗಿರುತ್ತದೆ. ಅದೇ ಮಂಡಲ ಎಂದರೆ ಹೇಗಿರುತ್ತದೆ?

ಶ್ರೀ ಹೆಚ್. ಏಕಾಂತಯ್ಯ : ಈ ಜ್ಞಾನೋದಯ ಯಾವಾಗ ಆಯಿತು? ಜಾಯಿಂಟ್ ಸೆಲೆಕ್ಟ್ ಕಮಿಟಿಯಲ್ಲಿ ನಿಮ್ಮ ಪಕ್ಷದವರೂ ಇದ್ದರಲ್ಲಾ, ಆಗ ಈ ಜ್ಞಾನೋದಯವಾಗಿರಲಿಲ್ಲವಾ?

ಶ್ರೀ ಕಾಗೋಡು ತಿಮ್ಮಪ್ಪ : ಮಾನ್ಯ ನಜೀರ್ ಸಾಬ್‌ರವರು ಇದನ್ನು ಪ್ರಥಮಬಾರಿಗೆ ಮಂಡನೆ ಮಾಡಿದಾಗ ಅವರಿಗೆ ಸಂಪೂರ್ಣವಾಗಿ ಜ್ಞಾನೋದಯವಾಗಿರಲಿಲ್ಲ. ಚರ್ಚೆ ಮಾಡಿ ಮಾಡಿ ಮಾಡಿದಮೇಲೆ ಹಂತ ಹಂತವಾಗಿ ಬುದ್ಧ ಹೇಗೆ ಕೊನೆಯ ಕಾಲದಲ್ಲಿ ಪರಿಪೂರ್ಣವಾದಂಥ ವ್ಯಕ್ತಿ ಆಗಿದ್ದನೋ, ಹಾಗೆಯೇ ನಜೀರ್ ಸಾಬ್‌ರವರು ಸಹ ಕೊನೆಗೆ ಆದರು. ಏತಕ್ಕೆಂದರೆ ಭೂ ಸುಧಾರಣಾ ಕಾನೂನು ಇದೆ, ಇದನ್ನು ಎಷ್ಟು ಸಾರಿ ಚರ್ಚೆ ಮಾಡಿದ್ದೇವೆ? ಎಷ್ಟು ತಿದ್ದುಪಡಿಯನ್ನು ತಂದಿದ್ದೇವೆ? ಆದುದರಿಂದ ಇವತ್ತು ಈ ಚರ್ಚೆಯನ್ನು ಮಾಡುವುದರಿಂದ, ವಿಮರ್ಶೆಯನ್ನು ಮಾಡುವುದರಿಂದ ಸ್ವಲ್ಪ ಗೊತ್ತಾಗುತ್ತದೆ. ಅದರ ಮೇಲೆ ನಾವು ತಿದ್ದುಪಡಿಯನ್ನು ಮಾಡುತ್ತಿದ್ದೇವೆ. ಆದುದರಿಂದ ಇವತ್ತು ಗ್ರಾಮಪಂಚಾಯಿತಿ ಎನ್ನತಕ್ಕಂಥ ಹೆಸರನ್ನು ಇಟ್ಟಿರುವುದರಿಂದ ಬಹುಶಃ ಈ ರಾಜ್ಯದ ಜನ ಅದಕ್ಕೆ ಸ್ವಾಗತ ನೀಡುವಷ್ಟು ಮಂಡಲ ಪಂಚಾಯಿತಿಗೆ ನೀಡುವುದಿಲ್ಲ ಎನ್ನತಕ್ಕಂಥದ್ದು, ಇದು ಸರ್ವರೂ ಕೂಡಾ ಒಪ್ಪಿರತಕ್ಕಂಥ ಮಾತು. ಜೊತೆಗೆ ತಾಲ್ಲೂಕು ಮತ್ತು ಜಿಲ್ಲಾ ಮಟ್ಟದ ಸಂಸ್ಥೆಗಳಿಗೆ ಏನು ಮಾಡಿದ್ದೇವೆ,

ತಾಲ್ಲೂಕು ಅಭಿವೃದ್ಧಿ ಸಮಿತಿ, ಮಂಡಳಿ ಎಂದು ಮಾಡಿದ್ದೇವೆ. ಜಿಲ್ಲಾಭಿವೃದ್ಧಿ ಮಂಡಲಿ ಎಂದು ಮಾಡಿದ್ದೇವೆ. ಏತಕ್ಕೆಂದು ಹೇಳಿದರೆ ಈ ಅಭಿವೃದ್ಧಿ ಮಂಡಲಿ ಎಂದು ಇತ್ತು. ಏಕೆಂದರೆ ಈ ಸಂಸ್ಥೆಗಳು ಏನು ಇವೆ, ಇವುಗಳ ಮುಖ್ಯವಾದ ಕೆಲಸ ಏನೆಂದರೆ ಗ್ರಾಮಾಂತರ ಪ್ರದೇಶದ ಅಥವಾ ಜಿಲ್ಲಾ ಅಭಿವೃದ್ಧಿ ಕಾರ್ಯದ ಬಗ್ಗೆ ಅವರು ವಿಶೇಷವಾದಂಥ ಗಮನ ಕೊಡುವುದು. ಯಾವ ಸಮಸ್ಯೆಗಳು ಅಭಿವೃದ್ಧಿಯ ದೃಷ್ಟಿಯಿಂದ ಹುಟ್ಟಿವೆ ಅಥವಾ ಯಾವ ಶಾಸನದಿಂದ ಅಭಿವೃದ್ಧಿಯನ್ನು ಮಾಡುವುದಕ್ಕೋಸ್ಕರ ಇವತ್ತು ನಾವು ಸೃಷ್ಟಿ ಮಾಡಿದ್ದೇವೆ, ಈ ಸಂಸ್ಥೆಗಳಿಗೆ ಇರಬೇಕಾದಂಥ ಗೌರವವನ್ನು ನಾವು ಉಳಿಸಬೇಕು ಎಂದು ಹೇಳಿದರೆ ಅವುಗಳ ಹೆಸರನಿಂದಲೇ ಅವರ ಕರ್ತವ್ಯ ಇವತ್ತು ರಿಫ್ಲೆಕ್ಟ್ ಆಗಬೇಕು, ಅಂದರೆ ಅವು ಪ್ರಕಾಶಮಾನವಾಗಿ ಕಾಣಬೇಕು. ಆ ದೃಷ್ಟಿಯಿಂದ ತಂದಿದ್ದೇವೆ. ಈ ಸಂಸ್ಥೆಗಳ ಮುಖ್ಯವಾದ ಕರ್ತವ್ಯ ಮತ್ತು ಜವಾಬ್ದಾರಿ ಎಂದರೆ ಅಭಿವೃದ್ಧಿ

ಶ್ರೀ ಬಿ.ಹೆಚ್. ಬನ್ನಿಕೋಡ್ : ಹಾಗಿದ್ದರೆ ರಾಜ್ಯ ಅಭಿವೃದ್ಧಿ ಸಮಿತಿ ಎಂದು ತಿದ್ದುಪಡಿ ತರುವ ಆಲೋಚನೆ ತಮಗೆ ಇರಬೇಕು ಎಂದು ಕಾಣುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ : ತಮಗೂ ಗೊತ್ತಿರಬಹುದು. ಇಲ್ಲಿ ವಿಧಾನಸೌಧದ ಮುಂದೆ "ಸರ್ಕಾರದ ಕೆಲಸ ದೇವರ ಕೆಲಸ ಎಂದು" ಹನುಮಂತಯ್ಯನವರು ಬರೆಸಿದ್ದರು. ಕಡೆಗೆ ನಿಜಲಿಂಗಪ್ಪನವರು ಬಂದು ಇದನ್ನು ಅಳಿಸಿದರು. ಸರ್ಕಾರದ ಕೆಲಸ ದೇವರ ಕೆಲಸ, ಏತಕ್ಕೆಂದು ಹೇಳಿದರೆ ದೇವರ ಕೆಲಸದಲ್ಲಿ ಯಾರು ಭ್ರಷ್ಟಾಚಾರ ಮಾಡುವುದಿಲ್ಲ, ಆದರೆ ಸರ್ಕಾರದ ಕೆಲಸದಲ್ಲಿ ಅವ್ಯವಹಾರಗಳು ನಡೆಯುತ್ತವೆ, ದೇವರಿಗೆ ಏತಕ್ಕೆ ಭ್ರಷ್ಟಾಚಾರ ಮಾಡುತ್ತೀರಿ ಎಂದು ಅದನ್ನು ಅಳಿಸಿದರು. ಆದುದರಿಂದ ಸರ್ಕಾರಕ್ಕೆ ಇರಬೇಕಾದಂಥ ಕರ್ತವ್ಯಗಳು ಬೇರೆ. ಈ ಸಂಸ್ಥೆಗಳಿಗೆ ಇರಬೇಕಾದಂಥ ಕರ್ತವ್ಯ ಬೇರೆ. ಏಕೆಂದರೆ ಈ ಶಾಸನಸಭೆಯಿಂದ ಒಂದು ಶಾಸನವಾಗಿ ಆ ಶಾಸನದ ಮುಖಾಂತರವಾಗಿ ಅಸ್ತಿತ್ವಕ್ಕೆ ಬಂದಂಥ ಈ ಸಂಸ್ಥೆಗಳು. ಈ ಶಾಸನಸಭೆ ಏನು ಪ್ರಧಾನ ಮಾಡುತ್ತವೆ, ಯಾವ ಅಧಿಕಾರವನ್ನು ನೀಡುತ್ತದೆ, ಆ ಕರ್ತವ್ಯವನ್ನು ಇವತ್ತು ಅವು ನಿರ್ವಹಿಸುತ್ತವೆ. ಏಕೆಂದರೆ ಈ ಸರ್ಕಾರಕ್ಕೆ ಆಡಳಿತ ವ್ಯವಸ್ಥೆಯ ಜವಾಬ್ದಾರಿ ಇದೆ. ಈ ರಾಷ್ಟ್ರದ ಈ ರಾಜ್ಯದ ಎಲ್ಲಾ ವ್ಯವಸ್ಥೆಯ ಬಗ್ಗೆ ಹೊಣೆಗಾರಿಕೆಯನ್ನು ಹೊತ್ತಿರತಕ್ಕಂಥ ಸರ್ಕಾರ ಇರುತ್ತದೆ. ಈ ಎಲ್ಲಾ ಜವಾಬ್ದಾರಿಯನ್ನು ಹೊರಬೇಕು ಎಂದು ಹೇಳಿ ಯಾರೂ ಮಾಡಲಿಲ್ಲ. ಕೊಡುವುದಕ್ಕೆ ಆಗುವುದಿಲ್ಲ, ನಾಳೆ ಪೊಲೀಸ್‌ರನ್ನು ಕೂಡ ಕೊಡಬೇಕು ಎಂದು ಹೇಳಬೇಕಾಗುತ್ತದೆ. ಇದು ಆಗುವುದಿಲ್ಲ. ಆದುದರಿಂದ ಈ ಸಮಸ್ಯೆಗಳನ್ನು ಶಾಸನ ಸಭೆ ಏತಕ್ಕೆ ಸೃಷ್ಟಿ ಮಾಡುತ್ತವೆ ಎಂದು ಹೇಳಿದರೆ, ಅಭಿವೃದ್ಧಿಯ ಬಗ್ಗೆ ಇವಕ್ಕೂ ಕೊಡಲಿ, ಸ್ಥಳೀಯವಾಗಿ ಅಭಿವೃದ್ಧಿಯ ಬಗ್ಗೆ ಲಕ್ಷ್ಯ ಕೊಟ್ಟು ಹೆಚ್ಚು ಆಸಕ್ತಿ ವಹಿಸಿ ಕೆಲಸವನ್ನು ಮಾಡಲಿ ಎನ್ನುವ ದೃಷ್ಟಿಯಿಂದ ಅಭಿವೃದ್ಧಿಗೆ ಸೀಮಿತವಾದಂಥ ಈ ಸಮಸ್ಯೆಗಳನ್ನು ಇವತ್ತು ತಾಲ್ಲೂಕು ಮಟ್ಟದಲ್ಲಿ ತಾಲ್ಲೂಕು ಅಭಿವೃದ್ಧಿ ಮಂಡಲಿ ಎಂದು ಕರೆದರೆ ಅಥವಾ ಜಿಲ್ಲಾಮಟ್ಟದಲ್ಲಿ ಜಿಲ್ಲಾ ಅಭಿವೃದ್ಧಿ ಮಂಡಲಿ ಎಂದು ಕರೆದರೆ ತಪ್ಪೇ ಅಧ್ಯಕ್ಷರೇ ತಾವೇ ಹೇಳಿ. ಹಿಂದೆ ತಪ್ಪು ಮಾಡಿದರು ಎಂದು ಹೇಳಿ ಆ ತಪ್ಪನ್ನೇ ಮುಂದುವರಿಸಿಕೊಂಡು ಹೋಗತಕ್ಕಂಥದ್ದು ಸರಿಯೇ? ಅಲ್ಲ, ಜಿಲ್ಲಾ ಪರಿಷತ್ತು ಎಂದರೇನು? "ಪರಿಷತ್ತು" ಎಂದರೆ ಏನು? ಆದುದರಿಂದ ಹಿಂದೆ ಈ ಹೆಸರುಗಳನ್ನು ಇಡುವಾಗ ಸಾಕಷ್ಟು ಗಮನವನ್ನು ಹರಿಸಿಲ್ಲ, ಸಾಕಷ್ಟು ವಿಚಾರವನ್ನು ಮಾಡಲಿಲ್ಲ. ವಿಚಾರ ವಿನಿಮಯವನ್ನು ಮಾಡಲಿಲ್ಲ, ಆ ಕಾರಣಕ್ಕಾಗಿ ತಾಲ್ಲೂಕು ಪಂಚಾಯಿತಿ ಸಮಿತಿ ಅಥವಾ ಜಿಲ್ಲಾ ಪರಿಷತ್ತು ಎಂದು ಕರೆದರು. ಆದುದರಿಂದ

ಇವತ್ತು ಈ ಹೆಸರಿನಿಂದಲೇ ತಮ್ಮ ಕರ್ತವ್ಯದ ಬಗ್ಗೆ ಲಕ್ಷ್ಯ ಕೊಡಬೇಕು, ಪ್ರಜ್ಞೆ ಇರಬೇಕು ಎನ್ನುವ ಕಾರಣಕ್ಕಾಗಿ ಇವತ್ತು ತಾಲ್ಲೂಕು ಮಟ್ಟದ ಸಂಸ್ಥೆಗೆ ತಾಲ್ಲೂಕು ಅಭಿವೃದ್ಧಿ ಮಂಡಲಿ ಏಂತಲೂ ಜಿಲ್ಲಾ ಮಂಡಲಿಯನ್ನು ಜಿಲ್ಲಾ ಅಭಿವೃದ್ಧಿ ಮಂಡಲಿ ಎಂದು ಕರೆದಿದ್ದೇವೆ. ಆದುದರಿಂದ ಇದರಲ್ಲಿ ಏನು ತಪ್ಪಾಗಿಲ್ಲ. ಇದು ಸರಿ ಇದೆ. ಆದುದರಿಂದ ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಎಲ್ಲಾ ಸ್ನೇಹಿತರು ಕೂಡ ಈ ಹೆಸರಿನ ಮೇಲೆ ಅಷ್ಟೊಂದು ವ್ಯಾಖ್ಯಾನವನ್ನು ಮಾಡುವುದಿಲ್ಲ ಎಂದು ಹೇಳಿ ನಾನು ತಿಳಿದುಕೊಂಡಿದ್ದೇನೆ. ಜೊತೆಗೆ ಇವತ್ತು ಏನಾಗಿದೆ, ಹಿಂದೆ ಮಂಡಲ ಪಂಚಾಯಿತಿಗಳನ್ನು ಅಥವಾ ಪಂಚಾಯಿತಿಗಳನ್ನು ಸೃಷ್ಟಿ ಮಾಡತಕ್ಕಂಥ ಕಾಲದಲ್ಲಿ ಎಂಟು-ಹತ್ತು ಸಾವಿರ ಪ್ರಮಾಣದಲ್ಲಿ ಜನಸಂಖ್ಯೆಯನ್ನು ಇಟ್ಟು ಮಾಡಿದ್ದಾರೆ. ಈಗ ಅದು ಒಂದು ಪ್ರಯೋಗ. ಈಗ ನಾವು ನೋಡುತ್ತಿದ್ದೇವೆ, ಒಂದೊಂದು ಪಂಚಾಯಿತಿಗೆ ಹತ್ತು-ಹದಿನೈದು-ಇಪ್ಪತ್ತೈದು ನಮ್ಮಂಥ ತಾಲ್ಲೂಕುಗಳಲ್ಲಿ ಕೆಲವು ಪಂಚಾಯಿತಿಗಳು 30-40 ಕಿಲೋಮೀಟರ್ ವಿಸ್ತಾರದಲ್ಲಿ ಇವೆ. ಇವತ್ತು ಅಲ್ಲಿನ ಏನು ಹೇಳುತ್ತಾರೆ ಎಂದರೆ ಒಂದು ಸಣ್ಣ ದಾಖಲೆಯನ್ನು ಕೇಳುವುದಕ್ಕೆ, ಸಣ್ಣ ಕೆಲಸಕ್ಕಾಗಿ ಹತ್ತು-ಹದಿನೈದು ಕಿಲೋಮೀಟರ್ ಹೋಗಿ ನಾವು ಬರುವುದು ಕಷ್ಟವಾಗುತ್ತದೆ. ಅದಕ್ಕಾಗಿ ಇಡೀ ಒಂದು ದಿವಸವೇ ಹಾಳಾಗುತ್ತದೆ. ನಮಗೆ 4-5 ಕಿ.ಮೀ. ಅಂತರ ಇದ್ದರೆ ಸುಲಭವಾಗಿ ಅಲ್ಲಿಗೆ ಹೋಗಿ ಬರಬಹುದು ಎನ್ನುವ ದೃಷ್ಟಿಯಿಂದ ನಮ್ಮನ್ನು ವಿಶೇಷವಾಗಿ ಗ್ರಾಮಾಂತರ ಪ್ರದೇಶದ ಜನರು ವಿಶೇಷವಾಗಿ ಪ್ರಸ್ತಾಪ ಮಾಡುತ್ತಾ ಇದ್ದಾರೆ. ಆದುದರಿಂದ ಈ ಪಂಚಾಯತಿಗಳನ್ನು ಸ್ವಲ್ಪ ಸಣ್ಣದಾಗಿ ಮಾಡೋಣ. ಈಗ ಎರಡೂವರೆ ಸಾವಿರ ಪಂಚಾಯಿತಿಗಳು ಇರುವುದರ ಬದಲಾಗಿ ಐದು ಸಾವಿರ ಪಂಚಾಯಿತಿಗಳನ್ನಾಗಿ ಮಾಡೋಣ. ಆದರಿಂದ ಯಾವ ತೊಂದರೆಯೂ ಇಲ್ಲ. ಏಕೆಂದರೆ ಜನರ ಅಧಿಕಾರವನ್ನು ಜನರ ಕೈಗೆ ಕೊಟ್ಟಿದ್ದೇವೆ ಎಂದು ನೀವೆ ಹೇಳಿಕೊಂಡಿದ್ದವರು. ಹಾಗಿದ್ದರೆ ಜನರ ಅಧಿಕಾರವನ್ನು ಜನರ ಹತ್ತಿರ ತೆಗೆದುಕೊಂಡು ಹೋಗುವುದರಲ್ಲಿ ತಪ್ಪೇನಿದೆ ಎಂದು ಕೇಳ ಬಯಸುತ್ತೇನೆ. ಇದಕ್ಕೆ ಹೆಚ್ಚಿನ ಖರ್ಚು ಬರುತ್ತದೆಂದು ಹೇಳಿದರು. ಹಿಂದೆ ಕೂಡ ಈ ಬಗ್ಗೆ ಹಣ ಖರ್ಚುಗುತ್ತಾ ಇರಲಿಲ್ಲವೇ? ಎಷ್ಟು ಹಣವನ್ನು ಹಿಂದೆ ಉಳಿಸಿದ್ದೀರಿ? ಜನರ ಅಧಿಕಾರವು ಅವರಿಗೆ ತೀರ ಹತ್ತಿರದಲ್ಲಿಯೇ ಇರಲಿ ಎನ್ನುವ ಕಾರಣಕ್ಕಾಗಿ ಈ ಒಂದು ತಿದ್ದುಪಡಿಯನ್ನು ಮಾಡುತ್ತಿದ್ದೇವೆ. ಈಗಿನ ವ್ಯವಸ್ಥೆಯಲ್ಲಿ ಮಲೆನಾಡು, ಗುಡ್ಡಗಾಡು, ಪ್ರದೇಶಗಳಲ್ಲಿ ಬಹಳ ಕಷ್ಟವಾಗಿದೆ. ಇದನ್ನು ಜನರೇ ಹೇಳುತ್ತಿದ್ದಾರೆ, ಏನಪ್ಪಾ, ಪಂಚಾಯಿತಿಗಳೇಂದು ಮಾಡಿದ್ದೀರಿ ಸ್ವಾಮಿ, ಅದಕ್ಕೆ ಹೋಗ ಬೇಕಾದರೆ 10-15 ಮೈಲುಗಳಷ್ಟು ನಡೆದುಕೊಂಡು ಹೋಗಬೇಕು, ಕೆಲವು ಕಡೆಗಳಿಗೆ ನಮಗೆ ನಡೆದುಕೊಂಡು ಹೋಗಿಬರುವುದಕ್ಕೆ ಆಗುತ್ತಾ ಇಲ್ಲ, ಅದಕ್ಕಾಗಿ ಮಂಡಲ ಪಂಚಾಯತಿಗಳನ್ನು ಸಣ್ಣದಾಗಿ ಮಾಡಿ ಎಂದು ಜನರು ಹೇಳುತ್ತಾ ಇದ್ದಾರೆ. ಹಿಂದೆ ಎರಡೂವರೆ ಸಾವಿರ ಮಂಡಲ ಪಂಚಾಯತಿಗಳನ್ನು ಮಾಡುವಂಥ ಕಾಲದಲ್ಲಿ ಒಂದು ಮಂಡಲದಲ್ಲಿ ಸುಮಾರು 5-6 ಸಾವಿರ ಜನಸಂಖ್ಯೆ ಇತ್ತು. ಇವೊತ್ತು ಒಂದು ದೊಡ್ಡ ಊರಿನಲ್ಲಿ ಒಂದೆರಡು ಸಾವಿರ ಜನರು ಸಾಮಾನ್ಯವಾಗಿ ಇರುತ್ತಾರೆ. ಅಲ್ಲಿಗೆ ಒಂದು ಲೇಡೀಸ್ ಸೀಟ್ ಮೀಸಲಾಗಿದ್ದರೆ ಇಲ್ಲವೇ ಹರಿಜನರಿಗೆ ಮೀಸಲಾಗಿದ್ದರೆ ಜನರಲ್ ಆಗಿ ಸೀಟ್ ಕೊಡುವುದಕ್ಕೆ ಆಗುವುದಿಲ್ಲ. ಇದರಿಂದಾಗಿ ಇವೊತ್ತು ಅನೇಕ ಕಡೆಗಳಲ್ಲಿ ಅತೃಪ್ತಿಯು ಎದ್ದು ಕಾಣುತ್ತಿದೆ. ದೊಡ್ಡ ಊರಿನಲ್ಲಿ ಒಂದು ಸಾವಿರ ಜನಸಂಖ್ಯೆ ಇದ್ದರೆ ಒಂದು ಸೀಟ್ ನಮಗೆ ಜಾಸ್ತಿ ಬೇಕೆಂದು ಕೇಳಿದರೆ ಅವರಿಗೆ ಕೊಡುವುದಕ್ಕೆ ಆಗುತ್ತಾ ಇಲ್ಲ. ಇವೊತ್ತು ಹರಿಜನರಿಗೆ ಮತ್ತು ಮಹಿಳೆಯರಿಗೆ ರಿಸರ್ವೇಷನ್ ಬಂದಿದೆ. ಹೀಗಾಗಿ

ಗ್ರಾಮಾಂತರ ಪ್ರದೇಶದ ಜನರಿಗೆ ನಮ್ಮಿಂದ ಸೃಷ್ಟಿಯಾಗಿರತಕ್ಕಂಥ ಸಂಸ್ಥೆಗಳಿಗೆ ಸಾಕಷ್ಟು ಪ್ರಾತಿನಿಧ್ಯವಿಲ್ಲದ ಕಾರಣ ನಮ್ಮ ಭಾಗದಲ್ಲಿ ಅಭಿವೃದ್ಧಿ ಕೆಲಸಕಾರ್ಯಗಳು ಸ್ಥಗಿತಕೊಂಡಿವೆ, ನಮ್ಮ ಭಾಗದಲ್ಲಿ ರಸ್ತೆ ಇಲ್ಲ, ಕುಡಿಯುವ ನೀರಿಲ್ಲ ಎಂದು ಹೇಳುತ್ತಾ ದೂರುವ ಜನರು ಬಹಳ ಇದ್ದಾರೆ. ಅಂತೆಯೇ ಒಬ್ಬ ಮಂಡಲ ಪಂಚಾಯತ್ ಅಧ್ಯಕ್ಷರು ಐದು ವರ್ಷಗಳ ಅವಧಿಯಲ್ಲಿ ಎಲ್ಲಾ ತನ್ನ ಪ್ರದೇಶಗಳಿಗೆ ಭೇಟಿ ಕೊಡದೇ ಇರತಕ್ಕಂಥ ಪರಿಸ್ಥಿತಿಯೂ ಇವೊತ್ತು ಬಂದಿದೆ. ಏಕೆಂದರೆ ಅವನಿಗೆ ವಾಹನ ಇಲ್ಲ, ಮೋಟಾರ್ ಬೈಕ್ ಇಲ್ಲ, ನಡೆದುಕೊಂಡು ತನ್ನ ಕ್ಷೇತ್ರದಲ್ಲಿ ಸಂಚರಿಸಬೇಕು. ಆದರೆ ಜನರು ಏನು ಸ್ವಾಮಿ ಮಂಡಲ ಅಧ್ಯಕ್ಷರನ್ನು ನಾನು ಕಣ್ಣಲ್ಲಿ ಕೂಡ ಕಂಡಿಲ್ಲ ಎಂದು ಹೇಳುತ್ತಿರುತ್ತಾರೆ. ಅಧ್ಯಕ್ಷರನ್ನು ಕೇಳಿದರೆ ನಾನು ಎಲ್ಲ ಕಡೆಗೂ ಹೇಗೆ ಹೋಗಲು ಸಾಧ್ಯ ಎಂದು ಹೇಳುತ್ತಾರೆ. ಆ ಒಂದು ಕಾರಣಕ್ಕಾಗಿ ಸಣ್ಣ ಪಂಚಾಯಿತಿಗಳನ್ನು ಮಾಡಿದರೆ, ಜನರಿಗೆ ನೇರವಾಗಿ ತೀರಾ ಹತ್ತಿರದಲ್ಲಿ ಈ ತರಹದ ಸಂಸ್ಥೆಗಳು ಇರುವಂತೆ ಆಗುತ್ತದೆ. ಎರಡನೇಯದಾಗಿ ಇವೊತ್ತು ಎಲ್ಲರೂ ಕೂಡ ಚುನಾಯಿತ ಸಂಸ್ಥೆಗಳಲ್ಲಿ ಭಾಗವಹಿಸಬೇಕೆಂದು ಉದ್ದೇಶವನ್ನು ಹೊಂದಿರುತ್ತಾರೆ. ಎಲ್ಲಾ ವರ್ಗದವರೂ ಕೂಡ ಇಂದು ಪ್ರಾತಿನಿಧ್ಯವನ್ನು ಕೇಳುತ್ತಾ ಇದ್ದಾರೆ, ಆ ಕಾರಣಕ್ಕಾಗಿ ಇವೊತ್ತು ಐದು ಸಾವಿರ ಪಂಚಾಯಿತಿಗಳನ್ನು ಮಾಡಿದರೆ ಸಾಕಷ್ಟು ಜನರಿಗೆ ಪ್ರಾತಿನಿಧ್ಯವನ್ನು ಕೊಡುವುದಕ್ಕೆ ಅನುಕೂಲವಾಗುತ್ತದೆ. ಸರಾಸರಿ ಒಂದು ಪಂಚಾಯಿತಿಯಲ್ಲಿ 15 ಜನರು ಎಂದು ಕೊಂಡರೆ ಐದು ಸಾವಿರ ಪಂಚಾಯತಿಗಳಲ್ಲಿ ಎಷ್ಟು ಜನರಿಗೆ ಪ್ರಾತಿನಿಧ್ಯ ಸಿಗುತ್ತದೆ ಎಂದು ನೋಡಿ.

ಶ್ರೀ ಸಿ. ಬೈರೇಗೌಡ : ಹೀಗೆ ಜಾಸ್ತಿ ಮಾಡಿದರೆ ಒಂದು ತಿಂಗಳಿಗೆ ಸುಮಾರು ಒಂದು ಕೋಟಿ 5 ಲಕ್ಷ ರೂಪಾಯಿಗಳ ಅಧಿಕ ವೆಚ್ಚ ಬರುತ್ತದೆ. ಹೀಗಾಗಿ ಒಂದು ವರ್ಷದಲ್ಲಿ ಐದು ಸಾವಿರ ಮಂಡಲಗಳಿಗೆ 12-13 ಕೋಟಿ ರೂಪಾಯಿಗಳ ಅಧಿಕಾರಿಕ ವೆಚ್ಚ ಸರಕಾರಕ್ಕೆ ಬರುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ : ಹಣದ ವಿಚಾರದಲ್ಲಿ ಹೇಳುವುದಾದರೆ, ಹಳ್ಳಿಗಳಲ್ಲಿ ಪಂಚಾಯಿತಿಯವರಿಗೆ 10 ರೂ.ಗಳನ್ನು ಕೊಡುತ್ತೀರಿ, ಶಾಸಕರುಗಳು ಮಾತ್ರ ಜಾಸ್ತಿ ಮಾಡಿಕೊಳ್ಳುತ್ತಾರೆ ಎಂದು ಹೇಳುತ್ತಾರೆ.

ಶ್ರೀ ಸಿ. ಬೈರೇಗೌಡ : ಪಂಚಾಯಿತಿಗಳ ಸಂಖ್ಯೆ ಜಾಸ್ತಿ ಮಾಡುವುದರಿಂದ ಖರ್ಚು ಕೂಡ ಅಧಿಕವಾಗುತ್ತದೆ. ಒಂದು ಮಂಡಲಕ್ಕೆ 5 ಸಾವಿರ ರೂ.ಗಳ ವೆಚ್ಚವಾದರೆ ಒಂದು ವರ್ಷದಲ್ಲಿ ಸುಮಾರು 12-13 ಕೋಟಿ ರೂಪಾಯಿಗಳಷ್ಟು ಅಧಿಕ ಖರ್ಚು ಆಗುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ : ಮಾನ್ಯ ಪ್ರೊ: ನಂಜುಂಡಸ್ವಾಮಿಯವರು ಪದೇ ಪದೇ ಹೇಳುತ್ತಾ ಇರುತ್ತಾರೆ. ಸರಕಾರದವರು ಹಳ್ಳಿಗರಿಗೆ ಏನು ಕೊಟ್ಟಿದ್ದೀರಿ ಎಂದು ಕೇಳುತ್ತಾರೆ. ಕೃಷಿಕರಿಗೆ ಏನು ಕೊಟ್ಟಿದ್ದೀರಿ ಎಂದು ಹೇಳುತ್ತಾರೆ.

ಶ್ರೀ ಆರ್.ವಿ. ದೇಶಪಾಂಡೆ : ಬೈರೇಗೌಡರು ಹೇಳುತ್ತಿರುವುದು, ಅಧಿಕ ವೆಚ್ಚದ ಮೂಲಕ ಸಂಬಳದ ರೀತಿಯಲ್ಲಿ ಹೆಚ್ಚಿಗೆ ಹೋಗುತ್ತದೆ, ಅದು ಹಳ್ಳಿಗರಿಗೆ ಸರಕಾರದವರು ಕೊಡುವ ಸಹಾಯದ ಹಣವಲ್ಲ.

ಶ್ರೀ ಕಾಗೋಡು ತಿಮ್ಮಪ್ಪ : 5 ಸಾವಿರ ಖರ್ಚಾಗುವುದಿಲ್ಲ, ಒಂದು ವೇಳೆ ಖರ್ಚಾಯಿತು ಎಂದು ಇಟ್ಟುಕೊಳ್ಳೋಣ. ನಾನು ಹೇಳುತ್ತೇನೆ, ಶೇಕಡ 80 ರಷ್ಟಿರುವ ಗ್ರಾಮೀಣ ಪ್ರದೇಶದ ಜನರ ಸಮಸ್ಯೆ ಪರಿಹಾರಕ್ಕಾಗಿ ಅದನ್ನು ಕೊಡುವುದರಿಂದ

ಇದು ದೊಡ್ಡ ಖರ್ಚುಗುವುದಿಲ್ಲ. ಏಕೆಂದರೆ ಇಂದು 10 ಜನ ಇದ್ದ ಪ್ರತಿನಿಧಿಗಳ ಬದಲು 20 ಜನ ಪ್ರತಿನಿಧಿಗಳಾಗುತ್ತಾರೆ. ಅಷ್ಟರಮಟ್ಟಿಗೆ ಜನರಿಗೆ ಅವಕಾಶ ಒದಗಿಸಿದಂತಾಯಿತು. ಆದ್ದರಿಂದ ಇದನ್ನೆಲ್ಲ ಹಣದ ದೃಷ್ಟಿಯಿಂದ ಅಲೋಚನೆ ಮಾಡಬಾರದು. ಅಧ್ಯಕ್ಷರೇ, 10 ವರ್ಷದ ಹಿಂದೆ ಪಂಚಾಯಿತಿಗಳು ಬೀದಿ ದೀಪಕ್ಕಾಗಿ ಎಷ್ಟು ಖರ್ಚುಮಾಡುತ್ತಿದ್ದವೋ ಇವತ್ತು ಅದರ ನಾಲ್ಕರಷ್ಟು ಜಾಸ್ತಿಯಾಗಿದೆ. ಏಕೆಂದರೆ ಇಂದು ಹೊರೆಯನ್ನು ಹೊರಬೇಕಾಗುತ್ತದೆ. ಇವತ್ತು ಎಲ್ಲ ಗ್ರಾಮಗಳಿಗೂ ವಿದ್ಯುಚ್ಛಕ್ತಿ ಕೊಡಲೇಬೇಕು. ನಂತರ ಬೀದಿ ದೀಪ ಹಾಕಲೇಬೇಕು, ಅದಕ್ಕಾಗಿ ಹೆಚ್ಚಿನ ಖರ್ಚು ಬರುತ್ತದೆ.

ಒಬ್ಬ ಮಾನ್ಯ ಸದಸ್ಯರು : ಮಂಡಲ ಪಂಚಾಯಿತಿಗಳು ಬಂದ ಮೇಲೆ ಬೀದಿ ದೀಪಗಳೇ ಎಲ್ಲೂ ಇಲ್ಲ ಬಿಡಿ.

(ಗೊಂದಲ)

ಶ್ರೀ ಸಿ. ಬೈರೇಗೌಡ : ನೀವು ಬೀದಿದೀಪಕ್ಕೆಂದು ಹಣ ಖರ್ಚುಮಾಡಿದ್ದದ್ದಿರೆ ನಮಗೆ ಸಂತೋಷವಾಗುತ್ತಿತ್ತು.

ಉಪಾಧ್ಯಕ್ಷರು : ಅವರು ಈಲ್ಡ್ ಆಗಿಲ್ಲ, ಅವರು ಮಾತನಾಡಿದ ಮೇಲೆ ನೀವು ಮಾತನಾಡಿ.

(ಗೊಂದಲ)

ಶ್ರೀಮತಿ ಚಂದ್ರಪ್ರಭಾ ಅರಸ್ : ಉಳಿತಾಯ ಯೋಜನೆ ಮೂಲಕ ಇಲ್ಲವೇ ಖರ್ಚುವೆಚ್ಚ ಸರ್ಕಾರಕ್ಕೆ ಬೇಳೆದ ರೀತಿ ನಾವು ನೀವು ಸಲಹೆಗಳನ್ನು ನೀಡೋಣ. ಈಗಾಗಲೇ ಸಾಕಷ್ಟು ರೆವಿನ್ಯೂ ಅಧಿಕಾರಿಗಳಿದ್ದಾರೆ. ಅವರನ್ನು ಸರಿಯಾದ ರೀತಿ ಉಪಯೋಗಿಸಿಕೊಳ್ಳಲು ರಚನಾತ್ಮಕ ಸಲಹೆಗಳನ್ನು ನಾವು ನೀವು ಕೊಡೋಣ. ಈಗ ಇರುವ ಸ್ಟಾಫೇ ಜಾಸ್ತಿ, ಅವರನ್ನೇ ಈಗಿನ ಯೋಜನೆಗಳಲ್ಲಿ ತೊಡಗಿಸೋಣ.

(ಗೊಂದಲ)

ಶ್ರೀ ಎಸ್. ಹೆಚ್. ಕೌಜಲಗಿ : ಈಗ ಎಲ್ಲಿಯೂ ಅಭಿವೃದ್ಧಿ ಕೆಲಸಗಳಾಗುತ್ತಿಲ್ಲ, ನಮ್ಮ ಭಾಗದಲ್ಲಿ 600 ಐಪಿಸೆಟ್‌ಗೆ ವಿದ್ಯುತ್ ಕೊಡುತ್ತೇವೆಂದು ಹೇಳಿ ಇವತ್ತು 140ಕ್ಕೂ ಕೊಟ್ಟಿಲ್ಲ, ಅದನ್ನು ಮಾಡುವುದನ್ನು ಬಿಟ್ಟು ಗ್ರಾಮಪಂಚಾಯಿತಿ ಮಾಡುತ್ತೇವೆಂದು ಹೊರಟಿದ್ದಾರೆ. ಮೊದಲು ಈ ಸರ್ಕಾರ ಸುಧಾರಿಸಲಿ ಆಮೇಲೆ ಮಂಡಲ ಪಂಚಾಯಿತಿ ಮಾತು.

(ಗೊಂದಲ)

ಶ್ರೀ ಎಲ್. ಆರ್. ಶಿವರಾಮೇಗೌಡ : ಮಾನ್ಯ ದೇಶಪಾಂಡೆಯವರು ವಿದ್ಯುತ್ ದೀಪ ಕೊಡಲಿಕ್ಕೆ ಸರ್ಕಾರದ ಹತ್ತಿರ ಕಂಬ ಇಲ್ಲ ಎಂದರು. ಅಧ್ಯಕ್ಷರೇ ಕಳೆದ 8 ವರ್ಷದಿಂದ ಏನಾದರೂ ಈ ಕೆ.ಇ.ಬಿ. ಹಾಳಾಗಿದ್ದರೆ ಅದು ಇವರ ಕಾಲದಲ್ಲೇ ಹೊರತು ಇನ್ನ್ಯಾರ ಕಾಲದಲ್ಲೂ ಅಲ್ಲ.

(ಗೊಂದಲ)

ಶ್ರೀ ಎಸ್.ಹೆಚ್. ಕೌಜಲಗಿ : 65 ಸಾವಿರ ಇಲ್ಲವೇ 70 ಸಾವಿರ ಐಪಿ ಸೆಟ್‌ಗಳಿಗೆ ವಿದ್ಯುತ್ ಕೊಡುತ್ತೇವೆ ಎಂಬುದೆಲ್ಲ ಇವರ ಟಿ.ವಿ ಪ್ರಚಾರ ಅಷ್ಟೆ, ನಿಜವಾಗಿ ಕಾರ್ಯಗತ ಆಗಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ : ವಿರೋಧ ಪಕ್ಷದ ಸದಸ್ಯರಿಗೆ ಒಂದು ಮಾತು ಹೇಳುತ್ತೇನೆ. ನಾವು ಸರ್ಕಾರದಲ್ಲಿದ್ದಾಗ ಬೀದಿ ದೀಪದ ಬಿಲ್ಲನ್ನು ಪಂಚಾಯಿತಿಯವರು

ಕೊಡಬೇಕಾಗಿಲ್ಲ, ಸರ್ಕಾರವೇ ಕೊಡಬೇಕೆಂದು ಮಾಡಿದ್ದೆವು. ಆದರೆ ಮತ್ತೆ ಪಂಚಾಯಿತಿಯವರೇ ನಮ್ಮ ಪಂಚಾಯಿತಿಯಲ್ಲಿ ಕುಡಿಯುವ ನೀರಿಗೆ ನಲ್ಲಿ ನೀರಿನ ವ್ಯವಸ್ಥೆ ಇರಲಿಲ್ಲ. ಈಗ ಇಂತಹ ನೀರಿನ ವ್ಯವಸ್ಥೆ ಮಾಡಲಾಗಿದೆ. ಆ ನೀರನ್ನು ಪಂಪ್ ಮಾಡುವುದಕ್ಕಾಗಿ ಪ್ರತಿ ತಿಂಗಳೂ ಎರಡು ಸಾವಿರ ರೂಪಾಯಿಗಳನ್ನು ಪ್ರತಿ ಮಂಡಲ ಪಂಚಾಯಿತಿ ವಿದ್ಯುತ್‌ಗಾಗಿ ಕಟ್ಟಬೇಕಾಗಿದೆ. ಇಂತಹ ಕೆಲವು ಅಭಿವೃದ್ಧಿ ಕಾರ್ಯಗಳು ಏನಿವೆ ಅದನ್ನು ಮಾಡಲೇಬೇಕಾಗುತ್ತದೆ. ಹಿಂದೆ ನಮ್ಮ ಪ್ರಧಾನಿಯಾಗಿದ್ದ ರಾಜೀವ ಗಾಂಧಿಯವರು ಜವಾಹರ್ ರೋಜ್‌ಗಾರ್ ಯೋಜನೆಯ ಅಡಿಯಲ್ಲಿ ಅವುಗಳಿಗೆ ಹಣ ರಿಲೀಸ್ ಮಾಡಿದರು.

3.15 ಎ.ಎಂ.

ಮಾನ್ಯ ಬೈರೇಗೌಡರು ತಾಲ್ಲೂಕು ಬೋರ್ಡ್‌ನ ಅಧ್ಯಕ್ಷರಾಗಿದ್ದರು, ನಾನು ಕೂಡ ಆಗಿದ್ದೆ. ಆಗ ಪಂಚಾಯಿತಿಯಲ್ಲಿ ಎಷ್ಟು ಹಣ ಇರುತ್ತಿತ್ತು ಎಂದು ನನಗೂ ಗೊತ್ತು, ತಮಗೂ ಕೂಡ ಗೊತ್ತಿದೆ. ಇವತ್ತು ರಾಜೀವ್ ಗಾಂಧಿಯವರು ಒಂದೊಂದು ಮಂಡಲಕ್ಕೆ ಕನಿಷ್ಠ ಎಂದು ಹೇಳಿದರೆ ಇವತ್ತು ಸುಮಾರು ಎರಡು ಲಕ್ಷ ರೂಪಾಯಿಗಳನ್ನು ನೇರವಾಗಿ ಬಿಟ್ಟರು. ಈ ಹಣ ಏತಕ್ಕೆ ಬಂತು? ಆದುದರಿಂದ ಇವತ್ತು ಈ ದೇಶದ ದೃಷ್ಟಿಯಲ್ಲಿ ಹೊಸ ಹೊಸ ಕಾರ್ಯಕ್ರಮಗಳನ್ನು ಮಾಡಿ, ಹೆಚ್ಚ ಹೆಚ್ಚು ಹಣವನ್ನು ಕೊಡಬೇಕಾದಂಥ ಅಗತ್ಯ ಇದೆ ಎನ್ನತಕ್ಕಂಥ ಸಿದ್ಧಾಂತಕ್ಕೆ ನಾವು ಕಟ್ಟುಬಿದ್ದಾಗ ಈ ಐದು ಸಾವಿರ ರೂಪಾಯಿ ತಿಂಗಳಿಗೆ ಖರ್ಚಾಗುತ್ತದೆ ಎಂದು ಹೇಳಿ ಕೈಯನ್ನು ಅಲ್ಲಾಡಿಸುತ್ತಾ ಕುಳಿತುಕೊಂಡರೆ ಹಣ ಬರುತ್ತದೆಯೇ? ಮೊದಲಬಾರಿಗೆ ಇಡೀ ರಾಷ್ಟ್ರದಲ್ಲಿ ಇರತಕ್ಕಂಥ ಎಷ್ಟು ಪಂಚಾಯಿತಿಗೆ ಹಣವನ್ನು ಕೊಟ್ಟಿದ್ದಾರೆ? ಇವತ್ತು ಜವಾಹರ್ ರೋಜ್‌ಗಾರ್ ಯೋಜನೆಯ ಹಣ ನಿಮಗೆ ಬಾರದೇ ಹೋಗಿದ್ದರೆ ಇವತ್ತು ಮಂಡಲ ಪಂಚಾಯಿತಿಗಳನ್ನು ನಡೆಸುವುದು ಗೊತ್ತಾಗುತ್ತಿತ್ತು? ಬೀದಿ ದೀಪಕ್ಕೂ ಹಣವನ್ನು ಖರ್ಚುಮಾಡುವುದಕ್ಕೆ ನಿಮ್ಮಿಂದ ಆಗುತ್ತಿರಲಿಲ್ಲ. ಇವತ್ತು ಈ ಹಣ ಬಂದಿರುವ ಕಾರಣಕ್ಕಾಗಿ ಇವತ್ತು ನಮ್ಮ ಮರ್ಯಾದೆಯನ್ನು ಮುಚ್ಚಿಕೊಳ್ಳುವುದಕ್ಕೆ ಅವಕಾಶ ಸಿಕ್ಕಿದೆ. ಆದುದರಿಂದ ಇವತ್ತು ಇದರ ಬಗ್ಗೆ ವಿಚಾರವನ್ನು ಮಾಡೋಣ.

ಶ್ರೀ ಆರ್.ವಿ. ದೇಶಪಾಂಡೆ : ರೋಜ್‌ಗಾರ್ ಹಣದಿಂದ ಬೀದಿ ದೀಪಕ್ಕೆ ಖರ್ಚು ಮಾಡುವುದಕ್ಕೆ ಆಗುತ್ತದೆಯೇ? ದಯವಿಟ್ಟು ಈ ಯೋಜನೆಯ ಬಗ್ಗೆ ಸ್ಪಡಿ ಮಾಡಿ. ರೋಜ್‌ಗಾರ್ ಯೋಜನೆ ಎಂದರೆ ಏನು? ಈ ಹಣ ಎಲ್ಲಿಂದ ಬರುತ್ತದೆ? ಕೇಂದ್ರ ಸರ್ಕಾರ ಎಷ್ಟು ಹಣವನ್ನು ಕೊಡುತ್ತಿದೆ? ಇದರ ನಿಯಮಗಳೇನು? ಯಾವುದರ ಬಗ್ಗೆ ಹಣವನ್ನು ಖರ್ಚು ಮಾಡಬೇಕು? ಈ ಹಣವನ್ನು ಬೀದಿ ದೀಪಕ್ಕೆ ಹಣವನ್ನು ಖರ್ಚು ಮಾಡಬೇಕು ಎಂದು ಹೇಳಿದರೆ ಹೇಗೆ? ನೀವು ಎಲ್ಲಿಗೆ ಹೋಗಿ ಮುಟ್ಟುತ್ತೀರೋ ಎಂದು ಗೊತ್ತಾಗುತ್ತಿಲ್ಲ.

(ಗೊಂದಲ)

ಶ್ರೀ ಕಾಗೋಡು ತಿಮ್ಮಪ್ಪ : ಜವಾಹರ್ ರೋಜ್‌ಗಾರ್ ಯೋಜನೆಯಲ್ಲಿ ಬಂದಂಥ ಹಣವನ್ನು ಪಂಚಾಯಿತಿಯ ಅಭಿವೃದ್ಧಿಯ ಕಾರ್ಯಕ್ಕೋಸ್ಕರ ಖರ್ಚು ಮಾಡುವುದರಿಂದ ನೀವು ತಲಾನುಭಾರದಿಂದ ಕೊಡುತ್ತಿರತಕ್ಕಂಥ ಹಣ, ಮನೆ ಕಂದಾಯದಿಂದ ಬರತಕ್ಕಂಥ ಹಣ, ಇವನ್ನೆಲ್ಲಾ ಬೀದಿ ದೀಪಕ್ಕಾಗಿ, ಸಿಬ್ಬಂದಿ ಖರ್ಚಿಗೆ ಅಥವಾ ಇನ್ನಿತರೆ ಖರ್ಚಿಗಾಗಿ ಮಾಡತಕ್ಕಂಥ ಅವಕಾಶ ಸಿಕ್ಕಿತು. ಒಂದು ವೇಳೆ ಈ ಹಣ ಬಾರದೇ ಹೋಗಿದ್ದಿರೆ ನೀವು ತಲಾನುಭಾರ ಕೊಡತಕ್ಕಂಥ ಹಣದಿಂದ ಊರಿನ ಬೀದಿ ದೀಪಕ್ಕೂ ಖರ್ಚು ಮಾಡುವುದಕ್ಕೂ ನಿಮ್ಮ ಹತ್ತಿರ ಆಗುತ್ತಿರಲಿಲ್ಲ.

ಇವತ್ತು ಏನಾದರೂ ಪಂಚಾಯಿಗಳು ಅಸ್ತಿತ್ವದಲ್ಲಿದ್ದು ಕೆಲಸವನ್ನು ಮಾಡುತ್ತಿವೆ ಎಂದು ಹೇಳಿದರೆ ತಮಗೆ ಬರತಕ್ಕಂಥ ಸಂಪನ್ಮೂಲದಿಂದ ಇವತ್ತು ಸಿಬ್ಬಂದಿ ವೆಚ್ಚ, ದೀಪದ ಖರ್ಚು, ಇನ್ನಿತರೆ ಖರ್ಚನ್ನು ನಿಭಾಯಿಸಿಕೊಂಡು ಅಭಿವೃದ್ಧಿ ಕಾರ್ಯವನ್ನು ಜವಾಹರ್ ರೋಜ್‌ಗಾರ್ ಯೋಜನೆಯಿಂದ ಮಾಡುತ್ತಿದ್ದೇವೆ. ಅದಕ್ಕೋಸ್ಕರ ಇವತ್ತು ಇಂಥ ನಿಯಮಕ್ಕೆ ನಾವು ಕಟ್ಟುಬಿದ್ದಿದ್ದೇವೆ. ಇವತ್ತು ಒಂದಲ್ಲ, ಎರಡು ಲಕ್ಷ ರೂಪಾಯಿಗಳನ್ನು ಕೊಡಬೇಕು ಎಂದು ತೀರ್ಮಾನವನ್ನು ಮಾಡಿದ್ದೇವೆ. ಒಂದು ಮಂಡಲಕ್ಕೆ ಐದು ಲಕ್ಷ ರೂಪಾಯಿ ಹಣವನ್ನು ಅಭಿವೃದ್ಧಿಗೋಸ್ಕರ ಕೊಡೋಣ ಎಂದು ಮಾಡಿದ್ದೇವೆ.

(ಗೊಂದಲ)

ಉಪಾಧ್ಯಕ್ಷರು : ಶ್ರೀಯುತ ಬನ್ನಿಕೋಡ್‌ರವರೇ, ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಬಿ.ಹೆಚ್. ಬನ್ನಿಕೋಡ್ : ಈ ಒಂದು ತಿದ್ದುಪಡಿಯಲ್ಲಿ ಹೆಚ್ಚಿನ ಹಣಕಾಸನ್ನು ಕೊಡುವ ಬಗ್ಗೆ ಎಲ್ಲಿದೆ ಎಂದು ಹೇಳಿ.

(ಗೊಂದಲ)

ಶ್ರೀ ಕಾಗೋಡು ತಿಮ್ಮಪ್ಪ : ಆದುದರಿಂದ ಒಂದು ಸಣ್ಣ ಮಂಡಲ ಪಂಚಾಯಿತಿಯನ್ನು ನಾವು ಮಾಡುವುದರಿಂದ ಇವತ್ತು ಹಣ ಖರ್ಚಾಗುತ್ತದೆ ಎನ್ನತಕ್ಕಂಥ ವಾದವನ್ನು ವಿರೋಧ ಪಕ್ಷದವರು ಏನು ಹೇಳುತ್ತಿದ್ದಾರೆ, ಅದರಲ್ಲಿ ಹುರುಳು ಇಲ್ಲ, ಸತ್ಯಾಂಶ ಇಲ್ಲ. ಇವತ್ತು ಒಂದು ಸಣ್ಣ ಪಂಚಾಯಿತಿಯನ್ನು ಮಾಡಲೇಬೇಕು. ಜನರ ಹತ್ತಿರದಲ್ಲಿ ಈ ಸಂಸ್ಥೆಗಳು ಇರಲೇಬೇಕು. ಜೊತೆಗೆ ಹೆಚ್ಚು ಅಭಿವೃದ್ಧಿಯನ್ನು ಸಾಧಿಸಲೇಬೇಕು. ಜೊತೆಗೆ ಹೆಚ್ಚು ಪ್ರಾತಿನಿಧ್ಯವನ್ನು ಜನರಿಗೆ ಕೊಡುವಂಥ ಕೆಲಸವನ್ನು ನಾವು ಮಾಡಲೇಬೇಕು. ಆ ದೃಷ್ಟಿಯಿಂದ ವಾಸ್ತವಿಕ ಪರಿಸ್ಥಿತಿಯನ್ನು ಅಧ್ಯಯನ ಮಾಡಿ. ವಿಮರ್ಶೆ ಮಾಡಿ ಇವತ್ತು ಸಣ್ಣ ಪಂಚಾಯಿತಿಯನ್ನು ಮಾಡಬೇಕು ಎಂದು ನಾವು ಒಂದು ತಿದ್ದುಪಡಿಯನ್ನು ತಂದಿದ್ದೇವೆ. ಇದರಿಂದ ಏನು ತಪ್ಪು? ಇದರಲ್ಲಿ ಏನು ತೊಂದರೆ? ಹತ್ತು ಸಾವಿರ ಪ್ರತಿನಿಧಿಗಳು ಇರುವುದಕ್ಕೆ ಬದಲಾಗಿ 20 ಸಾವಿರ ಜನ ಇರುತ್ತಾರೆ; ಇದರಲ್ಲಿ ಏನು ತೊಂದರೆ? ಐದು ಸಾವಿರ ಖರ್ಚು ಮಾಡತಕ್ಕಂಥ ಕಡೆಗೆ ಹತ್ತು ಸಾವಿರ ರೂಪಾಯಿ ಖರ್ಚು ಮಾಡಿದರೆ ಎರಡು ಪಂಚಾಯಿತಿಗಳಾಗುತ್ತದೆ. ಆದುದರಿಂದ ಇಂಥ ಸಣ್ಣ ಜಿಪುಣತನವನ್ನು ಮಾಡುವುದಕ್ಕೆ ನಾವು ಹೋಗಬಾರದು. ಇವತ್ತು ಪಂಚಾಯಿತಿಗಳಿಗೆ ಅರುವತ್ತು ಸಾವಿರ ರೂಪಾಯಿ ಸಿಬ್ಬಂದಿ ವೆಚ್ಚಕ್ಕೆ ಹೋದರೂ ಕೂಡ ಚಿಂತೆ ಇಲ್ಲ, ಆರು ಲಕ್ಷ ರೂಪಾಯಿಗಳನ್ನು ಇವತ್ತು ಕೊಡೋಣ. ಅಲ್ಲೆಲ್ಲಾ ಟಾರ್ ರಸ್ತೆಗಳಾಗಲಿ, ಒಳ್ಳೆಯ ಡ್ರೈನೇಜ್ ವ್ಯವಸ್ಥೆಯಾಗಲಿ. ಆಮೇಲೆ ಅಲ್ಲಿ ಪಾರ್ಕ್ ವಗೈರೆಗಳೆಲ್ಲಾ ಬರಲಿ. ಶೌಚಾಲಯವನ್ನು ಕಟ್ಟಲಿ. ಗ್ರಾಮಾಗಳಲ್ಲೆಲ್ಲಾ ನೈರ್ಮಲ್ಯ ಇರಲಿ ಎನ್ನತಕ್ಕಂಥದ್ದರ ಬಗ್ಗೆ ಇವತ್ತು ನಾವು ಮುಂದಾಲೋಚನೆಯನ್ನು ಮಾಡಬೇಕಾಗಿದೆ. ಇದರ ಬಗ್ಗೆ ಇವತ್ತು ವಿಚಾರವನ್ನು ಮಾಡಬೇಕಾಗಿಯೇ ವಿನಃ ಸಣ್ಣ ಪಂಚಾಯತಿ ಮಾಡಿದರೆ ಐದು ಸಾವಿರ ರೂಪಾಯಿ ಜಾಸ್ತಿಯಾಗಿ ಖರ್ಚಾಗುತ್ತದೆ ಎಂದು ಹೇಳಿ ನಮ್ಮ ಬೈರೇಗೌಡರು ರೊಕ್ಕವನ್ನು ಎಣಿಸಿಕೊಂಡು ಕುಳಿತುಕೊಂಡರೆ ಊರಿನ ಉದ್ಧಾರವಾಗುತ್ತದೆಯೇ? ಆಗುವುದಿಲ್ಲ. ಆದ್ದರಿಂದ ಇವತ್ತು ಊರುಗಳನ್ನು ಉದ್ಧಾರ ಮಾಡಬೇಕಾಗಿದೆ. ನಮ್ಮ ನಂಜುಂಡಸ್ವಾಮಿಯವರಿಗೆ ಗೊತ್ತು. ಸಣ್ಣದಾಗಿದ್ದರೆ ಬಹಳ ಚೊಕ್ಕವಾಗಿರುತ್ತದೆ ಎಂದು ಅವರಿಗೂ ಗೊತ್ತಿದೆ. ಆದುದರಿಂದ ಇವತ್ತು ಸಣ್ಣ ಪಂಚಾಯಿತಿಯನ್ನು ಮಾಡುವುದರಿಂದ ಏನೂ ತಪ್ಪಿಲ್ಲ. ಅದು ಯೋಗ್ಯವಾಗಿದೆ. ಜನರ ಅಭಿಪ್ರಾಯದ ದೃಷ್ಟಿಯಿಂದಲೇ ಇದು ಆಗಿರತಕ್ಕಂಥದ್ದು. ಇವತ್ತು ಶ್ರೀಮಾನ್ ಬೈರೇಗೌಡರು 2-3 ಊರು ಸೇರಿ ಮಂಡಲ್ ಪಂಚಾಯತಿ ಆಗಿದೆ

ಎಂದು ಹೇಳುತ್ತಾರೆ. ಈಗ ಮೊದಲು ಇದನ್ನು ಮಾಡಲಿ, ಅವರ ಊರಿಗೆ ಹೋಗಿ ಬೇಕಾದರೂ ನಾನು ಭಾಷಣ ಮಾಡುತ್ತೇನೆ. ಸಣ್ಣ ಮಂಡಲ ಪಂಚಾಯತಿ ಮಾಡಿರುವುದು ಸರಿಯೋ, ಇದನ್ನು ದೊಡ್ಡದ್ದು ಮಾಡುವುದರಿಂದ ಸರಿಯೋ ಎಂದು ಊರಿನ . ಜನರೇ ಹೇಳುತ್ತಾರೆ. ಆದ್ದರಿಂದ ಇದರ ಬಗ್ಗೆ ಯಾರ ವಿರೋಧವೂ ಇಲ್ಲ. ಅದನ್ನು ಬಿಟ್ಟರೆ ನಾವು ಯಾವ ದೃಷ್ಟಿಯಿಂದ ಮಂಡಲ ಪಂಚಾಯತಿಯ ಅಧಿಕಾರವನ್ನು ಕಿತ್ತುಕೊಂಡಿದ್ದೇವೆ?

ಶ್ರೀ ಸಿ. ಬೈರೇಗೌಡ : ರೋಜ್‌ಗಾರ್ ಯೋಜನೆ ಅಧಿಕಾರ ಕಿತ್ತುಕೊಂಡಿದ್ದೀರಿ.

ಶ್ರೀ ಕಾಗೋಡು ತಿಮ್ಮಪ್ಪ : ಇಲಾಖಾ ಬೇಡಿಕೆಗಳ ಮೇಲೆ ಚರ್ಚೆ ಮಾಡುವಾಗ ರೋಜ್‌ಗಾರ್ ಯೋಜನೆ ಬಗ್ಗೆ ಚರ್ಚೆ ಮಾಡೋಣ. ಇವತ್ತು ಮೂಲ ಪ್ರಶ್ನೆ ಏನೆಂದರೆ ಸರ್ಕಾರ ತಂದಿರತಕ್ಕ ತಿದ್ದುಪಡಿ ಪಂಚಾಯತಿ ಸಂಸ್ಥೆಗಳ ಕತ್ತನ್ನು ಹಿಸುಕುವಂತಹ ಕೆಲಸವನ್ನು ಮಾಡಿದ್ದೀರಿ. ಇವತ್ತು ಇವರ ಅಧಿಕಾರವನ್ನು ಕಿತ್ತುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಿದ್ದೀರಿ. ಇವತ್ತು ಕೇವಲ ನಾಮಕಾವಸ್ಥೆಯ ಸಂಸ್ಥೆಗಳಾಗಿ ಇರಬೇಕೆನ್ನತಕ್ಕ ಒಂದೇ ಒಂದು ಆಪಾದನೆಯಿಂದ ಬೆಂಗಳೂರಿನಿಂದ ದೆಹಲಿಯವರೆಗೂ ಹೋಗಿ ನಮ್ಮ ನಾಯಕರಾದ ರಾಜೀವ್ ಗಾಂಧಿಯವರ ಹತ್ತಿರ ಭಿಕ್ಷೆ ಬೇಡಿದರಲ್ಲ.

ಶ್ರೀ ಆರ್.ವಿ. ದೇಶಪಾಂಡೆ : ಭಿಕ್ಷೆ ಎಂದರೇನು?

ಶ್ರೀ ಕಾಗೋಡು ತಿಮ್ಮಪ್ಪ : ನಮ್ಮ ಅಧಿಕಾರವನ್ನು ಕಿತ್ತುಕೊಳ್ಳುತ್ತಿದ್ದಾರೆಂದು ಹೇಳಿ, ಅವರ ಪ್ರಾಣಭಿಕ್ಷೆಯನ್ನು ಬೇಡಿದರಲ್ಲಾ ಇದಕ್ಕೆ ಉರುಳಿಲ್ಲ. ಅವರು ಪ್ರಧಾನಿ ಮಂತ್ರಿಗಳಾಗಿದ್ದಾಗ ಹೋಗಿ ಕೇಳಿದ್ದರೆ ಅದು ತಪ್ಪೆಂದು ಹೇಳುತ್ತಿರಲಿಲ್ಲ. ಅವರು ದೇಶದ ಪ್ರಧಾನ ಮಂತ್ರಿಯಾಗಿರುತ್ತಿದ್ದರು, ಆಗ ಈ ರಾಷ್ಟ್ರದ ಪ್ರತಿಯೊಬ್ಬ ಪ್ರಜೆಯೂ ಕೂಡ ಅವರ ಹತ್ತಿರ ಹೋಗಿ ಕೇಳತಕ್ಕ ಅಧಿಕಾರವನ್ನು ಪಡೆದಿರುತ್ತಾನೆ. ಆದರೆ ಇವತ್ತು ಅವರು ಅಧಿಕಾರದಲ್ಲಿಲ್ಲ. ಒಂದು ರಾಜಕೀಯ ಪಕ್ಷದ ಅಧ್ಯಕ್ಷರಾಗಿದ್ದಾರೆ. ಆ ರಾಜಕೀಯ ಪಕ್ಷದ ಅಧ್ಯಕ್ಷರನ್ನು ಹೋಗಿ ಅಂಗಲಾಚಿ ಬೇಡಿಕೊಂಡು ಪ್ರಾಣ ಭಿಕ್ಷೆಯನ್ನು ಬೇಡಿದರಲ್ಲಾ.

ಶ್ರೀ ಬಿ.ಹೆಚ್. ಬನ್ನಿಕೋಡ್ ; ಗ್ರಾಮೀಣ ಜನತೆಯ ಬಗ್ಗೆ ವಿವೇಚನೆ ನಿಮಗಂತೂ ಇಲ್ಲ. ಅವರಿಗಾದರೂ ಇದೆ ಎಂದು ಕೇಳಲು ಹೋಗಿದ್ದರು.

ಶ್ರೀ ಕಾಗೋಡು ತಿಮ್ಮಪ್ಪ : ಬೆಂಗಳೂರಿನಿಂದ ದೆಹಲಿಗೆ ಹೋಗಿ ತಾವು ಮಾಡುವಂತಹ ಪ್ರಯತ್ನಕ್ಕೆ ಏನು ಅರ್ಥವಿಲ್ಲ. ಏಕೆಂದರೆ ಮಂಡಲ್ ಪಂಚಾಯತಿಗೆ ಇದ್ದಂತಹ ಯಾವ ಅಧಿಕಾರವನ್ನು ನಾವು ಕಿತ್ತುಕೊಂಡಿಲ್ಲ. ಸಣ್ಣ ಪಂಚಾಯತಿ ಮಾಡಬೇಕೆನ್ನುವ ಒಂದೇ ಒಂದು ಕಾರಣ ಬಿಟ್ಟು ಬಿಟ್ಟರೆ, ಒಂದು ಅಕ್ಷರ ದೃಷ್ಟಿಯಿಂದಲೂ ಕೂಡ ಮಂಡಲ್ ಪಂಚಾಯಿತಿಗೆ ಇದ್ದಂತಹ ಅಧಿಕಾರವನ್ನು ನಾವು ಕಿತ್ತುಕೊಂಡಿಲ್ಲ, ಅಂದಮೇಲೆ ಮಂಡಲ್ ಪಂಚಾಯತಿಯ ದೃಷ್ಟಿಯಿಂದ ಟೀಕೆಯನ್ನು ಮಾಡಲಿಕ್ಕೆ ಅವಕಾಶವಿಲ್ಲ. ಇನ್ನು ತಾಲ್ಲೂಕು ಮಂಡಲ್ ಪಂಚಾಯತಿಯ ವ್ಯವಸ್ಥೆ ಈ ಬಗ್ಗೆ ನಮಗೂ ಒಂದು ವಿಚಾರ ಇತ್ತು. ಇವು ಕೂಡ ಚುನಾಯಿತ ಪ್ರತಿನಿಧಿಗಳಿಂದ ಕೂಡಿದ ಸಂಸ್ಥೆಗಳಾಗಿರಬೇಕೆಂಬ ಆಲೋಚನೆ ಇತ್ತು. ತಾವೇ ಇದನ್ನು ತಂದ್ದೀರಿ, ಶಾಸಕರು ಅಧ್ಯಕ್ಷರಾಗಿರಬೇಕು. ಮಂಡಲ್ ಪಂಚಾಯತಿಯ ಅಧ್ಯಕ್ಷರಾದರೆ ಸದಸ್ಯರಾಗಿರಬೇಕು. ತಾವು ಹೇಳಿದಂತಹ ಸಿದ್ಧಾಂತ ಬಹಳ ಸುಂದರವಾಗಿರುವುದರಿಂದ ನಾವು ಹಾಗೆಯೇ ಉಳಿಸಿದ್ದೇವೆ. ಒಬ್ಬ ಶಾಸಕರು ಅಲ್ಲಿ ಅಧ್ಯಕ್ಷನಾಗಿ ಕೆಲಸ ಮಾಡುತ್ತಿರುವಾಗ ಅವರು ಆ ಮಂಡಲ ಪಂಚಾಯಿತಿಯ ಕೆಲಸಗಳನ್ನು ಮೇಲ್ವಿಚಾರಣೆ

ಮಾಡುವ ಸನ್ನಿವೇಶ ಬಂದರೆ ಅಥವಾ ಯಾವುದಾದರೊಂದು ಸಣ್ಣ ಹೇಳಿಕೆ ಕೊಡುವುದಾದರೆ ಅಥವಾ ಆ ಕೆಲಸ ಕಾರ್ಯಗಳಲ್ಲಿ ಲೋಪದೋಷಗಳು ಬಂದರೆ ಅದರ ಬಗ್ಗೆ ವಿಚಾರ ಮಾಡುವುದಾದರೆ ಅಷ್ಟಕ್ಕೆ ಮಾತ್ರ ಸೀಮಿತವಾಗಿರಬೇಕೆಂದು ಹೇಳಿದ್ದೇವೆ. ಇಲ್ಲಿ ಡೈರೆಕ್ಟ್ ಅಂದರೇನು? ನಿರ್ದೇಶನ. ಜನತಾ ಮನೆ ಚೆನ್ನಾಗಿಲ್ಲ. ಜನತಾ ಮನೆ ಚೆನ್ನಾಗಿ ಮಾಡಿ ಎಂದು ಹೇಳೋದೋ ತಪ್ಪೆ? ರೋಜ್‌ಗಾರ್ ಯೋಜನೆಯಲ್ಲಿ ಕೆಲಸ ಮಾಡಿಸಿದ್ದೀರಿ, ಹಣ ಸರಿಯಾಗಿ ಖರ್ಚಾಗಿಲ್ಲ, ಸರಿಯಾಗಿ ಖರ್ಚು ಮಾಡಿ ಎಂದು ಹೇಳುವುದು ತಪ್ಪೆ? ಅಥವಾ ಇಂಜಿನಿಯರ್ ಹೋಗಿ ಅದನ್ನು ಮೇಜರ್‌ಮೆಂಟ್ ಮಾಡಿಕೊಂಡು ಬಾ, ಹಣಕ್ಕೂ ಅದಕ್ಕೂ ವ್ಯತ್ಯಾಸ ಕಾಣುತ್ತದೆ ಎಂದು ಹೇಳೋದು ತಪ್ಪೆ? ಡೈರೆಕ್ಟ್ ಅಂದರೇನು?

ಶ್ರೀ ಹೆಚ್. ಏಕಾಂತಯ್ಯ : ಮಸೂದೆಯನ್ನು ಓದಿ.

ಶ್ರೀ ಕಾಗೋಡು ತಿಮ್ಮಪ್ಪ : ಓದಬೇಕಾಗಿಲ್ಲ. ಡೈರಕ್ಷನ್ ಎಂಬ ಪದದ ಬಗ್ಗೆ ವ್ಯಾಖ್ಯಾನವನ್ನು ನಾನು ಸಾಕಷ್ಟು ಮಾಡಿದ್ದೇನೆ. ಅದರಲ್ಲಿ ಏನಿದೆ? ಸೂಪರ್‌ವಿಜನ್ ಇದೆಯಾ? ವಾಚ್ ಮಾಡೋದು ಇದೆಯಾ? ಡೈರೆಕ್ಷನ್ ಅಂದರೇನು? ನಿರ್ದೇಶನ, ಅದನ್ನು ಕೊಡುವುದು ಬೇಡವೋ? ಇವತ್ತು ತಾವೇ ಶಾಸಕರಿದ್ದೀರಿ, ಆ ಸಮಿತಿಗೆ ಅಧ್ಯಕ್ಷರಾಗಿರುತ್ತೀರಿ, ರೋಜ್‌ಗಾರ್ ಯೋಜನೆಯಲ್ಲಿ ಇವತ್ತು ಮೊದಲನೆಯ ಕಂತು ಹಣವನ್ನು ಬಿಡುಗಡೆ ಮಾಡಿದ್ದಾರೆ. ಸರ್ಕಾರದಿಂದ ಬಂದ ಹಣವನ್ನು ಯಾವಾಗಲೂ ನಾಳೆ ಖರ್ಚು ಮಾಡದೆ ಇವತ್ತೇ ಖರ್ಚು ಮಾಡಬೇಕು. ಮತ್ತು ಹಣ ಬೇಕು ಬೇಕೆಂದು ಕೇಳಬೇಕು. ನೀವು ಹಣ ಬಂದು 3 ತಿಂಗಳು ಆಗಿದೆ, 6 ತಿಂಗಳಾದರೂ ಇವತ್ತಿನವರೆಗೂ ಹಣ ಖರ್ಚು ಮಾಡಿಲ್ಲ, ಜನರಿಗೆ ಕೆಲಸಬೇಕಾಗಿದೆ. ಆದರೂ ಹಣ ಇಟ್ಟುಕೊಂಡು ಕೂತಿದ್ದರೆ ಹೇಗೆ? ಎಂದು ನಾನೇ ಹೇಳುತ್ತಾ ಬಂದಿದ್ದೇನೆ.

ಶ್ರೀ ಬಿ.ಹೆಚ್. ಬನ್ನಿಕೋಡ್: ಸರ್ಕಾರದವರು ಸಿಮೆಂಟ್ ಕಬ್ಬಿಣವನ್ನು ಅಭಿವೃದ್ಧಿ ಕೆಲಸಕ್ಕೆ ಕೊಡಲಿಲ್ಲ ಎಂದು ನಾವು ಹೇಳುತ್ತಿಲ್ಲ. ಆದರೆ ರಾಜ್ಯದಲ್ಲಿ ಸಾಕಷ್ಟು ಅಭಿವೃದ್ಧಿ ಕೆಲಸಗಳು ಆಗಬೇಕು. ಈ ಹಿಂದೆ ನೀವು ಮಾಡಿದ ಟೀಕೆಗಳನ್ನೇ ಈಗ ನಾವು ಮಾಡುತ್ತಿದ್ದೇವೆ.

ಶ್ರೀ ಕಾಗೋಡು ತಿಮ್ಮಪ್ಪ : ಇವತ್ತು ನಿರ್ದೇಶನ ಅಂತ ಹೇಳಿದರೆ ಯಾವಾಗ? ಎಕ್ಸರ್‌ಸೈಜ್ ಪವರ್‌ಅಂದರೆ ಅವರು ಸೂಪರ್‌ಸೀಡ್ ಮಾಡುವಂತಹ ಪವರ್, ಕಂಟ್ರಾಕ್ಟರನ್ನು ವಿತ್‌ಡ್ರಾ ಮಾಡುವುದು, ಸಸ್ಪೆಂಡ್ ಮಾಡುವುದು ಅಥವಾ ಇನ್ನಾವುದೇ ಕೆಲಸ ಮಾಡದೇ ನಿಲ್ಲಿಸುವುದು. ಇದು ಇದೆಯಾ? ಎಕ್ಸಿಕ್ಯೂಷನ್ ನಿಲ್ಲಿಸುವುದು ಇದೆಯೇ? ಅಥವಾ ಹಣವನ್ನು ವಿತ್‌ಡ್ರಾ ಮಾಡುವುದು ಇದೆಯಾ? ಇದು ಯಾವುದೂ ಇಲ್ಲ,

ಶ್ರೀ ಸಿ. ಬೈರೇಗೌಡ : ಸ್ವಲ್ಪ ಕ್ಲಾಸ್ ಓದಿ ಸ್ವಾಮಿ,

ಶ್ರೀ ಕಾಗೋಡು ತಿಮ್ಮಪ್ಪ : ಸ್ವಾಮಿ, ನಮಗೆ ಓದಲಿಕ್ಕೆ ಬರುವುದಿಲ್ಲ ಎಂದು ತಿಳಿದುಕೊಂಡಿದ್ದೀರಾ? ಇವೆಲ್ಲಾ ನಾವು ಚರ್ಚೆ ಮಾಡಿದ್ದೇವೆ. ಡೈರೆಕ್ಟ್ , ಸೂಪರ್‌ವೈಸ್ ಇಷ್ಟು ಇದೆ, ಮತ್ತೇನು ಇದೆ: ಇನ್‌ಪೆಕ್ಷನ್ ಎಂದು ಇದೆ: ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುತ್ತಾ ಹೇಳಿದರು, ಸೂಪರ್‌ವೈಸ್ ಮಾಡಲಿಕ್ಕೆ ಅಧಿಕಾರ ಇದೆಯಲ್ಲ, ಮಾನಿಟರ್ ಮಾಡಲಿಕ್ಕೆ ಅವಕಾಶ ಇದೆಯೆಲ್ಲ, ಎಂದು ಹೇಳಿದರೆ, ಈಗ ಯಾವುದೋ ಒಂದು ಜನತಾ ಮನೆಗಳನ್ನೆಲ್ಲಾ ಲಿಸ್ಟ್ ಮಾಡಿ ನಮ್ಮ ಹತ್ತಿರ ಕಳುಹಿಸುತ್ತಾರೆ. ಅದು ನಮ್ಮ ಹತ್ತಿರ ಬರುತ್ತದೆ. ಅದನ್ನು ಸ್ಕ್ರೂಟನಿ ಮಾಡುವುದು

ಅಂದರೆ ಏನು, ಒಂದು ಅರ್ಹತೆಯ ಮೇಲೆ ಮಾಡಬೇಕು. ಒಂದು ವೇಳೆ ಅರ್ಹತೆ ಇಲ್ಲದವರಿಗೆ ಲಿಸ್ಟ್‌ನಲ್ಲಿ ಸೇರಿಸಿದರು ಅಥವಾ ಐಆರ್‌ಡಿಪಿ ಲೋನ್ ಕೊಡುವ ಲಿಸ್ಟ್‌ನಲ್ಲಿ ಸೇರಿಸಿದರು, ಸ್ಕ್ರೂಟಿನಿ ಮಾಡುವುದರಲ್ಲಿ ಏನಾದರೂ ತಪ್ಪು ಕಂಡುಬಂದರೆ ನೀವು ಈ ತಪ್ಪು ಮಾಡಿದ್ದೀರಿ ಇದನ್ನು ಬದಲಾವಣೆ ಮಾಡಿಕೊಂಡು ಹೋಗಿ ಎಂದು ಒಂದು ನಿರ್ದೇಶನ ಕೊಡುವುದರಲ್ಲಿ ತಪ್ಪು ಏನಿದೆ, ಅಪರಾಧ ಏನಿದೆ ಹೇಳಿ? ನಾವು ಶಾಸಕರಾಗಿರತಕ್ಕವರು ಪ್ರತಿನಿಧಿಗಳನ್ನು ಮಾಡಿರಿ. ಚುನಾಯಿತ ಪ್ರತಿನಿಧಿಗಳು ಅಧ್ಯಕ್ಷರಾಗಬೇಕು ಎಂದು ವಾದಮಾಡಲಿಕ್ಕೆ ನಿಮಗೆ ತಾಕತ್ತು ಇಲ್ಲ. ಅದನ್ನು ಹೇಳಿ ಮಾಡೋಣ. ಅದನ್ನು ಹೇಳಲಿಕ್ಕೆ ತಯಾರು ಇಲ್ಲ. ಶಾಸಕರು ಅಧ್ಯಕ್ಷರಾಗಬೇಕೆಂದು ಹೇಳುತ್ತೀರಿ, ಆದರೆ...

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ : ನೀವು ಮಾಡಿ.

ಶ್ರೀ ಕಾಗೋಡು ತಿಮ್ಮಪ್ಪ : ನೀವು ಏನು ಮಾಡಿದ್ದೀರಿ.

ಶ್ರೀ ಆರ್.ವಿ. ದೇಶಪಾಂಡೆ : ಎಲೆಕ್ಟೆಡ್ ರೆಪ್ರಸೆಂಟೇಟೀವ್ ಇರಬೇಕೆಂದು ಅಮೆಂಡ್‌ಮೆಂಟ್ ತೆಗೆದುಕೊಂಡು ಬನ್ನಿ.

ಶ್ರೀ ಕಾಗೋಡು ತಿಮ್ಮಪ್ಪ : ಕುರಿ ಕೇಳಿ ಸಾಂಬಾರ್ ಅರೆಯುತ್ತಾರೆಯೇ. ನಿಮ್ಮನ್ನು ಕೇಳಿ ನಾವು ಅಮೆಂಡ್‌ಮೆಂಟ್ ತರಬೇಕೇ?

ಶ್ರೀ ಆರ್.ವಿ. ದೇಶಪಾಂಡೆ : ನಾವು ಏನು ಮಾಡಿದ್ದೇವೆ, ಅದು ನಿಮಗೆ ಬೇಡ ಅಂದರೆ, ಅದಕ್ಕೆ ಅಮೆಂಡ್‌ಮೆಂಟ್ ತೆಗೆದುಕೊಂಡು ಬನ್ನಿ. ನಾವು ಸಪೋರ್ಟ್ ಮಾಡುತ್ತೇವೆ, ಅದನ್ನು ನೀವು ಮಾಡಿ.

ಶ್ರೀ ಕಾಗೋಡು ತಿಮ್ಮಪ್ಪ : ತಾವು ಭಾಷಣ ಮಾಡತಕ್ಕಂಥ ಕಾಲದಲ್ಲಿ ಹಿಂದೆ ಏನೇನು ತಪ್ಪು ಮಾಡಿದ್ದೇವೆ. ತಾಲ್ಲೂಕು ಮಟ್ಟದ ಸಮಿತಿಗಳಿಗೆ ಚುನಾಯಿತ ಪ್ರತಿನಿಧಿಗಳನ್ನು ಮಾಡಬೇಕಾಗಿತ್ತು, ಮಾಡಲಿಕ್ಕೆ ಆಗಿಲ್ಲ, ತಪ್ಪು ಅದು. ಆದ್ದರಿಂದ, ಈ ಪಂಚಾಯಿತಿ ವ್ಯವಸ್ಥೆಗೆ ತದ್ವಿರುದ್ಧವಾದಂಥ ಪದ್ಧತಿ, ಚುನಾಯಿತ ಪ್ರತಿನಿಧಿಗಳನ್ನೇ ಮಾಡಬೇಕಾಗಿತ್ತು ಎಂದು ನೀವು ವಾದ ಸರಣಿ ಮಾಡಿದ್ದರೆ ನಾವು ಸ್ವಾಗತ ಮಾಡುತ್ತಿದ್ದೆವೋ ಟೀಕೆ ಮಾಡುತ್ತಿದ್ದೆವೋ ಎಂಬುದು ಗೊತ್ತಾಗುತ್ತಿತ್ತು. ಆದರೆ ಅದನ್ನು ನೀವು ಮಾಡಲಿಲ್ಲ.

ಶ್ರೀ ಹೆಚ್. ಏಕಾಂತಯ್ಯ : ಅದನ್ನು ಹೇಳುವವರು ಇದ್ದಾರೆ. ಕಾಯಿರಿ ಸ್ವಾಮಿ. ನಮ್ಮ ಭಾಗದಿಂದ ಇನ್ನೂ ಒಬ್ಬರೇ ಮಾತನಾಡಿರುವುದು.

ಶ್ರೀ ಕಾಗೋಡು ತಿಮ್ಮಪ್ಪ : ಈಗ ನಾನು ಹೇಳಿಕೊಟ್ಟಮೇಲೆ ಹೇಳುವುದು ಅಲ್ಲ.

ಶ್ರೀ ಹೆಚ್. ಏಕಾಂತಯ್ಯ : ಈಗ ಒಬ್ಬರು ಮಾತ್ರ ಮಾತನಾಡಿದ್ದಾರೆ. ನಿಮ್ಮಿಂದ ಹೇಳಿಸಿಕೊಳ್ಳಬೇಕಾದು ನಿಜ, ತಾವು ಸಹ ನಮ್ಮಿಂದ ಹೇಳಿಸಿಕೊಳ್ಳಬೇಕಾದ್ದು ಬೇಕಾದಷ್ಟು ಇದೆ.

ಶ್ರೀ ಕಾಗೋಡು ತಿಮ್ಮಪ್ಪ : ತಾಲ್ಲೂಕು ಮಟ್ಟದ ಸಂಸ್ಥೆಗಳ ಒಂದು ಅಧಿಕಾರವನ್ನು ಏನು ಮಾಡಿದ್ದೇವೆ. ನಾವೇನು ಒಬ್ಬ ಶಾಸಕರಿಗೆ ಕೊಟ್ಟಿಲ್ಲ, ಆ ಸಮಿತಿಗೆ ಕೊಟ್ಟಿದ್ದೇವೆ. ಅದರಲ್ಲಿ ಶಾಸಕರು ಅಧ್ಯಕ್ಷರಾಗಿರುತ್ತಾರೆ. ಉಳಿದಂಥ ಮಂಡಲ್ ಪ್ರಧಾನರು ಅದರ ಸದಸ್ಯರಾಗಿರುತ್ತಾರೆ. ಆ ಸಮಿತಿಗೆ ಅಧಿಕಾರ ಕೊಟ್ಟಿದ್ದೇವೆಯೇ

ವಿನಹ ಶಾಸಕರಿಗೆ ಕೊಟ್ಟಿಲ್ಲ. ಒಂದು ವೇಳೆ ಆ ಸಮಿತಿಗೆ ಶಾಸಕರ ಅಭಿಪ್ರಾಯ ಬೇಡ ಅಂದರೆ, ಸಮಿತಿ ಏನು ತೀರ್ಮಾನ ಮಾಡುತ್ತದೆ ಅದು ಜಾರಿ ಆಗುತ್ತದೆ. ಅದು ಡೆಮಾಕ್ರಟಿಕ್ ಆಗಿ ಮಾಡುತ್ತದೆ. ಆದ್ದರಿಂದ ಈ ತಾಲ್ಲೂಕು ಸಮಿತಿಗೆ ಅಧಿಕಾರ ಕೊಟ್ಟಿರತಕ್ಕದ್ದು, ಒಂದು ಸಣ್ಣ ಬದಲಾವಣೆ. ಅದಕ್ಕೆ ಒಂದು ಇಸ್ಯೂ ಡೈರೆಕ್ಷನ್, ಸೂಪರ್‌ವಿಷನ್ , ಮಾನಿಟರಿ ಇಷ್ಟೇ ಅದಕ್ಕೆ ಕೊಟ್ಟಿರತಕ್ಕದ್ದು. ಮೂರುನಾಲ್ಕು ಪದಗಳನ್ನು ಹೇಳಿಕೊಂಡು ಬೆನಿಫಿಷಿಯರಿ ಲಿಸ್ಟ್ ಅನ್ನು ಸ್ಕ್ರೂಟಿನಿ ಮಾಡುವುದು. ಇಷ್ಟು ಬಿಟ್ಟುಬಿಟ್ಟರೆ ಪಂಚಾಯಿತಿ ಬಡ್ಜಟ್ ಅನ್ನು ಇದರ ಮುಖಾಂತರ ಕಳುಹಿಸಿಕೊಡುವುದು. ಅಂದರೆ ಪೋಸ್ಟ್ ಆಫೀಸ್, ಆದರಿಂದ, ನಾವು ಇವೊತ್ತು ಏನು ಬದಲಾವಣೆ ಮಾಡಿಲ್ಲ.

ಶ್ರೀ ಸಿ. ಬೈರೇಗೌಡ : ಹಾಗಿದ್ದರೆ ತೆಗೆದುಹಾಕಿ.

ಶ್ರೀ ಕಾಗೋಡು ತಿಮ್ಮಪ್ಪ : ನಾವು ಏನೂ ಬದಲಾವಣೆ ಮಾಡಿಲ್ಲ.

ಶ್ರೀ ಸಿ. ಬೈರೇಗೌಡ : ಇವರು ಹೇಳಿದಷ್ಟು ಇನ್‌ಸಿಗ್‌ನಿಫಿಕೆಂಟ್ ಆದರೆ ಅದು ಬೇಡ ತೆಗೆದುಹಾಕಲಿ.

ಶ್ರೀ ಕಾಗೋಡು ತಿಮ್ಮಪ್ಪ : ಯಾರು ಸಹ ಸರ್ವ ಸುಂದರವಾಗಿ ರಚನೆ ಮಾಡಲಿಕ್ಕೆ ಆಗಲ್ಲ. ಇವೆಲ್ಲಾ ಪ್ರಯೋಗ ವ್ಯವಸ್ಥೆಯಲ್ಲಿ ನಡೆದಿದೆ. ಪ್ರಯೋಗವನ್ನು ಮಾಡುವಾಗ ಅನೇಕ ಲೋಪದೋಷಗಳು ಕಾಣುತ್ತವೆ. ಲೋಪದೋಷಗಳು ಬಂದಾಗೆಲ್ಲಾ ಅದಕ್ಕೆ ಸಾಕಷ್ಟು ಕಾನೂನಿಗೆ ತಿದ್ದುಪಡಿ ಮಾಡಿ ಆ ಸಂಸ್ಥೆಗಳನ್ನು ಇನ್ನಷ್ಟು ಅಚ್ಚುಕಟ್ಟಾಗಿ ಇನ್ನಷ್ಟು ವ್ಯವಸ್ಥಿತವಾಗಿ ಕಟ್ಟಿನಿಲ್ಲಿಸಬೇಕು, ಇದು ಬಹಳ ಮುಖ್ಯವಾದ ಕೆಲಸ.

ಆದರೆ ಈ ಕೆಲಸವನ್ನು ಮಡುವಾಗ ಸ್ವಲ್ಪ ಲೋಪದೋಷಗಳು ಬಂದಿದ್ದರೆ ಇದನ್ನು ಮಾಡಬೇಕಾಗುತ್ತದೆ. ಏಕೆಂದರೆ ಇವತ್ತು ತಾಲ್ಲೂಕು ಮಟ್ಟದ ಅಭಿವೃದ್ಧಿ ಸಮಿತಿಯವರು ಒಂದು ಪಂಚಾಯಿತಿಯು ತನ್ನ ಕರ್ತವ್ಯವನ್ನು ಮಾಡುವಾಗ ಅದು ತಪ್ಪಾಗಿದೆ ಎಂದು ಹೇಳದಿದ್ದರೆ, ಆ ಸಂಸ್ಥೆಗೆ ಏನೂ ಅರ್ಥ ಇರುವುದಿಲ್ಲ. ಈ ದೃಷ್ಟಿಯಿಂದ ಇವತ್ತು ಈ ಸಂಸ್ಥೆಗೆ ಒಂದು ಸಣ್ಣ ಪ್ರಮಾಣದ ಅಧಿಕಾರವನ್ನು ಕೊಟ್ಟಿದ್ದೇವೆಯೇ ಹೊರತು ಬೇರೆ ಏನೂ ಅಲ್ಲ. ಇದರಿಂದ ಈ ಮಂಡಲ ಪಂಚಾಯಿತಿಗೆ ಇರತಕ್ಕ ಅಧಿಕಾರವನ್ನು ನಾವು ಕಿತ್ತುಕೊಂಡಿಲ್ಲ. ಹಾಗಿದ್ದರೆ ಇವರು ಮೊದಲೇ ಆಪಾದನೆಯನ್ನು ಮಾಡಬಹುದಿತ್ತು. ಈ ತಾಲ್ಲುಕು ಅಭಿವೃದ್ಧಿ ಮಂಡಲಿ ಅಥವಾ ತಾಲೂಕು ಪಂಚಾಯಿತಿ ಸಮಿತಿ ಎಂದು ಏನಿದೆ ಇದಕ್ಕೆ ಬಜೆಟ್‌ನ್ನು ಬದಲಾವಣೆ ಮಾಡಿಸತಕ್ಕ ಅಥವಾ ಪಂಚಾಯತಿಯವರು ಕೈಗೊಂಡಿರತಕ್ಕ ಕೆಲಸವನ್ನು ಬದಲಾವಣೆ ಮಾಡಿಸತಕ್ಕ ಅಧಿಕಾರವನ್ನು ಅಂದರೆ ಅದು ಹಣಕಾಸಿನ ದೃಷ್ಟಿಯಿಂದಿರಬಹುದು ಅಥವಾ ಫಂಕ್ಷನ್ಸ್ ಮಾಡತಕ್ಕ ದೃಷ್ಟಿಯಿಂದಿರಬಹುದು; ಏನಾದರೂ ಅಧಿಕಾರವನ್ನು ಕೊಟ್ಟಿದ್ದರೆ ಆಗ ನೀವು ಈ ಪಂಚಾಯಿತಿಯ ಕತ್ತನ್ನು ಹಿಸುಕತಕ್ಕ ಕೆಲಸವನ್ನು ಮಾಡಿದ್ದೀರೆಂದು ಆಪಾದನೆಯನ್ನು ಮಾಡಬಹುದಿತ್ತು. ಆದರೆ ಅಂಥ ಯಾವ ಕೆಲಸವನ್ನೂ ನಾವು ಈ ತಿದ್ದುಪಡಿಯಲ್ಲಿ ಮಾಡಿಲ್ಲ.

ಶ್ರೀ ಹೆಚ್. ಏಕಾಂತಯ್ಯ : ಮಾನ್ಯ ಉಪಾಧ್ಯಕ್ಷಿಣೆಯವರೆ, ನಾನು ಮಧ್ಯೆ ಪ್ರವೇಶ ಮಾಡಿ ಮಾತನಾಡುವುದಕ್ಕೆ ಇಷ್ಟವಿರಲಿಲ್ಲ; ಆದರೆ ಹಿರಿಯ ಮಾನ್ಯ ಸದಸ್ಯರು ಏನು ಹೇಳುತ್ತಿದ್ದಾರೆ, ಅದು ನೀವು ತಂದಿರತಕ್ಕ ತಿದ್ದುಪಡಿಯ ವಿರುದ್ಧ ಎಂದು ಅವರ ಗಮನಕ್ಕೆ ತರುತ್ತಿದ್ದೇನೆ. ಸೆಕ್ಷನ್ 56ರಲ್ಲಿ ಮಂಡಲ ಪಂಚಾಯಿತಿಗೆ ಕೆಲವು ಅಧಿಕಾರಗಳನ್ನು ಹಿಂದಿನ ಕಾನೂನು ಪ್ರಕಾರ ನಾವು ಕೊಟ್ಟಿದ್ದೆವು. ಇವತ್ತು

ಜನರಲ್ ಫಂಕ್ಷನ್ಸ್ ಆಫ್ ಮಂಡಲ ಪಂಚಾಯಿತ್ಸ್ ಎಂದು ಏನಿತ್ತು ಅದನ್ನು ಕಾನೂನು ಅನ್ವಯ ಯಾರೂ ಕೂಡ ಬದಲಾವಣೆ ಮಾಡುವಂತಿರಲಿಲ್ಲ. ಕೆಲವು appointment of new functions ಅಂಥವನ್ನು ಮಾತ್ರ ಮಾಡುವುದಕ್ಕೆ ಸರ್ಕಾರದವರಿಗೆ ಅಧಿಕಾರವಿತ್ತು. ಆದರೆ ಇವತ್ತು ತಾವು ತಿದ್ದುಪಡಿಯನ್ನು ತಂದು ಏನು ಮಾಡಿದ್ದೀರಿ?

ಶ್ರೀ ಬಿ.ಎಂ. ಇದಿನಬ್ಬ : ಮಾನ್ಯ ಉಪಾಧ್ಯಕ್ಷಿಣಿಯವರೆ, ಮಾನ್ಯ ಕಾಗೋಡು ತಿಮ್ಮಪ್ಪನವರು ಬಹಳ ಲೀಲಾಜಾಲವಾಗಿ ಮಾತನಾಡುತ್ತಿದ್ದರು.

(ಗೊಂದಲ)

ಉಪಾಧ್ಯಕ್ಷಿಣಿಯವರು : ಅವರು ಈಲ್ಡ್ ಆಗಿದ್ದಾರೆ.

(ಗೊಂದಲ)

ಶ್ರೀ ಹೆಚ್. ಏಕಾಂತಯ್ಯ : ಅವರು ಬೇಡ ಎಂದರೆ ನಾವು ಮಾತನಾಡುವುದಕ್ಕೆ ತಯಾರಿಲ್ಲ. ಅವರು ಈಲ್ಡ್ ಆಗಿಲ್ಲದಿದ್ದರೆ ನಾನು ಇದನ್ನು ಹೇಳುತ್ತಿರಲಿಲ್ಲ. ಕ್ಲಾಸ್ 21 ಅನ್ನು ತಾವು ತೆಗೆದುನೋಡಿ. ಅಲ್ಲಿ ಈ ರೀತಿ ಇದೆ :

"The Government maes, by notification in the official Gazette, omit any entry from the list under sub-section (1) or add any entry there to-or amend any such entry.

ನೀವು ಹೇಗೆ ಬೇಕಾದರೂ ವ್ಯಾಖ್ಯಾನ ಮಾಡಿ. ಹಿಂದೆ ಕಾನೂನು ಪ್ರಕಾರ ನಾವು ಏನು ಅಧಿಕಾರವನ್ನು ಕೊಟ್ಟಿದ್ದೇವೆ ಅದನ್ನು ನೋಟಿಫಿಕೇಷನ್ ಮುಖಾಂತರ ಸರ್ಕಾರ ಅದನ್ನು ಬದಲಾವಣೆ ಮಾಡತಕ್ಕ ಅಧಿಕಾರವನ್ನು ನಾವು ಕೊಟ್ಟಿದ್ದೇವೆ.

ಶ್ರೀ ಕಾಗೋಡು ತಿಮ್ಮಪ್ಪ : ತಾವು ಬಹಳ ಸುಂದರೋಪಸುಂದರವಾಗಿ ಹಳೇ ಕಾನೂನನ್ನು ಮಾಡಿದ್ದೀರಿ.

ಶ್ರೀ ಹೆಚ್. ಏಕಾಂತಯ್ಯ : ನಾವು ಮಾಡಿದ್ದೇವೆ. ಅದರಲ್ಲಿ ನಮ್ಮದೂ ಭಾಗ ಇದೆ. ಅದೇ ರೀತಿ ತಮ್ಮದೂ ಭಾಗವಿದೆ.

ಶ್ರೀ ಕಾಗೋಡು ತಿಮ್ಮಪ್ಪ : ನಮ್ಮವರು ಆಗ ಬಹಳವಾಗಿ ಅರಣ್ಯರೋಧನವನ್ನು ಮಾಡಿದರೂ ಅದನ್ನು ಕೇಳುವಷ್ಟು ತಾಳ್ಮೆ ನಿಮಗೆ ಇರಲಿಲ್ಲ.

ಶ್ರೀ ಬಿ.ಎಂ. ಇದಿನಬ್ಬ : ನಾವು ಬಹಳವಾಗಿ ಅರಣ್ಯ ರೋಧನವನ್ನು ಮಾಡಿದೆವು. ಆದರೆ ಅದು ನಡೆಯಲಿಲ್ಲ ಅಷ್ಟೆ.

ಶ್ರೀ ಕಾಗೋಡು ತಿಮ್ಮಪ್ಪ : ಆದ್ದರಿಂದಲೇ ಈ ಜಿಲ್ಲಾ ಪರಿಷತ್ತಿನ ಕಾನೂನಿಗೆ 182ರ ಪ್ರಕಾರ ಪವರ್ಸ್ ಅಂಡ್ ಫಂಕ್ಷನ್ಸ್ ಎಂದು ಏನು ಕೊಟ್ಟಿದ್ದೀರಿ ಅದರಲ್ಲಿ ಒಂದು ಪ್ರಾವಿಷನ್ ಮಾಡಿದ್ದೀರಿ. ತಾವು ಅದನ್ನು ಓದಿನೋಡಿ. ಸೆಕ್ಷನ್ 182ರ ಪ್ರಕಾರ ಜಿಲ್ಲಾಪರಿಷತ್ತುಗಳಿಗೆ ಸರ್ಕಾರ ಏನು ಅಧಿಕಾರವನ್ನು ಕೊಟ್ಟಿತ್ತು, ಆ ರೀತಿ ಕೊಟ್ಟಂಥ ಅಧಿಕಾರವನ್ನು ಸರ್ಕಾರ ಯಾವುದೇ ಸಂದರ್ಭದಲ್ಲಿ ಬೇಕಾದರೂ ವಿತ್‌ಡ್ರಾ ಮಾಡಬಹುದು. ಈ ರೀತಿ ವಿತ್‌ಡ್ರಾ ಮಾಡುವಾಗ ನೋಟಿಫಿಕೇಷನ್ ಮಾಡಿದರೆ it amounts to amendment of the Act. ಎಂದು ಇದೆ.

ಜಿಲ್ಲಾ ಪರಿಷತ್ತುಗಳಿಗೆ ಕೊಟ್ಟಂಥ ಅಧಿಕಾರಗಳನ್ನು ಸರ್ಕಾರ ನೋಟಿಫಿಕೇಷನ್ ಮುಖಾಂತರ ವಾಪಸು ಪಡೆಯಬಹುದೆಂಬ ಅಧಿಕಾರ ಸೆಕ್ಷನ್ 182ರ ಪ್ರಕಾರ ಇದೆ. ಅದನ್ನು ವಿತ್‌ಡ್ರಾ ಮಾಡಿದರೆ as if it is an amendment to the section ಅಂತ

ಇದೆ. ಈ ಜಿಲ್ಲಾ ಪರಿಷತ್ತುಗಳ ಕರ್ತವ್ಯದ ಬಗ್ಗೆ ನೀವು ಏನು ಅಧಿಕಾರವನ್ನು ಕೊಟ್ಟಿದ್ದೀರಿ ಅದೇ ಅಧಿಕಾರವನ್ನು ಮಂಡಲ ಪಂಚಾಯಿತಿಗೂ ಕೂಡ ಕೊಡಬೇಕೆಂದು ನಾವು ಸೇರಿಸಿದ್ದೇವೆ. ಹಿಂದೆ ಜಿಲ್ಲಾ ಪರಿಷತ್ತುಗಳ ಮೇಲೆ ನೀವು ಏನು ಅಧಿಕಾರವನ್ನು ಇಟ್ಟುಕೊಂಡಿದ್ದೀರಿ ಅದೇ ರೀತಿ ಮಂಡಲ ಪಂಚಾಯಿತಿಗಳ ದೃಷ್ಟಿಯಿಂದಲೂ ಈ ಒಂದು ಹೊಸ ವ್ಯಾಖ್ಯಾನ ಏನು ಇಲ್ಲಿ ಬಿಟ್ಟು ಹೋಗಿತ್ತು, ಅದನ್ನು ಇವತ್ತು ನಾವು ಇಲ್ಲಿ ಸೇರಿಸಿದ್ದೇವೆ; ಅಷ್ಟೆ. ಹಾಗಾದರೆ ನೀವು ಏತಕ್ಕೆ ಜಿಲ್ಲಾ ಪರಿಷತ್ತಿನ ಅಧಿಕಾರವನ್ನು ವಾಪಸು ತೆಗೆದುಕೊಳ್ಳುವುದಕ್ಕೆ ಅಧಿಕಾರವನ್ನು ಇಟ್ಟುಕೊಂಡಿದ್ದಿರಿ. ನೀವು ಭಾರಿ ದೊಡ್ಡ ಅಧಿಕಾರವನ್ನು ಕೊಟ್ಟಿದ್ದೇವೆ, ಇಡೀ ಜಿಲ್ಲಾ ಪರಿಷತ್ತುಗಳು ಸಾರ್ವಭೌಮ ಸಂಸ್ಥೆಗಳು ಅವುಗಳಿಗೆ ಕೊಟ್ಟಂಥ ಅಧಿಕಾರಗಳನ್ನು ಕಿತ್ತುಕೊಳ್ಳತಕ್ಕ ಅಧಿಕಾರ ಸರ್ಕಾರಕ್ಕಿಲ್ಲ, ಈ ರೀತಿ ಮಾಡುವುದರಿಂದ ಪ್ರಜಾಪ್ರಭುತ್ವಕ್ಕೆ ಧಿಕ್ಕಾರವಾಗುತ್ತದೆ. ಪ್ರಜಾಪ್ರಭುತ್ವಕ್ಕೆ ವಿರುದ್ಧವಾಗುತ್ತದೆಂದು ತಾವು ಹೇಳುವುದಾದರೆ ಇವತ್ತು ಸೆಕ್ಷನ್ 182ರ ಪ್ರಕಾರ ಅಧಿಕಾರವನ್ನು ನೀವು ಏತಕ್ಕೆ ಆಗ ಇಟ್ಟುಕೊಂಡಿದ್ದೀರಿ? ನಿಮ್ಮ ವಿವೇಚನೆಯ ಪ್ರಕಾರ ಇವತ್ತು ಆ ಅಧಿಕಾರವನ್ನು ಇಟ್ಟುಕೊಂಡಿದ್ದು ಒಳ್ಳೆಯದೆಂದು ತಿಳಿದಿದ್ದರೆ, ಈಗ ನಮಗೆ ಅನಿಸುತ್ತದೆ, ಹಿಂದಿನ ಸರ್ಕಾರದವರು ಮಾಡಿರತಕ್ಕ ತೀರ್ಮಾನ ಸರಿಯಾಗಿದೆ, ಆದ್ದರಿಂದ ಇಂಥ ಅಧಿಕಾರವನ್ನು ಮಂಡಲ ಪಂಚಾಯಿತಿ ದೃಷ್ಟಿಯಿಂದ ಇಡೋಣ ಎಂದು ನಾವು ತಿದ್ದುಪಡಿ ತಂದಿದ್ದೇವೆ. ಇದರಲ್ಲಿ ಹೊಸದೇನೂ ಇಲ್ಲ. ನೀವು ಮಾಡುವಾಗ ಬಹಳ ಚೆನ್ನಾಗಿತ್ತು. ನಾವು ಮಾಡುವಾಗ ಎಲ್ಲ ಕೊಟ್ಟುಹೋಗಿಬಿಟ್ಟಿತ್ತು.

ಶ್ರೀ ಹೆಚ್. ಏಕಾಂತಯ್ಯ : 184ರಲ್ಲಿ ವಾಪಸ್ ತೆಗೆದುಕೊಳ್ಳುವುದಕ್ಕೆ ಅಧಿಕಾರ ಇದೆಯಾ?

ಶ್ರೀ ಕಾಗೋಡು ತಿಮ್ಮಪ್ಪ : ನಾನು ಹೇಳುತ್ತೇನೆ, ಕೇಳಿ;

" The Government may, be notification in the official Gazette, omit any entry from the list under sub-section (1) or add any entry there to or amend any such entry. On the issue of such notification, the list shall be deemed to have been amended accordingly. Every such notification shall be placed before each House of the State Legislature.

ಸ್ವಾಮಿ ಇದನ್ನು ಏತಕ್ಕೆ ಮಾಡಿದಿರಿ. ಇದೇ ಕಂಟ್‌ನೌಷನ್ ಇದರಲ್ಲಿ ಸೇರಿಸಿದ್ದೇವೆ. ಕ್ಲಾಸ್ 2 ಇದೆಯಲ್ಲ, ಸೆಕ್ಷನ್ 182, ಈ ಕ್ಲಾಸ್ 2ನ್ನು ಇಲ್ಲಿ ಸೇರಿಸಿದ್ದೇವೆ. ಎಲ್ಲಿ ಅಂದರೆ 56ರಲ್ಲಿ ಇದು ಏನು ತಪ್ಪು ಸ್ವಾಮಿ? ನೀವು ಪ್ರಜಾಪ್ರಭುತ್ವದ ಬಗ್ಗೆ ಹೇಳತಕ್ಕಂಥವರು. ಅಧಿಕಾರ ವಿಕೇಂದ್ರಿಕರಣವಾಗಬೇಕೆಂದು ಹೇಳತಕ್ಕಂಥವರು, ಒಂದು ಸಾರಿ ನೀವು ಅಧಿಕಾರ ಕೊಟ್ಟು ಹಿಂಬಾಗಿಲಿನಿಂದ ಅವರ ಅಧಿಕಾರವನ್ನು ಕಿತ್ತುಕೊಳ್ಳುವುದಕ್ಕೆ ಹೊರಟಿದ್ದರಲ್ಲಾ, ಆಗ ನಿಮಗೆ ನಾಚಿಕೆಯಾಗಲಿಲ್ಲವೇ? ಆವಾಗ ಪ್ರಜಾಪ್ರಭುತ್ವದ ಬಗ್ಗೆ ನಿಮಗೆ ಹೊಳೆಯಲಿಲ್ಲವೇ. ಆದ್ದರಿಂದ ಈ ಸಮಸ್ಯೆಗಳು ಏನಿವೆ, ಇವು ಶಾಸನದಿಂದ ರಚನೆಯಾಗಿರತಕ್ಕಂಥ ಸಮಸ್ಯೆಗಳು, ಇವರಿಗೆ ಕೊಟ್ಟಿರತಕ್ಕಂಥ ಅಧಿಕಾರವನ್ನು ಏನಾದರೂ ಕಾರಣದಿಂದ ದುರುಪಯೋಗ ಮಾಡಿದ್ದರೆ ಅಂಥ ಒಂದು ಸನ್ನಿವೇಶದಲ್ಲಿ ಆ ಅಧಿಕಾರವನ್ನು ವಾಪಸ್ ಪಡೆಯಬೇಕು. ಆ ವಾಪಸ್ ಪಡೆದಂಥ ಅಧಿಕಾರದ ಒಂದು ನೋಟಿಫಿಕೇಶನ್ ಈ ಮಾನ್ಯ ಸಾರ್ವಭೌಮ ಸಭೆಯಲ್ಲಿ ಮಂಡಿಸಬೇಕಾಗುತ್ತದೆ. ಏಕೆಂದರೆ ಈ ಮಾನ್ಯ ಸಾರ್ವಭೌಮ ಸಭೆ ಯಾವ ಕಾರಣದಿಂದ ಆ ನೋಟಿಫಿಕೇಷನ್ ಹೊರಡಿಸಿದ್ದೇವೆ ಎಂಬುದನ್ನು ತಿಳಿದುಕೊಳ್ಳುವುದಕ್ಕೆ ಚರ್ಚೆ ಮಾಡುವುದಕ್ಕೆ ತನ್ನ ಅಭಿಪ್ರಾಯವನ್ನು ಹೇಳುವುದಕ್ಕೆ ತನ್ನ ಸಾರ್ವಭೌಮತ್ವವನ್ನು

ಈ ಶ್ರಾಸನದ ಮುಖಾಂತರ ಇಟ್ಟುಕೊಂಡಿರಬೇಕಾದರೆ, ಇದೇ ಶಾಸನದ ವ್ಯವಸ್ಥೆಯನ್ನು ಮಂಡಲ್ ಪಂಚಾಯತ್‌ಗಳಿಗೆ ಒಂದು ತಿದ್ದುಪಡಿ ಮುಖಾಂತರ ನಾವು ತಂದಿದ್ದೇವೆ. ಅದಕ್ಕೆ ಮಾನ್ಯ ಏಕಾಂತಯ್ಯನವರು ವಾಖ್ಯಾನಮಾಡಿ ಹೇಳುತ್ತಾರೆ; ಅಧಿಕಾರವನ್ನು ತೆಗೆದುಕೊಳ್ಳಲಿಲ್ಲ ಎಂದು ಹೇಳುತ್ತೀರಿ? ಆದರೆ ಇಲ್ಲಿ ಸೇರಿಸಿದ್ದೀರಿ ಎಂದು ಹೇಳುತ್ತಾರೆ. ನಾವು ಏನು ಹೊಸದಾಗಿ ಮಾಡಿದ್ದೇವೆಯೇ? ಅವರು ಮಾಡಿರತಕ್ಕಂಥ ಶಾಸ್ತ್ರವನ್ನೇ 256ನೇ ವಿಧಿಯಲ್ಲಿ ಅದನ್ನು ಸೇರಿಸಿದ್ದೇವೆ ಅಷ್ಟೇ ವಿನಃ ಮತ್ತೆ ಏನೇನೂ ಮಾಡಿಲ್ಲ. ಆದ್ದರಿಂದ ಇವತ್ತು ಏನಾದರೂ ಅಧ್ಯಕ್ಷರೇ ಈ 182 ಕ್ಲಾಸ್ 2ನಲ್ಲಿ ಕೊಟ್ಟಿರತಕ್ಕಂಥ ಅಧಿಕಾರ ತಪ್ಪು ಎಂದು ಅವರು ಏನಾದರೂ ಸಾರ್ವಜನಿಕರಲ್ಲಿ ಕ್ಷಮೆ ಕೇಳುವುದಾದರೆ, ಯಾರು ಜನತಾದಳದವರು ಆವಾಗ ನಾವು ಏನಾದರೂ ಪುನರ್ ಪರಿಶೀಲನೆ ಮಾಡೋಣ. ಈಗ ನಾವು ಕೇಳಬೇಕಾಗುತ್ತದೆ. ಏನೋ ಒಂದು ದೊಡ್ಡ ಪ್ರಚಾರಕ್ಕೋಸ್ಕರವಾಗಿ ಜಿಲ್ಲಾಪರಿಷತ್ತಿಗೆ ಇಷ್ಟೆಲ್ಲಾ ಎಂಟ್ರೀಸ್ 101 ಸೇ ಏನು ಕೊಟ್ಟಿಲ್ಲ ಏನು ಬಿಟ್ಟಿಲ್ಲ ಎಲ್ಲ ಕೊಟ್ಟುಬಿಟ್ಟಿದ್ದೀವಿ ಆದರೆ ಒಂದೇ ಕ್ಲಾಸ್‌ನಲ್ಲಿ ಸಣ್ಣದು ಒಂದ ಇದೆ ಈಗ ಬೆಲೂನ್ ಇರುತ್ತದೆ ಆ ಬೆಲೂನ್‌ಗೆ ಒಂದು ಸಣ್ಣ ಸೂಜಿಯನ್ನು ಚುಚ್ಚಿದರೆ ಸಾಕು ಅದು ಬಡ್ ಎಂದು ಹೊಡೆಯುತ್ತದೆ. ಅದೇರೀತಿ ಇಲ್ಲಿ ಇಷ್ಟು ದೊಡ್ಡ ವಾಖ್ಯಾನ ಮಾಡಿ ಅಧಿಕಾರ ಕೊಟ್ಟಿದ್ದೇವೆ ಕೃಷಿ ಕೊಟ್ಟಿದ್ದೇವೆ ಸಹಕಾರ ಕೊಟ್ಟಿದ್ದೇವೆ ಕೈಗಾರಿಕೆ ಕೊಟ್ಟಿದ್ದೇವೆಂದು ಹೇಳಿ ಯಾವಾಗಬೇಕಾದರೂ ಕೊಟ್ಟಂಥ ಅಧಿಕಾರವನ್ನು ವಾಪಸ್ ತೆಗೆದುಕೊಂಡು ಆ ಬಗ್ಗೆ ಒಂದು ಗೆಜೆಟ್ ನೋಟಿಫಿಕೇಷನ್ ಈ ಸದನದ ಮುಂದೆ ಮಂಡಿಸಿದರೆ ಅದು ಈ ಶಾಸನಕ್ಕೆ ತಿದ್ದುಪಡಿ ಆದಂತೆ ಎಂದು ಹೇಳಿದಿರಲ್ಲ, ನೀವು ಹೇಳಿದ ಮಾತನ್ನೇ ನಾವು ಮಂಡಿಸಿದರೆ, ನೀವು ಕೊಟ್ಟಂಥ ಅಧಿಕಾರವನ್ನು ಕಿತ್ತುಕೊಳ್ಳುವುದಕ್ಕೆ ಹೊರಟಿದ್ದಾರೆಂದು ಮಾನ್ಯ ಏಕಾಂತಯ್ಯನವರು ಏಕಾಭಿಪ್ರಾಯವನ್ನು ಏನು ಹೇಳುತ್ತಿದ್ದಾರೆ. ಇದು ಬಹಶ ನನ್ನ ಅಭಿಪ್ರಾಯವಲ್ಲ ಏಕಾಂತಯ್ಯನವರೇ ಇದು ಜನರ ಅಭಿಪ್ರಾಯ.

ಶ್ರೀ ಹೆಚ್. ಏಕಾಂತಯ್ಯ: ಈಗ ಈ ಬಗ್ಗೆ ನಾನು ಏನಾದರು ಹೇಳಿದರೆ ನಿಮ್ಮ ಭಾಷಣಕ್ಕೆ ಅಡ್ಡಿ ಆಗುತ್ತದೆ. ಆದ್ದರಿಂದ ನೀವು ಮುಂದುವರೆಸಿ ನಾನು ನನ್ನ ಭಾಷಣದಲ್ಲಿ ಈ ಬಗ್ಗೆ ಹೇಳುತ್ತೇನೆ.

ಉಪಾಧ್ಯಕ್ಷರು: ತಾವು ಮುಂದುವರೆಸಿ.

ಶ್ರೀ ಕಾಗೋಡು ತಿಮ್ಮಪ್ಪ: ಆದ್ದರಿಂದ ಈ ಪಂಚಾಯಿತಿಗೆ ಕೊಟ್ಟಂಥ ಅಧಿಕಾರ ಕಿತ್ತುಕೊಳ್ಳತಕ್ಕ ಕೆಲಸ ಏನೂ ಇಲ್ಲ. ಅದಿನ್ನೂ ಬಾಲ್ಯಾವಸ್ಥೆಯಲ್ಲಿರುವುದರಿಂದ ಅವುಗಳ ಆಡಳಿತವನ್ನು ನೋಡಬೇಕಾಗುತ್ತದೆ. ಅವುಗಳನ್ನು ನೋಡಿ ಏನಾದರೂ ಸನ್ನಿವೇಶ ಸಂದರ್ಭ ಬಂದರೆ ಅಂಥ ಒಂದು ಕೆಲಸವನ್ನು ಮಾಡಬೇಕಾಗುತ್ತದೆ. ಏಕೆಂದರೆ ಮೊನ್ನೆ ತಾನೆ ಆಹಾರ ವಿತರಣೆ ಮಾಡತಕ್ಕ ಕೆಲಸವನ್ನು ಜಿಲ್ಲಾ ಪರಿಷತ್ ವ್ಯಾಪ್ತಿಯಿಂದ ವಾಪಸ್ ತೆಗೆದುಕೊಳ್ಳತಕ್ಕ ಸನ್ನಿವೇಶ ಬಂತು. ಏತಕ್ಕೆ ಬಂತು?

ಶ್ರೀ ಎಚ್. ಏಕಾಂತಯ್ಯ: ಹೇಳಬೇಕಾ?

ಶ್ರೀ ಕಾಗೋಡು ತಿಮ್ಮಪ್ಪ: ಹೇಳಬೇಕಾ? ನಾನು ಹೇಳುತ್ತೇನೆ. ನೀವು ಹೇಳುವುದು ಬೇಡ.

ಶ್ರೀ ಎಚ್. ಏಕಾಂತಯ್ಯ: ಆಹಾರ ವಿತರಣೆಯಲ್ಲಿ ತಪ್ಪಾಯಿತು ಎಂಬ ಕಾರಣದಿಂದ ಕ್ತಿತುಕೊಳ್ಳುವುದಾದರೆ ನೀವು ಅದನ್ನು ಸರಿಪಡಿಸಿ ವಿಧಾನಸೌಧದ

ಮಟ್ಟದಲ್ಲಿ ಏನು ನಡೆಯುತ್ತಿದೆ ಅದನ್ನು ಮೊದಲು ಸರಿಪಡಿಸಿ ಆಮೇಲೆ ಅಲ್ಲಿಗೆ ಹೋಗೋಣ.

ಶ್ರೀ ಕಾಗೋಡು ತಿಮ್ಮಪ್ಪ: ಆಹಾರ ಮಾಡುವುದನ್ನು ಜನತಾ ದಳದವರ ಪಾರ್ಟಿ ಕಾರ್ಯಕ್ರಮವಾಗಿ ಮಾಡಿಕೊಂಡು ಪಾರ್ಟಿ ಕಾರ್ಯಕರ್ತರಿಗೆ ಸಹಾಯಮಾಡುವಂಥ ಕೆಲಸ ಮಾಡದೆ ಪಕ್ಷಾತೀತವಾಗಿ ನೋಡಿ ಪ್ರಾಮಾಣಿಕವಾಗಿ ಬಡವರಿಗೆ ಕೊಡುವಂಥ ಆಹಾರವಸ್ತುಗಳನ್ನು ಅವರಿಗೆ ಮುಟ್ಟಿಸತಕ್ಕ ಕೆಲಸ ನೀವು ಮಾಡಲಿಲ್ಲ. ಪಾರ್ಟಿ ಕಾರ್ಯಕರ್ತ ಹಳ್ಳಿಯಲ್ಲಿ ಒಬ್ಬ ಚೀಟಿ ಹಿಡಿದುಕೊಂಡು ತಿರುಗಬೇಕು, ಅವನಿಗೆ ಒಂದು ನ್ಯಾಯಬೆಲೆ ಅಂಗಡಿ ಕೊಟ್ಟುಬಿಟ್ಟರೆ ಅವನು ಜನತಾ ಪಾರ್ಟಿ ಜೈ, ಜನತಾ ದಳ ಜೈ ಎಂದು ಹೇಳಿ ತಿರುಗುತ್ತಾನೆ. ಆದರೆ ನಾವು ಹಾಗೆ ಕೊಡುವುದಿಲ್ಲ.

ಶ್ರೀ ಎಲ್.ಆರ್. ಶಿವರಾಮೇಗೌಡ: ಕಗೋಡು ತಿಮ್ಮಪ್ಪನವರೇ, ಬರೀ ಕಾರ್ಯಕರ್ತರನ್ನು ಗುರುತಿಸಿ ಅಂಗಡಿಗಳನ್ನು ಕೊಟ್ಟಿದ್ದಾರೆ.

ಶ್ರೀ ಎಚ್. ಏಕಾಂತಯ್ಯ: ಚಿತ್ರದುರ್ಗ ಜಿಲ್ಲೆಯಲ್ಲಿ ಜನತಾ ದಳ ಜೈ ಎನ್ನವವರಿಗೇ ಕೊಟ್ಟಿಲ್ಲ. ಬೇಕಾದರೆ ಹೋಗಿ ನೋಡಿಕೊಂಡು ಬನ್ನಿ; ಈ ಮಟ್ಟದಲ್ಲಿ ನೀವು ವಾದ ಮಾಡುತ್ತೀರಿ ಎಂದು ನಾನು ತಿಳಿದುಕೊಂಡಿರಲಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ: ಅವರೂ ಸಹಕಾರಿಗಳು. ಬಹಳ ಅನುಭವ ಇರುವವರು. ಆಹಾರ ವಿತರಣೆ ಮಾಡತಕ್ಕ ಅಧಿಕಾರ ಸಹಕಾರ ಸಂಘಗಳಿಗೆ ಏನಿತ್ತು ಅದನ್ನು ಕಿತ್ತು ನಿಮ್ಮ ಪಕ್ಷದ ಕರ್ಯಾರ್ಕರ್ತರಿಗೆ ಕೊಟ್ಟಿದ್ದೀರಿ. ಇವತ್ತು ಎಷ್ಟು ಸಹಕಾರ ಸಂಘಗಳು ಮುಚ್ಚಿವೆ ಹೇಳಿ ಎಷ್ಟು ಸಹಕಾರಸಂಘಗಳಲ್ಲಿ ಲುಕ್ಸಾನಾಗಿದೆ ದಯವಿಟ್ಟು ಹೇಳಿ.

ಶ್ರೀ ಎಚ್. ಏಕಾಂತಯ್ಯ: ಅದಕ್ಕೆ ಯಾರಾದರೂ ವಿರೋಧ ಮಾಡಿದ್ದಾರಾ? ತಾವು ಹೇಳಿದ್ದು ರೆಕಾರ್ಡ್‌ನಲ್ಲಿರಲಿ. ಆದರೆ ಸಹಕಾರ ಸಂಘಗಳ ಮುಖಾಂತರ ಆಹಾರ ವಿತರಣೆ ಮಾಡಬೇಕೆಂದು ತಮ್ಮ ಭಾವನೆ ಇದ್ದರೆ ಅದಕ್ಕೆ ನಾವು ವಿರೋಧ ಮಾಡಿದ್ದರೆ ಹೇಳಿ.

ಶ್ರೀ ಕಾಗೋಡು ತಿಮ್ಮಪ್ಪ: ನೀವು ಸಹಕಾರ ಚಳುವಳಿಯಲ್ಲಿ ಬಹಳ ದುಡಿದಿದ್ದೀರಿ. ಅನುಭವ ಇದೆ. ಅನೇಕ ಸಾರಿ ಇದರ ಬಗ್ಗೆ ದಕ್ಷತೆಯಿಂದ ಮಾತನಾಡಿದ್ದೀರಿ ಮತ್ತು ಪ್ರತಿಪಾದನೆ ಮಾಡಿದ್ದೀರಿ. ಇವತ್ತು ಸಹಕಾರ ಸಂಘಗಳು ಆಹಾರ ವಿತರಣೆ ಮಾಡತಕ್ಕ ಕೆಲಸವನ್ನು ವಹಿಸಿಕೊಂಡಿದ್ದನ್ನು ನೀವು ಕಿತ್ತು ಬೇರೆಯವರಿಗೆ ಕೊಟ್ಟಿಲ್ಲ ಡೆಪ್ಯೂಟಿ ರಿಜಿಸ್ಟಾರ್ ಮತ್ತು ಜಿಲ್ಲಾ ಬ್ಯಾಂಕುಗಳು ಸಹಕಾರ ಸಂಘಗಳಿಂದ ಕಿತ್ತುಕೊಳ್ಳಬೇಡಿ ಅವರೇ ನಡೆಸಿಕೊಂಡು ಹೋಗಲಿ ಎಂದು ಜಿಲ್ಲಾಧಿಕಾರಿಗಳಿಗೆ ಅಥವಾ ಜಿಲ್ಲಾ ಪರಿಷತ್ತಿನವರಿಗೆ ಹೇಳಿದರೂ ಕೂಡ ನೀವು ಕೇಳಲಿಲ್ಲ. ಇದಕ್ಕೆ ಒಂದೇ ಒಂದು ಕಾರಣ ನಿಮ್ಮ ಪಾರ್ಟಿಯವನಿಗೆ ಕೊಡಬೇಕು ಎಂಬುದು. ಜಿಲ್ಲಾ ಬ್ಯಾಂಕುಗಳು ಜಿಲ್ಲೆಯ ಡೆಪ್ಯೂಟಿ ರಿಜಿಸ್ಟಾರ್ ಸಲಹೆ ವಿರುದ್ಧ ಎಷ್ಟು ನ್ಯಾಯ ಬೆಲೆ ಅಂಗಡಿಗಳನ್ನು ಕೊಟ್ಟಿದ್ದೀರಿ ಎಂಬ ಬಗ್ಗೆ ಲೆಕ್ಕ ತೋರಿಸಲಾ?

ಶ್ರೀ ಬಿ.ಹೆಚ್. ಬನ್ನಿಕೋಡ್: ಅಧಿಕಾರವನ್ನು ಅಧಿಕಾರಿಗಳಿಂದ ಕಿತ್ತುಕೊಂಡು ಅಧಿಕಾರಿಗಳನ್ನು ಪಕ್ಷದ ಕೆಲಸಕ್ಕೆ ನೀವು ಉಪಯೋಗಿಸಿದ್ದೀರಿ.

ಶ್ರೀ ಕಾಗೋಡು ತಿಮ್ಮಪ್ಪ: ಈ ಪಾಪ ಮಾಡಿದ ಕಾರಣಕ್ಕೆ ಬಡವರಿಗೆ ಕೊಟ್ಟು ಎಣ್ಣೆ, ಸಕ್ಕರೆ, ಅಕ್ಕಿ, ಅವರಿಗೆ ಮುಟ್ಟಿಲ್ಲ.

ಶ್ರೀ ಆರ್. ವಿ. ದೇಶಪಾಂಡೆ: ತಾವು ಜಿಲ್ಲಾ ಪರಿಷತ್ ಫಂಕ್ಷನಿಂಗ್ ಬಗ್ಗೆ ಕೆಲವು ಆಪಾದನೆಗಳನ್ನು ಮಾಡುತ್ತಿದ್ದೀರಿ. ಆದರೆ ಕೆಲವು ಜಿಲ್ಲಾ ಪರಿಷತ್ತುಗಳು ನಿಮ್ಮ ಪಕ್ಷದ ಅಧೀನದಲ್ಲಿದೆ. ಅದು ತಮಗೆ ಗೊತ್ತಿದೆಯೋ ಇಲ್ಲವೋ ಸ್ಪಷ್ಟೀಕರಣ ಕೊಡಿ. ಇದ್ದರೆ ನಿಮ್ಮ ಪಕ್ಷದ ಅಧಿಕಾರದಲ್ಲಿರುವ ಪರಿಷತ್ ಮೇಲೆ ಇಂಥ ಆಪಾದನೆ ಮಾಡುತ್ತಾ ಇದ್ದೀರಾ?

ಶ್ರೀ ಕಾಗೋಡು ತಿಮ್ಮಪ್ಪ: ನಾನು ಜಿಲ್ಲಾ ಪರಿಷತ್ತಿನ ಮೂಲಕ ಆಹಾರ ವಿತರಣೆ ಮಾಡತಕ್ಕ ಕೆಲಸದಲ್ಲಿ ಏನು ನಡೆಯಿತು ಎಂಬುದನ್ನು ಹೇಳುತ್ತಿದ್ದೇನೆ. ಮಾನ್ಯ ದೇಶಪಾಂಡೆಯವರು ಸಹಕಾರಿಕ್ಷೇತ್ರದಿಂದ ಬಂದವರು ತಾವು ಇದರ ಬಗ್ಗೆ ಲಕ್ಷ್ಯ ಕೊಡಲಿಲ್ಲ, ಹಳ್ಳಿ ಮಟ್ಟದಲ್ಲಿ ಎಷ್ಟು ಸಹಕಾರ ಸಂಘಗಳು ಮುಚ್ಚಿವೆ ಎಂಬುದೂ ನಿಮಗೆ ಗೊತ್ತಿದೆ. ಆದ್ದರಿಂದ ಆ ಸಹಕಾರ ಸಂಘಗಳಿಗೆ ಇದ್ದಂಥ ಹಕ್ಕನ್ನು ಕಿತ್ತರಲ್ಲ ಅದು ನ್ಯಾಯವೇ? ಅದೇ ಅಧಿಕಾರವನ್ನು ಜಿಲ್ಲಾಧಿಕಾರಿಗಳಿಗೆ ಕೊಟ್ಟಿದ್ದು ಏತಕ್ಕೆ?

ಶ್ರೀ ಸಿ. ಬೈರೇಗೌಡ: ಅದು ಅನ್ಯಾಯ ಒಪ್ಪುತ್ತೇನೆ. ಅದನ್ನು ಯಾರು ಮಾಡಿದರೂ ಕೂಡ ತಪ್ಪೆ; ಆದರೆ ವರ್ಷದಿಂದೀಚೆಗೆ ನಿಮ್ಮ ಸರ್ಕಾರ ಅಧಿಕಾರಕ್ಕೆ ಬಂತಲ್ಲ ಆಮೇಲೆ ಸಹ ಈ ರೀತಿ ಕೊಟ್ಟಂಥ 101 ಉದಾಹರಣೆಗಳನ್ನು ಕೊಡುವುದಕ್ಕೆ ನಾನು ಸಿದ್ಧನಿದ್ದೇನೆ. ಏನು ಹೇಳುತ್ತೀರಿ ಅದಕ್ಕೆ ನೀವು? ಸಹಕಾರ ಸಂಘಗಳಿಗೆ ಕೊಡಬೇಕಾದಂಥದ್ದನ್ನು ಕಿತ್ತು ಖಾಸಗಿಯವರಿಗೆ ಕೊಟ್ಟಿದ್ದಾರೆಂದು ನೀವೇನು ಮಾತು ಹೇಳುತ್ತಿದ್ದೀರಿ ಅದೇರೀತಿ ನಿಮ್ಮ ಸರ್ಕಾರ ಬಂದಮೇಲೆ ನಡೆದಿರುವ 101 ಉದಾಹರಣೆಗಳಿವೆ. ಅದರ ವಿವರ ಕೊಡುವುದಕ್ಕೆ ನಾನು ತಯಾರಿದ್ದೇನೆ. ಏನು ಮಾಡುತ್ತೀರಿ ಆಗ? ಯಾರು ಮಾಡಿದರೂ ಅದು ತಪ್ಪೆ. ಏನು ಹೇಳುತ್ತೀರಿ ನೀವು?

ಶ್ರೀ ಕರಿಯಣ್ಣ: ಜಿಲ್ಲಾ ಪರಿಷತ್ ಅಧ್ಯಕ್ಷರು ಕ್ಯಾನ್ಸಲ್ ಮಾಡಿರುವುದು.

ಶ್ರೀ ಕಾಗೋಡು ತಿಮ್ಮಪ್ಪ: ಒಂದು ಸಾರಿ ಕೊಟ್ಟಿದ್ದನ್ನು ವಾಪಸ್ ಕಿತ್ತುಕೊಳ್ಳುವುದಕ್ಕೆ ಹೋದರೆ ಎಷ್ಟು ತೊಂದರೆಯಾಗುತ್ತದೆ ಎಂಬುದಕ್ಕೆ ಉದಾಹರಣೆ ಹೇಳುತ್ತೇನೆ. ಹಾವನೂರ್ ಮತ್ತು ಮಂಡಲ್ ವರದಿಗಳನ್ನು ಜಾರಿಗೆ ಕೊಟ್ಟರು. ಆಗ ಒಕ್ಕಲಿಗ ಜನಾಂಗವನ್ನು ಹಿಂದುಳಿದವರೆಂದು ಸೇರಿಸಿಬಿಟ್ಟರು. ಈಗ ಚಿನ್ನಪ್ಪ ರೆಡ್ಡಿಯವರ ವರದಿಯಲ್ಲಿ ಅಗು ಸೇರಿಲ್ಲ, ಒಂದು ಸಾರಿ ಹಿಂದುಳಿದವರ್ಗದವರು ಎಂದು ಪರಿಗಣನೆ ಮಾಡಿ ನಂತರ ಅದನ್ನು ಕಿತ್ತುಕೊಂಡರೆ ಎಷ್ಟು ಹೇಸಿಟೇಷನ್ ಮಾಡುತ್ತಾರೆ?

ಶ್ರೀ ಆರ್.ಎನ್. ನಾಯಕ್: ಕೊಟ್ಟಿದ್ದನ್ನು ಕಿತ್ತುಕೊಳ್ಳುವುದಕ್ಕೆ ಹೋದರೆ ಅವರು ಬೊಬ್ಬೆ ಹಾಕುತ್ತಾರೆ. ತಪ್ಪು ಮಾಡಿದನ್ನು ತಾವು ಒಪ್ಪಿಕೊಳ್ಳಿ.

ಶ್ರೀ ಬಿ.ಹೆಚ್. ಬನ್ನಿಕೋಡ್: ಹೀಗೇ ಅಪ್ರತ್ಯಕ್ಷವಾಗಿ ಮಾತನಾಡುವ ಬದಲು ಈ ಬಗ್ಗೆ ನೇರ ಚರ್ಚೆಗೆ ಬನ್ನಿ.

ಶ್ರೀ ಸಿ. ಬೈರೇಗೌಡ: ನಾನು ಒಪ್ಪುತ್ತೇನೆ. ಯಾರು ಮಾಡಿದರೂ ಅದು ತಪ್ಪೇ. ಸಹಕಾರಿ ಸಂಘಗಳಿಂದ ಖಾಸಗಿಯವರಿಗೆ ಕೊಟ್ಟರೆ ಅದು ತಪ್ಪು ಎಂದು ಹೇಳುವುದಕ್ಕೆ, ಅದು ತಪ್ಪು ಎಂದು ಹೇಳುವುದಕ್ಕೆ ನಾನು ತಯಾರು ಇದ್ದೇನೆ. ಆದರೆ ನಾನು ನೂರಾ ಒಂದಕ್ಕಿಂತಲೂ ಹೆಚ್ಚು ಈ ರೀತಿ ಮಾಡಿರುವುದನ್ನು ನಾನು ತೋರಿಸುತ್ತೇನೆ. ನೀವು ಬಂದಮೇಲೆ ಮಾಡಿರುವುದನ್ನು ತೋರಿಸುತ್ತೇನೆ. ಹಿಂದೆ ಮಾಡಿದ್ದು ಸರಿಯಲ್ಲವೆಂದು

ಹೇಳುತ್ತಿದ್ದೀರಿ. ನೀವೇ ಮಾಡಿದ್ದರೆ ಏನು ಹೇಳುತ್ತೀರಿ? ಇದಕ್ಕೆ ಜವಾಬ್ದಾರರು ಯಾರು ಆಗುತ್ತಾರೆ?

ಶ್ರೀ ಕಾಗೋಡು ತಿಮ್ಮಪ್ಪ: ಈಗ ಒಂದು ಸತ್ಯವನ್ನು ಮಾನ್ಯ ಬೈರೇಗೌಡರು ಒಪ್ಪಿಕೊಂಡರು. ಅನ್ಯಾಯವಾಗಿದೆ ಎಂಬುದನ್ನು ಒಪ್ಪಿಕೊಂಡರು. ಆದರೆ ಇಂತಹ ಸನ್ನಿವೇಶ ರಾಜ್ಯದಲ್ಲಿ ನಿರ್ಮಾಣವಾದರೆ, ಯಾವುದಾದರೂ ಅಧಿಕಾರದ ವ್ಯಾಪ್ತಿ ದುರುಪಯೋಗ ಆದರೆ, ಅದು ಪಂಚಾಯಿತಿ ಮಟ್ಟದಲ್ಲಿರಬಹುದು ಜಿಲ್ಲಾ ಪರಿಷತ್ತಿನ ಮಟ್ಟದಲ್ಲಿರಬಹುದು ಇದು ನಡೆದರೆ ಸಂದರ್ಭದಲ್ಲಿ ಅದನ್ನು ಕೇಳಲು ಈ ಶಾಸನಸಭೆಗೆ ಸರ್ಕಾರಕ್ಕೆ ಜವಾಬ್ದಾರಿ ಬರುತ್ತದೆ. ಆ ಬಗ್ಗೆ ಇಲ್ಲಿ ಉತ್ತರ ಹೇಳಬೇಕಾಗುತ್ತದೆ. ಆ ಉತ್ತರವನ್ನು ಹೇಳುವಾಗ ತಮ್ಮ ಅಧಿಕಾರವನ್ನು........

ಶ್ರೀ ಬಿ.ಹೆಚ್. ಬನ್ನಿಕೋಡ್: ತಾವು ಸಹಕಾರಿ ಸಂಘಗಳ ಬಗ್ಗೆ ಹೇಳಿದಿರಿ.

ಉಪಾಧ್ಯಕ್ಷರು: ಮಾನ್ಯ ಸದಸ್ಯರು ತಮಗೆ ಈಲ್ಡ್ ಆಗಿಲ್ಲ. ಅವರು ಈಲ್ಡ್ ಆದರೆ ಮಾತ್ರ ತಾವು ಮಾತನಾಡಿ.

ಶ್ರೀ ಕಾಗೋಡು ತಿಮ್ಮಪ್ಪ: ಒಂದು ಸಾರಿ ಅವರು ಕೇಳಿದರೆ ಉತ್ತರ ಕೊಡಬಹುದು. ಪದೇಪದೇ ಹೀಗೆ ಹೇಳಿದರೆ ಹೇಗೆ?

ಶ್ರೀ ಬಿ.ಹೆಚ್. ಬನ್ನಿಕೋಡ್: ವಿನಾಕಾರಣ ಯಾವುದೇ ಆಪಾದನೆ ಇಲ್ಲದೇ ಸಹಕಾರಿ ಸಂಘಗಳಿಗೆ ಕೊಟ್ಟ ಅಧಿಕಾರವನ್ನು ಕಿತ್ತುಕೊಳ್ಳಲಾಗಿದೆ. ಇದನ್ನು ಸರಿಮಾಡಿ.

ಶ್ರೀ ಕಾಗೋಡು ತಿಮ್ಮಪ್ಪ: ಇವತ್ತು ಮಾನ್ಯ ಏಕಾಂತಯ್ಯನವರಿಗೆ ಒಂದು ಮಾತನ್ನು ಹೇಳುತ್ತೇನೆ. ಇಂತಹ ಸನ್ನಿವೇಶ ಬಂದರೆ ನಾವು ಏನು ಮಾಡಬೇಕಾಗುತ್ತದೆ? ಇದೇನೂ ನಾವು ಹೊಸದಾಗಿ ಮಾಡಿದ್ದು ಅಲ್ಲ. ಜಿಲ್ಲಾಪರಿಷತ್ತಿನ ವಿಚಾರದಲ್ಲಿ ಸರ್ಕಾರ ಏನು ಆ ಕಾಲದಲ್ಲಿ ವಿಚಾರವನ್ನು ಇಟ್ಟುಕೊಂಡಿತ್ತೋ ಅದೇ ಅಧಿಕಾರವನ್ನು ಇವತ್ತು ಮುಡಲ ಪಂಚಾಯಿತಿ ದೃಷ್ಟಿಯಲ್ಲಿ ನಮ್ಮ ಸರ್ಕಾರ ಇಟ್ಟುಕೊಂಡಿದೆ. ಇದರ ಬಗ್ಗೆ ಬೇರೆ ವ್ಯಾಖ್ಯಾನ ಮಾಡುವುದು ಟೀಕೆ ಮಾಡುವುದು ಸಾದುವಲ್ಲ. ಆ ದೃಷ್ಟಿಯಿಂದ ವಿಚಾರ ಮಾಡಬೇಕೆಂದು ನನ್ನ ಮಾನ್ಯ ಸ್ನೇಹಿತರಿಗೆ ವಿನಯದಿಂದ ಮನವಿಮಾಡಿಕೊಳ್ಳುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ: (ಕನಕಪುರ) ಮಾನ್ಯ ಹಿರಿಯ ಸದಸ್ಯರಾದ ಕಾಗೋಡು ತಿಮ್ಮಪ್ಪನವರು ಮಂಡಲಪಂಚಾಯಿತಿ ಮತ್ತು ಜಿಲ್ಲಾಪರಿಷತ್ತಿನ ಆಶ್ರಯದಲ್ಲಿ ಆಹಾರ ವಿತರಣೆ ಕಾರ್ಯಕ್ರಮ ಏನು ಇದೆ ಅದು ಸರಿಯಾಗಿ ನಡೆಯುತ್ತಿಲ್ಲವಾದ್ದರಿಂದ ದುರ್ವ್ಯವಹಾರ ಆಗುತ್ತಾ ಇದೆ ಎಂದು ಹೇಳುವಾಗ ಸಹಕಾರ ಸಂಘಗಳಿಂದ ಅದನ್ನು ಕಿತ್ತುಕೊಂಡು ಜಿಲ್ಲಾಪರಿಷತ್ತಿನ ಅಧ್ಯಕ್ಷರಿಗೆ ಕೊಟ್ಟರು. ಜಿಲ್ಲಾಪರಿಷತ್ತಿನ ಅಧ್ಯಕ್ಷರು ಬಹುತೇಕ ಕಡೆಗಳಲ್ಲಿ ತಮ್ಮತಮ್ಮ ಪಕ್ಷದವರಿಗೆ ಅನುಕೂಲ ಆಗುವ ದೃಷ್ಟಿಯಿಂದ ಅದನ್ನು ಕೊಟ್ಟಿದ್ದಾರೆ. ಆದುದರಿಂದ ಇದರ ದುರುಪಯೋಗ ಆಗಿದೆ ಎಂದು ಹೇಳಿದ್ದಾರೆ. ನಾನು ಅದನ್ನು ಅಲ್ಲಗೆಳೆಯವುದಿಲ್ಲ. ಇರಬಹುದು ನಿಮ್ಮ ಪಾರ್ಟಿ ಅಧಿಕಾರದಲ್ಲಿ ಇರುವ ಕಡೆ ನಿಮ್ಮ ಪಾರ್ಟಿ ಜನರಿಗೂ, ನಮ್ಮ ಪಾರ್ಟಿ ಇರುವ ಕಡೆ ನಮ್ಮ ಪಾರ್ಟಿ ಜನರಿಗೂ ಕೊಡುವುದು ಪ್ರಜಾತಂತ್ರ ವ್ಯವಸ್ಥೆಯಲ್ಲಿ ಆಗುತ್ತಾ ಇರುತ್ತದೆ. ಅಂದರೆ ಸಹಕಾರಿ ಸಂಘಗಳ ಮೂಲಕ ಆಹಾರ ವಿತರಣೆ ಮಾಡುವಾಗ ಬಹಳ ಚೆನ್ನಾಗಿ ನಡೆಯುತ್ತಿತ್ತು ಎಂದೇನೂ ಅಲ್ಲ. ಸಹಕಾರಿ ಸಂಘಗಳಲ್ಲಿ ಏನು ನಡೆಯುತ್ತಿತ್ತು ಎಂಬುದು ನಮಗೆ ಗೊತ್ತಿದೆ. ಅದು ತಮಗೂ ಗೊತ್ತಿದೆ. ಸಹಕಾರಿ

ಸಂಘಗಳ ಕೈತಪ್ಪಿಸಿ ಸರ್ಕಾರಿ ಅಧಿಕಾರಿಗಳ ಕೈಗೆ ಕೊಟ್ಟಾಗ ಅವರೇನೂ ಪುಕಸಟ್ಟೆ ಕಾನೂನಿಗೆ ವಿರುದ್ಧವಾಗಿ ಕೊಡುತ್ತಾರಾ? ಅವರ ಕೈ ಬೆಚ್ಚಗೆ ಮಾಡಿದರೇನೇ ಕೊಡುತ್ತಾರೆಂಬುದನ್ನು ಅರ್ಥಮಾಡಿಕೊಳ್ಳಬೇಕು. ಈಗ ಪಟ್ಟಣ ಪ್ರದೇಶಗಳಲ್ಲಿ ಜಿಲ್ಲಾಪರಿಷತ್ತು ಮಂಡಲ ಪಂಚಾಯಿತಿ ಕಾರ್ಪೋರೇಷನ್ ವ್ಯಾಪ್ತಿಯ ಪ್ರಶ್ನೆ ಬರುವುದಿಲ್ಲ. ಇವತ್ತು ಪಟ್ಟಣ ಪ್ರದೇಶಗಳಲ್ಲಿ ಆಹಾರ ವಿತರಣೆ ಆಗುವ ಅಂಗಡಿಗಳಲ್ಲಿ ದುರ್ವ್ಯವಹಾರ ಇಲ್ಲವೇ? ಆದ್ದರಿಂದ ಮಂಡಲಪಂಚಾಯಿತಿ ಅಧಿಕಾರ ಜಿಲ್ಲಾಪರಿಷತ್ ಅಧಿಕಾರದಿಂದ ಒಂದು ಇಲಾಖೆಯನ್ನು ತೆಗೆಯುವುದರಿಂದ ಅಲ್ಲಿ ಭ್ರಷ್ಟಾಚಾರ ಹೆಚ್ಚಾಗುತ್ತದೆ ಅಥವಾ ಕಡಿಮೆಯಾಗುತ್ತದೆ ಎಂದು ನಾವು ವಾದ ಮಾಡುವುದು ಬೇಡ. ಒಂದು ವೇಳೆ ಇಂತಹ ವಾದ ಮಾಡಿದರೆ ಏನಾಗುತ್ತದೆಂದು ಹೇಳಿದರೆ ಮೂಲಭೂತವಾಗಿ ಜನಗಳಿಂದ ಓಟನ್ನು ತೆಗೆದುಕೊಂಡು ಪ್ರತಿನಿಧಿಗಳಾಗಿರುವ ನಮ್ಮ ಕೈಗೆ ಅಧಿಕಾರ ಬೇಡ ನಾವೆಲ್ಲರೂ ಭ್ರಷ್ಟರು, ಅವರು ಮಾತ್ರ ಉತ್ತಮರು. ಆದರೆ ಕೈಗೆ ಅಧಿಕಾರವನ್ನು ಕೊಡಬೇಕೆನ್ನತಕ್ಕಂತಹ ವಾದಕ್ಕೆ ಪುಷ್ಟೀಕರಣ ಕೊಟ್ಟಂತೆ ಆಗುತ್ತದೆಂಬುದನ್ನು ತಾವು ಗಮನದಲ್ಲಿಟ್ಟುಕೊಳ್ಳಬೇಕು. ಆಹಾರ ವಿವರಣೆಯಲ್ಲಿ ಅನ್ಯಾಯ ನಡೆಯುತ್ತಿದೆ. ಪಟ್ಟಣ ಪ್ರದೇಶದಲ್ಲಿ ಆಹಾರ ವಿತರಣೆ ವ್ಯವಸ್ಥೆಯ ಬಗ್ಗೆ ಸರಕಾರದ ಅಧಿಕಾರಿಗಳು ಕ್ರಮವನ್ನು ತೆಗೆದುಕೊಳ್ಳುವ ಹಾಗೆ ಗ್ರಾಮಾಂತರ ಪ್ರದೇಶದಲ್ಲೂ ಕೂಡ ಕ್ರಮವನ್ನು ತೆಗೆದುಕೊಳ್ಳಬೇಕು. ನೀವು ಸಹ ಮಂತ್ರಿಯಾಗಿ ಕೆಲಸ ಮಾಡಿದ್ದೀರಿ. ಕಾನ್‌ಸ್ಟೇಬಲ್ ಎಸ್.ಪಿ.ಗಳ ನಿಮ್ಮ ಹತ್ತಿರ ಬಂದು ಫುಡ್ ಸೇಲ್‌ಗೆ ಹಾಕಿಕೊಡಿ ಫಾರೆಸ್ಟ್ ಸೆಲ್‌ಗೆ ಹಾಕಿಕೊಡಿ ಎಕ್ಸೈಸ್ ಸೆಲಗೆ ಹಾಕಿಕೊಡಿ ಎಂದು ಏಕೆ ಬರುತ್ತಾರೆ ಎಂಬುದನ್ನು ತಾವು ವಿಚಾರ ಮಾಡಬೇಕು. ಇದು ನಮಗೆಲ್ಲಾ ಅರ್ಥವಾಗತಕ್ಕಂಥಾದ್ದೆ ಆಗಿರುವಾಗ ನಮಗೆ ಎಷ್ಟು ಬೇಕೋ ಅಷ್ಟನ್ನು ಮಾತ್ರ ನಾವು ಜೀರ್ಣಿಸಿಕೊಳ್ಳುವುದಕ್ಕೆ ನಾವು ಪ್ರಯತ್ನ ಮಾಡಬೇಕು. ಆದರೆ ಮೂಲಭೂತವಾಗಿ ಅಥವಾ ಪ್ರಜಾತಂತ್ರದ ಪ್ರತಿನಿಧಿಗಳಿಗೆ ಬೇಕಾಗಿರತಕ್ಕಂತಹ ಗೌರವ ಮತ್ತು ಹಕ್ಕು ಏನು ಇದೆ ಅದರಲ್ಲಿ ಬೇರೆಯವರಿಗೆ ಪಾಲು ಕೊಡುವುದು ಬೇಡ.

ಶ್ರೀ ಕಾಗೋಡು ತಿಮ್ಮಪ್ಪ: ಮಾನ್ಯ ಸಿಂಧ್ಯರವರು ಹೇಳಿದ್ದು ಸರಿ. ತಪ್ಪು ಮಾಡಿದವರನ್ನು ಮುಚ್ಚಬೇಕು ಅಥವಾ ತಪ್ಪಾಗಬೇಕೆಂದು ಹೇಳುವುದನ್ನು ನಾನಲ್ಲ. ಏಕೆಂದರೆ ಇದು ಸಾಮಾನ್ಯ ಜನರಿಗೆ ಕೊಡುವಂತಹ ಒಂದು ಸಹಾಯ. ಅದು ಪ್ರಾಮಾಣಿಕವಾಗಿ ಜನರಿಗೆ ಮುಟ್ಟಬೇಕು ಇಂದು ಸಹಕಾರ ಸಂಘಗಳೆಲ್ಲಾ ಸತ್ಯ ಹರಿಶ್ಚಂದ್ರನ ಹಾಗೆ ಇವೆ ಬೇರೆಯವರಿಂದ ಮಾತ್ರ ತಪ್ಪಾಗುತ್ತಾದೆಂದು ಹೇಳುವುದಕ್ಕಾಗುವುದಿಲ್ಲ. ಇದನ್ನು ನಾವು ಪಕ್ಷಾತೀತವಾಗಿ ನೋಡಬೇಕು. ತಪ್ಪನ್ನು ಯಾರೇ ಮಾಡಲೀ ಅದನ್ನು ದಂಡಿಸಬೇಕಾಗುತ್ತದೆ. ನ್ಯಾಯವಾಗಿ ರಕ್ಷಿಸಬೇಕಾದಂತಹವರನ್ನು ರಕ್ಷಿಸಬೇಕಾಗುತ್ತದೆ. ಉದಾಹರಣೆಗೆ ಹೇಳುವುದಾದರೆ ನಾನು ಜಿಲ್ಲಾ ಪರಿಷತ್ತಿನ ಎರಡು ಸಭೆಗೆ ಹೊಗಿದ್ದೆ. ಅಲ್ಲಿ ಒಂದು ಆಹಾರ ಉಪ ಸಮಿತಿ ಇತ್ತು ಆ ಸಮಿತಿಯವರು ಹೋಗಿ ನೋಡಿಕೊಂಡು ಬಂದು ತಪ್ಪನ್ನು ಕಂಡು ಹಿಡಿದು ಶಿಕ್ಷೆ ವಿಧಿಸಬೇಕೆಂದು ಹೇಳಿದ್ದರೂ ಕೂಡ ಜಿಲ್ಲಾ ಪರಿಷತ್ತಿನಲ್ಲಿ ಕೇವಲ ಪಕ್ಷ ಎಂಬ ಒಂದೇ ಕಾರಣದಿಂದ ಅವರಿಗೆ ರಕ್ಷಣೆ ಕೊಡುವ ಕೆಲಸ ಮಾಡಿ, ಮತ್ತೆ ಅವರನ್ನು ಮುಂದುವರಿಸುವ ಪ್ರವೃತ್ತಿ ಪ್ರಾರಂಭವಾಯಿತು. ಇದನ್ನು ನೋಡಿ ನನಗೆ ಹೇಸಿಗೆಯಾಯಿತು. ಜಿಲ್ಲಾಪರಿಷತ್ತಿನ ಉಪ ಸಮಿತಿಯವರೇ ಸೇರಿ ಮಾಡಿದಂತಹ ಅಂದರೆ ಅವರು ತಪ್ಪು ಮಾಡುತ್ತಿದ್ದಾರೆಂದು ಕಂಡು ಹಿಡಿದು ಇಂತಹ ನ್ಯಾಯ ಬೆಲೆ ಅಂಗಡಿಯವರು ಎಂದು ಕಂಡುಹಿಡಿದು

ವರದಿ ಕೊಟ್ಟರೂ ಕೂಡ ಜಿಲ್ಲಾ ಪರಿಷತ್ತಿನಲ್ಲಿ ಹೀಗೆ ಮಾಡಿದರೆ ಅದು ಸರಿಯಾಗುವುದಿಲ್ಲ. ಒಂದು ದಿವಸ ವಿರೋಧ ಪಕ್ಷದ ನಾಯಕರೂ ಕೂಡ ಅಲ್ಲಿ ಇದ್ದರು. ಇದು ಒಂದು ಸಣ್ಣ ವಿಚಾರ ಇದರಲ್ಲಿ ನಮ್ಮಂತಹವರು ಕೈ ಹಾಕಬಾರದು ಎಂದು ನಾನು ಆವತ್ತೇ ಕೊನೆ ಆ ಸಭೆಗೆ ಹೋಗುವುದನ್ನು ಕೈ ಬಿಟ್ಟೆ. ಆ ಸಮಿತಿಯವರು ಕೊಟ್ಟ ವರದಿಯನ್ನು ಸರಿಯಾಗಿ ವಿಚಾರ ಮಾಡಬೇಕಿತ್ತು ಅದನ್ನು ಬಿಟ್ಟು ಪೊಲಿಟಿಕಲ್ ಕನ್‌ಸಿಡರೇಷನಿಂದ ಅದು ಮತ್ತೇ ನಡೆಯುತ್ತಿದೆ. ಈ ರೀತಿ ನಡೆಯುಬಾರದು ಆಹಾರ ವಿತರಣೆ ಮಾಡತಕ್ಕಂಥಹ ಕೆಲಸವನ್ನು ಪಕ್ಷಾತೀತವಾಗಿ ನೋಡುವುದಕ್ಕೆ ಬದಲಾಗಿ ತಮಗೆ ಸಿಕಂತಹ ಅಧಿಕಾರವನ್ನು ಸಮರ್ಥನೀಯವಾಗಿ ಚಲಾಯಿಸತಕ್ಕಂಥಾದ್ದರ ಬಗ್ಗೆ ಹೆಚ್ಚು ಆಸಕ್ತಿ ವಹಿಸುತ್ತಿದ್ದಾರೆ. ಇದನ್ನು ಯಾರೂ ಕೂಡ ಮಾಡಬಾರದು. ಯಾರು ತಪ್ಪು ಮಾಡುತ್ತಾರೆಂದು ಅವರಿಗೆ ರಕ್ಷಣೆ ಕೊಡುವುದಕ್ಕೆ ಹಿಂದಿನವರು ಮುಂದಾದರು ಎನ್ನುವ ಒಂದೇ ಕಾರಣಕ್ಕಾಗಿ ಇವತ್ತು ನಮ್ಮ ಸರಕಾರ ಮಾಡಿದಂತಹ ಕ್ರಮವನ್ನು ಸ್ವಾಗತ ಮಾಡತಕ್ಕಂಥ ಒಂದು ಸನ್ನಿವೇಶಕ್ಕೆ ಬಂದಿದ್ದೇವೆ. ನಾನು ಈಗಲೂ ನಮ್ಮ ಸರಕಾರಕ್ಕೆ ಹೇಳುತ್ತೇನೆ. ಇದನ್ನು ವಾಪಸ್ಸು ತೆಗೆದುಕೊಂಡು ಕೂಡಲೇ ನಮಗೇನೂ ಹೆಸರು ಬರುವುದಿಲ್ಲ, ಇರುವಂತಹ ಒಂದು ವ್ಯವಸ್ಥೆಯನ್ನು ತೆಗೆದು ನಾನೇ ಜವಾಬ್ದಾರಿಯನ್ನು ತೆಗೆದುಕೊಳ್ಳುತ್ತೇವೆಂದರೆ ನಿಜವಾಗಿಯೂ ನಾವು ಅದನ್ನು ಮಾಡಿ ತೋರಿಸಬೇಕಾಗುತ್ತದೆ. ಆ ಕಾಲ ಬಂದಿದೆ. ಮಾನ್ಯ ಏಕಾಂತಯ್ಯನವರು ಕಾನೂನಿನಲ್ಲಿ ಏನೋ ತೋರಿಸಿ ಹೇಳಿದರು. ಅದರಲ್ಲಿ ಏನೋ ಮಾಡಿ ಇಟ್ಟಿರುವ ಕಾರಣಕ್ಕಾಗಿ ಆ ಕಾನೂನಿಗೆ ಸಂಬಂಧಪಟ್ಟಂತೆ ಅದನ್ನು ಇವತ್ತು ವಾಪಸ್ಸು ತೆಗೆದುಕೊಳ್ಳುವುದಕ್ಕೆ ಸುಲಭವಾಯಿತು. ಅದನ್ನು ತೆಗದುಕೊಂಡ ಮೇಲೆ ಅಷ್ಟೇ ಪ್ರಾಮಾಣಿಕವಾಗಿ ಅದನ್ನು ಮಾಡಿಕೊಡುವಂತಹ ಪ್ರಾಮಾಣಿಕ ಕೆಲಸವನ್ನು ನಾವು ಮಾಡಿದರೆ ನಮಗೆ ಒಳ್ಳೆಯದಾಗುತ್ತದೆ. ಇಲ್ಲದಿದ್ದರೆ ನಾವು ಕೂಡ ಅದೇ ರೀತಿಯ ತಪ್ಪಿಗೆ ಭಾಗಿಯಾಗುತ್ತೇವೆ. ಆದುದರಿಂದ ನಾವೆಲ್ಲರೂ ಎಚ್ಚರವಾಗತಕ್ಕಂತಹ ಸನ್ನಿವೇಶ ಹಾಗೂ ಸಂದರ್ಭ ಬಂದಿದೆ. ನೀವು ಹೇಳಿರತಕ್ಕಂತಹ ಮಾತನ್ನು ನಾನು ಒಪ್ಪುತ್ತೇನೆ. ನಾನು ಇವತ್ತು ನಮ್ಮ ಸರಕಾರಕ್ಕೆ ಎಚ್ಚರಿಕೆ ಕೊಡುತ್ತೇನೆ. ಇವತ್ತು ನಾವು ಇದನ್ನು ಪಕ್ಷಾತೀತವಾಗಿ ನೋಡಬೇಕಾಗುತ್ತದೆ. ಯಾರೂ ತಪ್ಪು ಮಾಡಿದರೂ ಕೂಡ ದಂಡಿಸಬೇಕಾಗುತ್ತದೆ. ಏಕೆಂದರೆ ನಾವು ಯಾರಿಗೆ ಹಸಿರು ಕಾರ್ಡ್ ಕೊಟ್ಟಿದ್ದೇವೆಂದರೆ ಬಡವರಿಗೆ ಕೊಟ್ಟಿದ್ದೇವೆ. ಅವರಿಗೆ ಅಕ್ಕಿ, ಎಣ್ಣೆ ಹೋಗುತ್ತದೆ. ಆದರೆ ಆ ಬಡವನ ಬಾಯಿಯ ಮೇಲೆ ಹೊಡೆದು ಜೀವನ ಮಾಡತಕ್ಕಂಥಹ ಪ್ರಯತ್ನಕ್ಕೆ ಏನಾದರೂ ಕೈ ಹಾಕಿದರೆ ಅದಕ್ಕಿಂತ ದ್ರೋಹದ ಕೆಲಸ ಮತ್ತೊಂದಿಲ್ಲ. ಈ ದಿಶೆಯಲ್ಲಿ ನಾನು ಆ ಪಾರ್ಟಿ ಈ ಪಾರ್ಟಿ ಎಂದು ಹೇಳುವುದಿಲ್ಲ, ಇಂತಹ ವಿಚಾರದಲ್ಲಿ ನಾವು ನೀವು ನಿರ್ದಾಕ್ಷಿಣ್ಯವಾಗಿ ಮತ್ತು ನಿಷ್ಪಕ್ಷಪಾತವಾಗಿ ಇರಬೇಕಾಗುತ್ತದೆ. ಸರ್ಕಾರ ಇಂತಹ ಒಂದು ಕಾನೂನು ಜಾರಿಗೆ ತಂದರೆ ಅದು ತಪ್ಪಲ್ಲ.

ಶ್ರೀ ಹೆಚ್. ಏಕಾಂತಯ್ಯ: ಮಾನ್ಯ ಉಪಾಧ್ಯಕ್ಷಿಣಿಯವರೆ, ಮಾನ್ಯ ಕಾಗೋಡು ತಿಮ್ಮಪ್ಪನವರು ಏನು ಹೇಳುತ್ತಿದ್ದಾರೆಂದರೆ, ಈ ವ್ಯವಸ್ಥೆಯಲ್ಲಿ ಲೋಪದೋಷಗಳು ಇದ್ದರೆ ಮಾತ್ರ ಆ ಲೋಪದೋಷಗಳನ್ನು ಸರಿಪಡಿಸುವುದಕ್ಕೆ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಹೇಳುತ್ತಿದ್ದಾರೆ.

ಉಪಾಧ್ಯಕ್ಷರು: ಮಾನ್ಯ ಸದಸ್ಯರು ಈಲ್ಡ್ ಆಗಿಲ್ಲ, ಅವರು ಈಲ್ಡ್ ಆದರೆ ಮಾತ್ರ ತಾವು ಮಾತನಾಡಿ.

ಶ್ರೀ ಹೆಚ್. ಏಕಾಂತಯ್ಯ: ಮಾನ್ಯ ಕಾಗೋಡು ತಿಮ್ಮಪ್ಪನವರು ಒಂದು ನಿಮಿಷ ಈಲ್ಡ್ ಆದರೆ ಹೇಳುತ್ತೇನೆ. ಈ ಲೋಪದೋಷಗಳು ಏನಿವೆ, ಅವು ಕೇವಲ ಶಿವಮೊಗ್ಗ ಜಿಲ್ಲೆಗೆ ಸೀಮಿತವಾಗಿಲ್ಲ. ಕರ್ನಾಟಕ ರಾಜ್ಯದ ಎಲ್ಲ ಜಿಲ್ಲೆಗಳಲ್ಲಿಯೂ ಇದೆ. ಆದ್ದರಿಂದ ನಾನು ತಮ್ಮನ್ನು ಕೇಳುವುದು ಇದೇ ಕಾರಣದಿಂದ ಈ ಅಧಿಕಾರವನ್ನು ತಾವು ತೆಗೆದುಕೊಳ್ಳುವುದು ಸರಿಯಾಗುವುದಿಲ್ಲ, ಅದಕ್ಕೆ ಬದಲಾಗಿ ಯಾರು ತಪ್ಪಿತಸ್ಥರು ಇದ್ದಾರೆ. ಅವರ ಮೇಲೆ ಕ್ರಮ ತೆಗೆದುಕೊಂಡು ಅವರಿಗೆ ಶಿಕ್ಷೆ ಮಾಡುವಂತಹ ಪ್ರವೃತ್ತಿಯನ್ನು ನಾವು ನೀವು ಬೆಳೆಸಿಕೊಂಡಾಗ ಮಾತ್ರ ಅದು ಸರಿಯಾಗುತ್ತದೆಯೇ ಹೊರತು ಕೇವಲ ನೀವೇ ಅಧಿಕಾರ ಇಟ್ಟುಕೊಂಡರೆ ಸರಿಯಾಗುತ್ತದೆಯೇ?

ಶ್ರೀ ಕಾಗೋಡು ತಿಮ್ಮಪ್ಪ: ನಾನು ಆ ಜಿಲ್ಲೆ ಈ ಜಿಲ್ಲೆಯೆಂದು ಹೇಳುವುದಿಲ್ಲ. ನಮ್ಮ ಜಿಲ್ಲೆಯ ಪ್ರತ್ಯಕ್ಷ ಉದಾಹರಣೆಯನ್ನು ನಾನು ನೋಡಿದ್ದರಿಂದ ಅದರ ಬಗ್ಗೆ ಪ್ರಸ್ತಾಪ ಮಾಡಿದ್ದೇನೆ. ಇದು ನಡೆಯುತ್ತಿದೆ. ಒಟ್ಟಾರೆ ರಾಜ್ಯದ ಪರಿಸ್ಥಿತಿಯನ್ನು ನಾವು ಗಮನಿಸಿದರೆ, ಸಾಕಷ್ಟು ಪ್ರಾಮಾಣಿಕವಾಗಿ ಇದು ನಡೆಯುತ್ತಿಲ್ಲ, ಲೋಪದೋಷಗಳು ಇವೆ. ಅದರಿಂದ ಅದನ್ನು ಸರಿಪಡಿಸಬೇಕೆಂದು ಒತ್ತಾಯ ಮಾಡಿದ್ದೇವೆ. ನೀವು ಕೂಡ ಒತ್ತಾಯ ಮಾಡಿದ್ದೀರಿ. ನಾನು ಈಗಲೂ ಹೇಳುತ್ತೇನೆ ಸರ್ಕಾರ ವಾಪಸ್ಸು ಈ ಒಂದು ಅಧಿಕಾರ ಪಡೆದ ಮೇಲೆ ಮತ್ತು ಜವಾಬ್ದಾರಿಯನ್ನು ಹೊತ್ತಮೇಲೆ ಹಿಂದೆ ಇದ್ದ ಸ್ಥಿತಿಗಿಂತ ಉತ್ತಮವಾಗಿ ಕೆಲಸ ಮಾಡಬೇಕೆನ್ನುವುದು ನನ್ನ ಸಲಹೆ. ಸರ್ಕಾರ ಈ ದಿಸೆಯಲ್ಲಿ ತಪ್ಪು ಮಾಡಿದರೆ ಅದನ್ನು ಟೀಕೆ ಮಾಡುವಂತಹ ಜವಾಬ್ದಾರಿ ನಮ್ಮ ಮೇಲೆ ಮತ್ತು ನಿಮ್ಮ ಮೇಲೆ ಇದೆ. ಬಡವರಿಗೆ ಸಹಾಯ ಮಾಡುವ ಕೆಲಸದಲ್ಲಿ ನಾವು ನೀವು ಯಾವಾಗಲೂ ಹಿಂದೆ ಬೀಳಬಾರದು. ಇಷ್ಟು ಮಾತ್ರ ಹೇಳುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ: ಸರ್ಕಾರ ಡೀಸಲ್ ಹಂಚುತ್ತಿದೆಯಲ್ಲ ಅದಕ್ಕೆ ಏನು ಹೇಳುತ್ತೀರಿ?

ಶ್ರೀ ಕಾಗೋಡು ತಿಮ್ಮಪ್ಪ: ಅದು ನಮ್ಮ ಕೈಯಲ್ಲಿ ಇದೆಯೇ?

ಶ್ರೀ ಪಿ.ಜಿ.ಆರ್. ಸಿಂಧ್ಯ: ಹಂಚುವುದು

ಶ್ರೀ ಕಾಗೋಡು ತಿಮ್ಮಪ್ಪ: ನಾನು ವಿಚಾರ ಮಾಡಿದೆ. ವಿರೋಧಪಕ್ಷದ ನಾಯಕರು ಜಿಲ್ಲಾಮಟ್ಟದಲ್ಲಿ ಜಿಲ್ಲಾಧ್ಯಕ್ಷರ ಅಧಿಕಾರವನ್ನು ಕಿತ್ತರು ಎಂದು ಹೇಳಿದರು. ಜಿಲ್ಲಾಪರಿಷತ್‌ನ ಅಧ್ಯಕ್ಷರು ಎಕ್ಸಿಕ್ಯೂಟಿವ್ ಹೆಡ್ ಎಂದು ಹಿಂದಿನ ಶಾಸನದಲ್ಲಿ ಅಧಿಕಾರವನ್ನು ಕೊಟ್ಟಿದ್ದರೆಂದು ಹೇಳಿದರು. ಹಾಗೆ ಕೊಡುವಂತಹ ಕಾಲದಲ್ಲಿ ಏನು ಶಾಸನ ಮಾಡಿದ್ದರು ಅಂದರೆ ಮುಂದೆ ಅವರ ಕೆಲಸ ಏನೆಂದು ಹೇಳಲಿಲ್ಲ, ಅಧ್ಯಕ್ಷರನ್ನು ಆ ಹೆಸರಿನಲ್ಲಿ ಈ ಕಾನೂನಿನಲ್ಲಿ ಕರೆದಿದ್ದಾರೆ. ಅದನ್ನು ತಿದ್ದುಪಡಿ ಮಾಡುವಂತಹ ಕಾಲದಲ್ಲಿ ಅಧ್ಯಕ್ಷರ ಕಾರ್ಯಗಳೇನು ಎನ್ನುವುದನ್ನು ಈಗ ಉಲ್ಲೇಖ ಮಾಡಿದ್ದಾರೆ. ಆದರೆ ವಿಶೇಷವಾಗಿ ಅದರ ಮೇಲೆ ದೊಡ್ಡ ವ್ಯಾಖ್ಯಾನ ನಡೆಯುತ್ತಿದೆ. ಅಧಿಕಾರವನ್ನು ಹೆಚ್ಚು ಕಡಿಮೆ ರೆಡ್ಯೂಸ್ ಮಾಡಿ ನಾಮಿನಲ್ ಹೆಡ್ ಆಫ್ ಇನ್ನಿಟಿಟ್ರೇಷನ್ ಎಂದು ಮಾಡಿದ್ದಾರೆ. ಅವರ ಅಧಿಕಾರವನ್ನು ಹೆಚ್ಚು ಕಡಿಮೆ ಮೊಟಕುಗೊಳಿಸಿ ಕೈ ಬಾಲ, ಕಣ್ಣು ಎಲ್ಲ ಕತ್ತರಿಸಿ he is only a symbolic head and he can preside over the meetings. ಅದನ್ನು ಬಿಟ್ಟರೆ ಬೇರೇನೂ ಇಲ್ಲ; ಆದ್ದರಿಂದ ಇದು

ಪ್ರಜಾಪ್ರಭುತ್ವಕ್ಕೆ ವಿರೋಧವಾದುದು ಯಾವ ಒಂದು ಸಿದ್ಧಾಂತದ ಅಧಾರದ ಮೇಲೆ ಈವೊಂದು ಪಂಚಾಯಿತಿ ವ್ಯವಸ್ಥೆಯ ಕಾನೂನು ಬಂದಿದೆ. ಅದಕ್ಕೆ ಇದು ವಿರೋಧವಾಗಿದೆ ಎನ್ನುವಂತಹ ರೀತಿಯಲ್ಲಿ ಅಪಾರವಾದ ಟೀಕೆ ಮತ್ತು ಅನೇಕ ತರಹದ ವ್ಯಾಖ್ಯಾನವನ್ನು ಮಾಡಿದ್ದಾರೆ. ಆದರೆ ಇದರಲ್ಲಿ ಜಿಲ್ಲಾಪರಿಷತ್ತಿಗೆ ಇದ್ದ ಯಾವುದೇ ಅಧಿಕಾರವನ್ನು ವಾಪಸ್ಸು ಪಡೆದಿಲ್ಲ, ಒಂದನ್ನು ಪಡೆದಿದ್ದಾರೆ. ಅದೇನೆಂದರೆ ಜಿಲ್ಲಾಪರಿಷತ್ತ್‌ನಿಂದ ಪ್ರೌಢಶಿಕ್ಷಣವನ್ನು ಮತ್ತು ಪಶುಸಂಗೋಪನೆಯನ್ನು ವಾಪಸ್ಸು ತೆಗೆದುಕೊಂಡಿದ್ದಾರೆ. ಇವೆರಡನ್ನು ಬಿಟ್ಟರೆ ಬೇರೆ ಯಾವುದನ್ನು ವಾಪಸ್ಸು ಪಡೆದಿಲ್ಲ. ಮಾನ್ಯ ಬಸವಲಿಂಗಪ್ಪನವರು ಪಶುಸಂಗೋಪನೆಯ ಖಾತೆಯ ಸಚಿವರಾಗಿದ್ದಾರೆ. ಅದರ ಬಗ್ಗೆ ಅವರಿಗ ತುಂಬಾ ವ್ಯಾಮೋಹವಿದೆ. ಪಶುಸಂಗೋಪನೆಯನ್ನು ನಾನೇ ಇಟ್ಟುಕೊಂಡರೆ ರಾಜ್ಯದಲ್ಲಿ ತುಂಬಾ ಚೆನ್ನಾಗಿ ಕೆಲಸ ಮಾಡಬಹುದೆನ್ನುವ ಆಸೆ ಅವರಿಗೆ ಬಂದಿದೆ. ಅವರ ಖಾತೆಗೆ ಆ ಅಧಿಕಾರ ತೆಗೆದುಕೊಂಡಿದ್ದಾರೆಯೇ ವಿನಹ ಅದನ್ನು ಬಿಟ್ಟರೆ ಇನ್ನಾವ ಅಧಿಕಾರವನ್ನು ಈ ತಿದ್ದುಪಡಿಯಲ್ಲಿ ವಾಪಸ್ಸು ತೆಗೆದುಕೊಂಡಿದ್ದಾರೆ ಸ್ವಾಮಿ? ಕೃಷಿ ಕ್ಷೇತ್ರವನ್ನು ಸಹ ಮುಟ್ಟಿಲ್ಲ, ಶಿಕ್ಷಣ ಕ್ಷೇತ್ರವನ್ನು ಮುಟ್ಟುವುದಕ್ಕೆ ಹೋಗಿಲ್ಲ, ಕೈಗಾರಿಕಾ ಕ್ಷೇತ್ರವನ್ನು ಮುಟ್ಟುವುದಕ್ಕೆ ಹೋಗಿಲ್ಲ.

ಶ್ರೀ ಬಿ. ಬಸವಲಿಂಗಪ್ಪ: ಮಾನ್ಯ ಉಪಾಧ್ಯಕ್ಷಿಣಿಯವರೆ, ಮಾನ್ಯ ಕಾಗೋಡು ತಿಮ್ಮಪ್ಪನವರು ಬಹಳ ಚೆನ್ನಾಗಿ ಮಾತನಾಡುತ್ತಾರೆ. ಈಗ ಹೊಸ ತಿದ್ದುಪಡಿ ಮಸೂದೆ ಇದೆ. ಇನ್ನೊಂದು ಹಳೆಯ ಕಾನೂನು ಇದೆ. ಅದರಲ್ಲಿ ಏನಿತ್ತು ಅದನ್ನು ತೆಗೆದಿದ್ದೇವೆ ಎನ್ನುವ ವಿಚಾರ. ಆದರೆ ಮೊದಲು ಯಾವ್ಯಾವ ವಿಷಯಗಳು ಇದ್ದವು ಅವುಗಳು ಹಾಗೆಯೇ ಇವೆ. 184ನೇ ಸೆಕ್ಷನ್ ಪ್ರಕಾರ ಸರ್ಕಾರದವರಿಗೆ ಏನಾದರೂ ಅಲ್ಲಿನ ಆಡಳಿತದಲ್ಲಿ ನ್ಯೂನತೆಗಳು ಕಂಡರೆ ಅಥವಾ ಅವರು ಸರಿಯಾಗಿ ಕಾರ್ಯಚರಣೆ ಮಾಡುವುದಿಲ್ಲ, ಕೆಲಸ ಮಾಡುವುದಿಲ್ಲ ಎಂದು ಹಲವಾರು ದೂರುಗಳು ಬಂದಾಗ ಅಂಥ ಕೆಲವು ಕೆಲಸಗಳನ್ನು ಮಾಡಲು ಕೈಯಲ್ಲಿ ಆಗುವುದಿಲ್ಲ ಎಂದಾಗ ಯಾವ ಸಬ್ಜೆಕಟ್ಸ್ ಆಗಲಿ ಅದನ್ನು ವಿತ್‌ಡ್ರಾ ಮಾಡಬಹುದು ಎಂದು ಹಳೆಯ ಕಾಯಿದೆಯಲ್ಲೇ ಇದೆ. ನಾವೇನೂ ಇದನ್ನು ತಿದ್ದುಪಡಿ ಮಾಡುವುದಕ್ಕೆ ಹೋಗಿಲ್ಲ. ಕೆಲವು ವಿಷಯಗಳ ಬಗ್ಗೆ ಮಾತ್ರ ಇಲ್ಲಿ ಬದಲಾವಣೆ ಮಾಡಿದ್ದೇವೆ. ಒಂದು ಉದಾಹರಣೆಯನ್ನು ಹೇಳುವುದಾದರೆ ಎಜ್ಯುಕೇಶನ್ ಡಿಪಾರ್ಟ್‌ಮೆಂಟ್‌ನಲ್ಲಿ ಈಗ ನಾವೇ ವರ್ಗಾವಣೆ ಮಾಡಬೇಕು ಮತ್ತೆ ಬೇರೆ ಯಾರಿಗೂ ಅಧಿಕಾರ ಇಲ್ಲ, ಈಗ ಡಿ.ಡಿ.ಪಿ.ಐ. ಅವರನ್ನು ನಾವೇ ವರ್ಗಾವಣೆ ಮಾಡಬೇಕು. ಇದಕ್ಕೂ ಮೊದಲು ಸರ್ಕಾರ ಏನೇ ಹೇಳಲಿ ಅದಕ್ಕೆ ಕಿವಿ ಕೊಡದ ಹಾಗೆ ಅವರು ತಮ್ಮ ಪ್ರಯತ್ನ ಮಾಡುತ್ತಿದ್ದರು. ಕೆಲವು ಸಂದರ್ಭದಲ್ಲಿ ನಾವು ಮಾಡಬಾರದು ಎಂದು ಹೇಳಿದರೂ ಕೂಡ ಅವರು ಮಾಡಲೇ ಬೇಕು ಎಂದು ಹಠ ಮಾಡುತ್ತಾರೆ. ಅಂದರೆ ಸರ್ಕಾರದ ದೃಷ್ಟಿಯಿಂದ ಯಾವ ಕೆಲಸಕಾರ್ಯಗಳು ಸಾಕಷ್ಟು ಅರ್ಥಗರ್ಭಿತವಾಗಿ ಆಗುವುದಿಲ್ಲವೆಂದಾಗ ನಾವು ಅದನ್ನು ಅವರಿಂದ ವಾಪಸ್ಸು ತೆಗೆದುಕೊಳ್ಳಬೇಕಾಗುತ್ತದೆ. ಆದ್ದರಿಂದ ಇದು ನಿಮ್ಮ ಕಾಯದೆ. ನಾವು ಇದನ್ನು ಬದಲಾವಣೆ ಮಾಡುವುದಕ್ಕೆ ಹೋಗಿಲ್ಲ, ಆದ್ದರಿಂದ ಶ್ರೀಮಾನ್ ತಿಮ್ಮಪ್ಪನವರು ಈ ಬಗ್ಗೆ ಜಾಸ್ತಿ ಸಮಯ ತೆಗೆದುಕೊಳ್ಳುವುದು ಅನಾವಶ್ಯಕ.

ಶ್ರೀ ಡಿ.ಬಿ. ಚಂದ್ರೇಗೌಡ: 64ನೇ ತಿದ್ದುಪಡಿಯಲ್ಲಿ 11ನೇ ಶೆಡ್ಯೂಲ್‌ನಲ್ಲಿ ಪಟ್ಟಿ ಮಾಡಿದೆಯಲ್ಲ, ಇದರಲ್ಲಿ ಶಿಕ್ಷಣ ಏನೂಂತ ಹೇಳಿದ್ದಾರೆ.

ಶ್ರೀ ಬಿ. ಬಸವಲಿಂಗಪ್ಪ: ಮಾನ್ಯ ವಿರೋಧಪಕ್ಷದ ನಾಯಕರೇ, ತಾವು ಇದರ ಬಗ್ಗೆ ಸಾಕಷ್ಟು ಹೇಳಿದ್ದೀರಿ. ನಾನು ಪುನರುಚ್ಚಾರ ಮಾಡುವುದಕ್ಕೆ ಹೋಗುವುದಿಲ್ಲ. ನೀವು ಒಪ್ಪಿಗೆ ಕೊಟ್ಟಿದ್ದರೆ ಆ ಲಿಸ್ಟ್ ಜಾರಿಗೆ ಬರುತ್ತಿತ್ತು. ನೀವು ರಾಜ್ಯ ಸಭೆಯಲ್ಲಿ ಕೆಡವಿದಿರಿ; ನಾವು ಆ ಲಿಸ್ಟ್ ಕಡೆಗೆ ಈಗ ನೋಡುವುದಿಲ್ಲ. Until that constitution bill is passed, I don't look at that list.

ಶ್ರೀ ಆರ್.ಎನ್. ನಾಯಕ್: ವಿರೋಧ ಪಕ್ಷದ ನಾಯಕರು 64ನೇ ತಿದ್ದುಪಡಿ ಎಂದು ಹೇಳುತ್ತಾರಲ್ಲ. ಅದನ್ನು ಅವರು ಪಾಸ್ ಮಾಡಿ ಇಲ್ಲಿ ಮಾತನಾಡಿದ್ದರೆ ಅದಕ್ಕೆ ಗೌರವ ಬರುತ್ತಿತ್ತು. ಸಾಕಷ್ಟು ವಿರೋಧ ಮಾಡಿ ಅದನ್ನು ಬೀಳಿಸಿ ಹಾಕಿ ಏನು ಮಾಡಬೇಕೋ ಅದನ್ನು ಮಾಡಿದ್ದೀರಿ. ನೀವು ಒಳ್ಳೆಯದಕ್ಕೆ ಪುರಸ್ಕಾರ ಕೊಡುವವರಲ್ಲ. ಇಂತಹ ಒಳ್ಳೆಯ ಕೆಲಸಕ್ಕೆ ಕೊಟ್ಟು ಸಹಕಾರ ಕೊಟ್ಟಿದ್ದರೆ ಇವತ್ತು ಇದನ್ನು ನೀವು ಕೇಳಬಹುದಿತ್ತು. ಈಗ 64ರ ಬಗ್ಗೆ ಹೇಳುವುದಕ್ಕೆ ನಿಮಗೆ ಹಕ್ಕಿಲ್ಲ ನೀವು ಬರೇ 65 ಮಾತ್ರ ಓದಬೇಕು.

ಶ್ರೀ ಡಿ.ಬಿ. ಚಂದ್ರೇಗೌಡ: ಅದಕ್ಕೇ ನಾನು ಹೇಳಿದ್ದು; ಇವರು ಹುಟ್ಟಿನಿಂದ ಸಾಯುವವರೆಗೂ ನಾಯಕರು ಅಂತ. ನಾನು ನಾಯಕನಾಗಿ ಮಧ್ಯೆ ಬಂದವನು. ಆದ್ದರಿಂದ ಇವರು ಏನು ಬೇಕಾದರೂ ಮಾತನಾಡಬಹುದು ಎನ್ನುವ ತೀರ್ಮಾನಕ್ಕೆ ಬಂದಿದ್ದಾರೆ. ಆದರೆ ಹಾಗೆ ಮಾತನಾಡುವುದಕ್ಕೆ ಆಗುವುದಿಲ್ಲ. 64ನೇ ತಿದ್ದುಪಡಿಬಗ್ಗೆ ಹೇಳಿದರು. 4ನೇ ಮೂರರಷ್ಟು ಶಕ್ತಿ ಇದಂಥ ಲೋಕಸಭೆಯಲ್ಲಿ ಪಾಸ್ ಮಾಡಿದ್ದು ಅದು. ನಿಮ್ಮ ಮಸೂದೆ ಅದರ ವಿರುದ್ಧ ಏಕೆ ಹೋಗುತ್ತಿದೆ? ಇದರ ಬಗ್ಗೆ ಬುದ್ಧಿ ಹೇಳಿದ್ದೀವಿ ಅಷ್ಟೆ ನಾವು ಬೀಳಿಸಿದ್ದೇ ಇದು? ಅದು ಸರಿ ತಪ್ಪು ಎಂದು ಹೇಳುವುದಕ್ಕೆ ನಾನು ಹೋಗುವುದಿಲ್ಲ. 64ನೇ ಕಾಂಗ್ರೆಸ್ ಪಕ್ಷ ತಿದ್ದುಪಡಿಯನ್ನು ತನ್ನ ಸ್ವಂತ ಆಸ್ತಿಯೆಂದು ಹೇಳಿ ಪಾರ್ಲಿಮೆಂಟ್‌ನಲ್ಲಿ ಪಾಸ್‌ಮಾಡಿದ್ದರಿಂದ ರಾಜ್ಯಸಭೆಯಲ್ಲಿ ಅದು ಬಿದ್ದುಹೋಯಿತು ಎನ್ನುವ ಕಾರಣಕ್ಕಾಗಿ ಈಗ ನೋಡುವುದಿಲ್ಲ ಎಂದು ಮಂತ್ರಿಗಳು ಹೇಳುತ್ತಾರೆ. ಇದು ಏನು ನಿಯಮ?

ಶ್ರೀ ಆರ್.ಎನ್. ನಾಯಕ್: ಅಲ್ಲಿ ನಿಮ್ಮ ಪಕ್ಷದವರು ಬೀಳಿಸಿದ್ದಾರೆ. ನೀವು ಪಾಸ್ ಮಾಡಿದ್ದರೆ ನಿಮಗೆ ಮಾತನಾಡುವುದಕ್ಕೆ ಧೈರ್ಯ, ಹಕ್ಕು ಬರುತ್ತಿತ್ತು. ಸುಮ್ಮನೆ ಏಕೆ ಮಾತನಾಡುತ್ತೀರಿ?

(ಶ್ರೀಮತಿ ದಮಯಂತಿ ಬೋರೇಗೌಡ ಅವರು ಅಧ್ಯಕ್ಷ ಪೀಠದಲ್ಲಿ ಉಪಸ್ಥಿತರಾದರು)

ಶ್ರೀ ಕಾಗೋಡು ತಿಮ್ಮಪ್ಪ; ಈ ಪಶುಸಂಗೋಪನೆ ಇಲಾಖೆ ವಿಚಾರದಲ್ಲಿ ಕೂಡ ಹೇಳಿದೆ. ಇದು ಒಳ್ಳೆಯ ಬದಲಾವಣೆ. ಇಲ್ಲಿ ಸಹ ಪೂರ್ಣವಾಗಿ ಅಧಿಕಾರವನ್ನು ವಾಪಸ್ಸು ಪಡೆದಿಲ್ಲ. ಏಕೆಂದರೆ ಮೊದಲು Establisment and maintenance of Taluk and Village veterinary hospitals.ಅಂತ ಇತ್ತು ಈಗ ಏನು ಮಾಡಿದ್ದಾರೆ?

ಶ್ರೀ ಡಿ.ಬಿ. ಚಂದ್ರೇಗೌಡ: ಯಾವ ಸೆಕ್ಷನ್?

..I KAGODU THIMMAPPA: Section 182 in sub-setion (1) entry III. ಈಗ ಏನು ಮಾಡಿದ್ದಾರೆ ಎಂದರೆ propose establishment of rural veterinary dispensaries ಎಂದು. So they have not withdrawn.

SRI D.B. CHANDRE GOWDA: As an advocate I would like to ask you a simple question. Do you find difference between a proposal and executing

the powers? The powers have been withdrawn and they are authorised to propose. That is the basic difference.

ಶ್ರೀ ಕಾಗೋಡು ತಿಮ್ಮಪ್ಪ: ಏಕೆಂದರೆ ಕೆಲವು ಸಂಶಯ ಬಂತು. ಉದಾಹರಣೆಗೆ ಮಾನ್ಯ ವಿರೋಧಪಕ್ಷದ ನಾಯಕರು ಈ ಒಂದು ವಿಚಾರವನ್ನು ಆಳವಾಗಿ ನೋಡಬೇಕು. ಇಂತಹ ಸನ್ನಿವೇಶ ಏಕೆ ಬಂತು? ವಿಶೇಷವಾಗಿ ಜಿಲ್ಲಾಪರಿಷತ್ತಿಗೆ ಕೊಟ್ಟಂಥ ಒಟ್ಟಾರೆ ಅಧಿಕಾರವನ್ನು ಎಲ್ಲಿಯೂ ಕೂಡ ಕಿತ್ತುಕೊಂಡಿಲ್ಲ. ನಾನು ಮೊದಲೇ ಹೇಳಿದಹಾಗೆ ಆಹಾರ ವಿತರಣೆ ಮಾಡತಕ್ಕಂಥ ವಿಚಾರ, ಪ್ರೌಢಶಿಕ್ಷಣದ ವಿಚಾರ ಮತ್ತು ಪಶುಸಂಗೋಪನೆ ಈ ಮೂರು ವಿಷಯ ಬಿಟ್ಟರೆ ಬೇರೆ ಯಾವುದನ್ನೂ ಸಹ ಅವರಿಂದ ಕಿತ್ತುಕೊಂಡಿಲ್ಲ ಪಶುಸಂಗೋಪನಾ ವಿಚಾರದಲ್ಲಿ ನಾವು ಯಾವ ಅಧಿಕಾರವನ್ನೂ ಮೊಟಕು ಮಾಡಿಲ್ಲ. ಅವರು ಪ್ರಾರಂಭ ಮಾಡುವುದಕ್ಕೆ ಮುಂಚೆ ಸರ್ಕಾರದ ಅನುಮೋದನೆ ಪಡೆಯಬೇಕೆಂದು, ಇಷ್ಟಕ್ಕೆ ಮಾತ್ರ ಸೀಮಿತವಾಗಿದೆ. ಜಿಲ್ಲಾಪರಿಷತ್ತಿಗೆ. ಕೊಟ್ಟಂಥ ಅಧಿಕಾರವನ್ನು ಮೊಟಕು ಮಾಡುವಂಥ ಯಾವ ಕೆಲಸವನ್ನೂ ಕೂಡ ಈ ತಿದ್ದುಪಡಿ ಮಸೂದೆಯಲ್ಲಿ ಮಾಡಿಲ್ಲ; ಮಾಡುವಂಥ ಪ್ರಯತ್ನವನ್ನೂ ಕೂಡ ಮಾಡಿಲ್ಲ. ಒಂದೇ ಒಂದು ದೊಡ್ಡ ಆಪಾದನೆಯನ್ನು ನಮ್ಮ ವಿರೋಧಪಕ್ಷದವರು ಮಾಡಿದ್ದಾರೆ. ಏನೆಂದರೆ, ಅಧ್ಯಕ್ಷರಿಗೆ ಇದ್ದಂಥ ಅಧಿಕಾರವನ್ನು ಕಿತ್ತುಕೊಂಡಿದ್ದಾರೆ. ಪರ್ಯಾಯವಾಗಿ ಅಲ್ಲಿರತಕ್ಕ ಚೀಫ್ ಸೆಕ್ರೆಟರಿಯವರಿಗೆ ಆ ಒಂದು ಅಧಿಕಾರ ಕೊಟ್ಟಿದ್ದಾರೆ ಎಂದು; ಈ ಬಗ್ಗೆ ಪ್ರಬಲವಾಗಿ ಟೀಕೆ ಮಾಡಿದ್ದಾರೆ. ಇವತ್ತು ವಾಸ್ತವಿಕವಾಗಿ ಜಿಲ್ಲಾಪರಿಷತ್ ಅಧ್ಯಕ್ಷರಿಗೆ ಯಾವ ಅಧಿಕಾರವನ್ನು ಕೊಟ್ಟಿದ್ದೇವೆಂದು ಈಗಿರತಕ್ಕ ಶಾಸದಲ್ಲಿ ಎಲ್ಲಿಯೂ ಇಲ್ಲ. ಆದ್ದರಿಂದ ಇವತ್ತು ಅವರು ನಿರ್ವಹಿಸಬೇಕಾದ ಅಧಿಕಾರದ ಬಗ್ಗೆ ಇದರಲ್ಲಿ ಹೇಳಿದ್ದೇವೆ. ಏಕೆಂದರೆ, ನಮ್ಮ ದೃಷ್ಟಿಯಲ್ಲಿ ಇದು ಸರಿ ಎಂದು ಮಾಡಿದ್ದೇವೆ. ಒಂದುವೇಳೆ ಇದಕ್ಕಿಂತ ಇನ್ನೂ ಹೆಚ್ಚು ಅಧಿಕಾರವನ್ನು ಕೊಡಬೇಕೆಂದು ಅಭಿಪ್ರಾಯ ಬಂದರೆ ಕೊಡೋಣ; ನಾವು ಬೇಡ ಎಂದು ಹೇಳುವುದಕ್ಕಾಗುವುದಿಲ್ಲ. ಜಿಲ್ಲಾ ಪರಿಷತ್ತಿನ ಅಧ್ಯಕ್ಷರು ಒಬ್ಬ ಮಂತ್ರಿಗಳಾಗಿದ್ದಾರೆ, ಅಲ್ಲಿನ ಉಪಾಧ್ಯಕ್ಷರು ಉಪ ಮಂತ್ರಿಗಳಾಗಿದ್ದಾರೆಂದು ಕೆಲವರು ಹೇಳಿದರು. ಈ ಶಾಸನದಲ್ಲಿ ಈ ಸ್ಥಾನಮಾನವನ್ನು ಎಲ್ಲಿಯೂ ಕೊಟ್ಟಿಲ್ಲ. ಇದು ಯಾವ ಕಾರಣಕ್ಕಾಗಿ ಎಂದರೆ ಅವರಿಗೆ ಸಂಬಳ ಸಾರಿಗೆಗಳನ್ನು ಕೊಡತಕ್ಕ ವಿಚಾರದಲ್ಲಿ ಒಬ್ಬ ರಾಜ್ಯಸಚಿವರಿಗೆ ಸಂಬಳಸಾರಿಗೆ ಏನು ಬರುತ್ತದೆ. ಉಪ ಸಚಿವರಾದವರಿಗೆ ಸಂಬಳಸಾರಿಗೆ ಏನು ಬರುತ್ತದೆ ಅದನ್ನು ಇವರಿಗೂ ಕೋಡುವ ಕಾರಣಕ್ಕಾಗಿ ಆ ರೀತಿ ಮಾಡಿಕೊಂಡಿದ್ದಾರೆ. ಸಂಬಳಸಾರಿಗೆ ವಿಚಾರದಲ್ಲಿ ಮಾತ್ರ ಈ ರೀತಿ ಹೇಳಿದ್ದಾರೆಯೇ ವಿನಹ ಸ್ಟೇಟ್ ಮಿನಿಸ್ಟರ್ ಅಥವಾ ಡೆಪ್ಯೂಟಿ ಮಿನಿಸ್ಟರ್ ಎಂದು ಎಲ್ಲಿಯೂ ಹೇಳಿಯೇ ಇಲ್ಲ. ಈ ಶಾಸನದಲ್ಲಿ ಒಬ್ಬ ರಾಜ್ಯಸಚಿವರ ಸ್ಟೇಟಸ್ ಅಥವಾ ಡೆಪ್ಯೂಟಿ ಮಿನಿಸ್ಟರ್ ಸ್ಟೇಟಸ್ ಎಂದು ಎಲ್ಲಿಯಾದರೂ ಉಲ್ಲೇಖ ಮಾಡಿ ಹೇಳಿದ್ದರೆ ನಾವು ಅದರಂತೆ ನಡೆದುಕೊಳ್ಳಬೇಕಾಗಿತ್ತು. ಇವರಿಗೆ ಪ್ರತ್ಯೇಕ ಸಂಬಳದ ಸ್ಕೇಲ್ ಮಾಡುವ ಬದಲಾಗಿ ರಾಜ್ಯಸಚಿವರಿಗೆ ಏನು ಸಂಬಳಸಾರಿಗೆ ಇದೆ. ಅವರಿಗೆ ಮನೆ ವೈಗೆರ ಏನು ಕೊಡುತ್ತಾರೆಯೋ ಅದರಂತೆ ಇವರಿಗೆ ಕೊಡುವ ಕಾರಣಕ್ಕಾಗಿ ಆ ರೀತಿ ಹೇಳಿದ್ದಾರೆ ರಾಜ್ಯಸಚಿವರ ಮತ್ತು ಉಪ ಮಂತ್ರಿಗಳ ಸ್ಥಾನಮಾನಗಳನ್ನು ಅವರೇ ಸ್ವಯಂಪ್ರೇರಣೆ ಮುಖಾಂತರ ಡಂಗೂರ ಮಾಡಿಕೊಂಡರೇ ವಿನಹ, ಇದನ್ನು ಅವರಿಗೆ ಯಾರೂ ಕೊಟ್ಟಿಲ್ಲ, ಅದಕ್ಕೆ ಈಗ ಏನು ಹೇಳಿದ್ದಾರೆ. ಇದೇ ಸಂಬಳವನ್ನು ಒಂದು

ನಿಯಮಾವಳಿ ಪ್ರಕಾರ ಕೊಡೋಣವೆಂದು ತಂದಿದ್ದಾರೆಯೇ ವಿನಹ ಬೇರೆ ಏನೂ ಮಾಡಿಲ್ಲ, ಇವತ್ತು ರಾಜ್ಯಸಚಿವರು ಸಂಬಳವನ್ನು ಕಡಿಮೆ ಮಾಡುತ್ತಾರೆ ಅಥವಾ ಅವರ ಪ್ರಿವಿಲೇಜ್ ಕಡಿಮೆ ಮಾಡುತ್ತಾರೆ. ಆಗ ಇವರಿಗೆ ಏನು ಮಾಡಬೇಕು ಇವರಿಗೂ ಕಡಿಮೆ ಮಾಡಬೇಕಾಗುತ್ತದೆ. ಅದಕ್ಕೋಸ್ಕರ ಅದು ಸರಿಯಲ್ಲವೆಂದು ಇವರಿಗೆ ನಿರ್ದಿಷ್ಟವಾದ ಸಂಬಳಸಾರಿಗೆ ವಗೈರೆಗಳನ್ನು ಪಡೆಯುವುದಕ್ಕೆ ನಿಯಮಗಳನ್ನು ಮಾಡಿದ್ದಾರೆ. ಇದರ ಪ್ರಕಾರ ಅವರು ಪಡೆಕೊಂಡು ಹೋಗಲಿ ಎಂದು ಹೇಳಿದ್ದಾರೆ. ಕಾನೂನು ಪ್ರಕಾರ ಹೇಳದೇ ಅವರ ಸ್ಥಾನದ ಬಲದ ಆಧಾರದ ಮೇಲೆ ಸಂಬಳಸಾರಿಗೆ ಸಿಗಬೇಕೆಂದರೆ ನ್ಯಾಯವೇ? ಇದು ವ್ಯವಹಾರಿಕವಾಗಿ ಮಾಡುವಂತಾದ್ದೇ? ಅವರಿಗೆ ರಾಜ್ಯಸಚಿವರ ಸಂಬಳಕ್ಕಿಂತ ಜಾಸ್ತಿ ಕೊಡಿ ಎಂದು ಯಾರಾದರೂ ಹೇಳಿದ್ದಾರೆಯೇ? ಸಚಿವರು ಇಲ್ಲಿರುತ್ತಾರೆ. ಅವರ ಸ್ಥಾನಮಾನಗಳ ವಿಷಯ ಇಲ್ಲಿ ಶಾಸನಸಭೆಯಲ್ಲಿ ಒಂದು ತೀರ್ಮಾನವಾಗುತ್ತದೆ. ಅದರಂತೆ ಜಿಲ್ಲಾಪರಿಷತ್ತಿನ ಅಧ್ಯಕ್ಷರಿಗೆ ಉಪಾಧ್ಯಕ್ಷರಿಗೆ ಏನು ಸಂಬಳ ಕೊಡಬೇಕು ಎನ್ನುವುದನ್ನು ನಿಯಮಾವಳಿ ಪ್ರಕಾರ ತೀರ್ಮಾನ ಮಾಡಿ. ಈ ಬಗ್ಗೆ ನಿಮಗೆ ಏನಾದರೂ ಹೇಳಬೇಕೆಂದರೆ ಹೇಳಿ. ವಿರೋಧಪಕ್ಷದ ನಾಯಕರು ಈ ಬಗ್ಗೆ ಹೇಳಿದರೆ ಯಾರೂ ಅಡ್ಡಿ ಪಡಿಸುವುದಿಲ್ಲ, ಆದ್ದರಿಂದ ಅವರ ಅಧಿಕಾರವನ್ನು ಕಿತ್ತುಕೊಂಡಿದ್ದೇವೆಂದು ಹೇಳತಕ್ಕ ವಿಚಾರ ಅನೇಕ ಸಲ ಈ ಶಾಸನಸಭೆಯಲ್ಲಿ ಮೂಲಕ ಪ್ರಸ್ತಾಪಕ್ಕೆ ಪ್ರಶ್ನೆಗಳು ಬಂದಿದೆ. ಮತ್ತೆ ಉಪಾಧ್ಯಕ್ಷರು ಎಷ್ಟು ಟಿ.ಎ. ಡಿ.ಎ. ಡ್ರಾ ಮಾಡಿದರು ಎಂಬ ವಿಷಯ ಇಲ್ಲಿ ಚರ್ಚೆ ಮಾಡುವುದಕ್ಕೆ ನಾನು ಈಗ ಹೋಗುವುದಿಲ್ಲ, ಒಟ್ಟಿನಲ್ಲಿ ಒಬ್ಬ ಮಂತ್ರಿಸ್ಥಾನವನ್ನು ಈ ಶಾಸನದಲ್ಲಿ ಕೊಟ್ಟೇ ಇಲ್ಲ, ಸಂಬಳ ಕೊಡುವ ದೃಷ್ಟಿಯಿಂದ ಇಂತಹವರ ಸಂಬಳವನ್ನು ಕೊಡಬೇಕೆಂದು, ಇಷ್ಟು ಮಾತ್ರ ಹೇಳಿದ್ದಾರೆ. ಅವರಿಗೆ ಸಂಬಳ ಕೊಡುವ ವಿಚಾರದಲ್ಲಿ ನಿಯಮ ಮಾಡಿದರೆ ಅದರ ಪ್ರಕಾರ ಕೊಡುವುದಕ್ಕಾಗುತ್ತದೆ. ಈ ದೃಷ್ಟಿಯಿಂದ ಹೇಳಿದ್ದಾರೆಯೇ ವಿನಹ, ಅದರ ಮೇಲಾಗಿ ಯಾವುದನ್ನೂ ಬದಲಾವಣೆ ಮಾಡಿಲ್ಲ, ಒಂದು ನಾನು ಹೇಳುತ್ತೇನೆ. ಇವತ್ತು ಜಿಲ್ಲಾ ಪರಿಷತ್ ಅಧ್ಯಕ್ಷರಿಗೆ ಚೀಫ್ ಎಕ್ಸಿಕ್ಯುಟೀವ್ ಹೆಡ್ ಎಂದು ಹೇಳಿಬಿಟ್ಟರೆ ಅವರು ಏನು ಕೆಲಸ ನಿರ್ವಹಿಸಬೇಕು ಎಂದು ಕೇಳಿದರು; ಈ ಕಾನೂನು ಮತ್ತು ನಿಯಮಾವಳಿ ವ್ಯಾಪ್ತಿಯಲ್ಲಿ ಅವರು ತಮ್ಮ ಜವಾಬ್ದಾರಿಯನ್ನು ನಿರ್ವಹಿಸಬೇಕೆಂದು ಹೇಳಿದ್ದಾರೆ. ನಿಯಮಾವಳಿ ಮಾಡಿದ್ದಾರೆ. ಇವತ್ತು ನಿಯಮಾವಳಿ ಹೆಚ್ಚು ಪ್ರಾಮುಖ್ಯವೋ, ಕಾನೂನು ಹೆಚ್ಚು ಪ್ರಾಮುಖ್ಯವೋ? ಇವತ್ತು ಕಾನೂನಿನಲ್ಲಿ ಹೆಚ್ಚು ಅಧಿಕಾರವನ್ನು ಪ್ರಸ್ತಾಪ ಮಾಡಿದ್ದಾರೆ. ಈ ಕಾನೂನನ್ನು / ವಿರೋಧ ಮಾಡುವುದಕ್ಕೆ ಇದಕ್ಕೆ ವಿರುದ್ಧವಾಗಿ ನಡೆದುಕೊಳ್ಳುವುದಕ್ಕೆ ಯಾರೂ ಸಹ ಹೋಗುವುದಿಲ್ಲ, ಈ ಕಾನೂನಿನಲ್ಲಿ ಕೊಟ್ಟಂಥ ಅಧಿಕಾರವನ್ನು ಯಾವ ಸರಕಾರವೂ ಕಿತ್ತುಕೊಳ್ಳುವುದಕ್ಕೆ ಸಾಧ್ಯ ಇಲ್ಲ, ವಿರೋಧಪಕ್ಷದ ನಾಯಕರು ಚರ್ಚೆ ಪ್ರಾರಂಭಮಾಡತಕ್ಕ ಕಾಲದಲ್ಲಿ 1986ನೇ ಇಸವಿಯಲ್ಲಿ ಹೊರಡಿಸಿರ ತಕ್ಕಂಥ ಒಂದು ನಿಯಮಾವಳಿಯನ್ನು ನಮ್ಮ ಸಚಿವರು ಅವರಿಗೆ ತೋರಿಸಿದರು. ಅದನ್ನು ಅವರಿಗೆ ಕಳುಹಿಸಿಕೊಟ್ಟರು. ಅದನ್ನು ಅವರು ಓದಿರಬಹುದು; ಆ ನಿಯಮಾವಳಿಯನ್ನು ಸರಕಾರ ಯಾವಾಗ ಬೇಕಾದರೂ ಬದಲಾವಣೆ ಮಾಡಬಹುದು. ಅಥವಾ ನಿಯಮಾವಳಿಯನ್ನು ಮಾಡದೇ ಇರಬಹುದು. ಹಿಂದಿನ ಸರಕಾರ ಒಂದು ವೇಳೆ ನಿಯಮಮಾವಳಿಯನ್ನೇ ಮಾಡಲಿಲ್ಲ ಎಂದರೆ ಆಗ ಏನು ಮಾಡುತ್ತಿದ್ದಿರಿ. ಮಾಡಿದ ನಿಯಮಾವಳಿಯನ್ನೂ ಬದಲಾವಣೆ ಮಾಡಬಹುದು; ಆಗ ಏನು ಮಾಡುತ್ತಿದ್ದಿರಿ. ನಿಯಮಾವಳಿಯನ್ನು ವಾಪಸ್ ಪಡೆಯಬಹುದು ಆಗ ಏನು ಮಾಡುತ್ತಿದ್ದಿರಿ. ಇವತ್ತು

ಈ ಕಾನೂನಿನಲ್ಲಿ ಏನು ಅಧಿಕಾರ ವ್ಯಾಪ್ತಿಯನ್ನು ಉಲ್ಲೇಖ ಮಾಡಿದೆ, ಆ ನಿಯಮಾವಳಿಯನ್ನು ವಾಪಸ್ ಪಡೆಯುವುದಕ್ಕೆ ಸರಕಾರಕ್ಕೆ ಅಧಿಕಾರ ಇಲ್ಲ. ಏನಾದರೂ ಬದಲಾವಣೆ ಮಾಡಬೇಕೆಂದರೆ, ಅಧಿಕಾರ ಕಿತ್ತುಕೊಳ್ಳಬೇಕೆಂದರೆ ಇದೇ ಶಾಸನಸಭೆಯ ಮುಂದೆ ತಿದ್ದುಪಡಿ ತರಬೇಕಾಗುತ್ತದೆ. ಆದುದರಿಂದ ಈಗ ಕೊಟ್ಟಿರತಕ್ಕಂಥ ಅಧಿಕಾರ ಶಾಶ್ವತವಾದುದೋ ಅಥವಾ ಸರಕಾರದ ಮರ್ಜಿಯಿಂದ ಕೊಟ್ಟಿರತಕ್ಕಂಥ ಅಧಿಕಾರ ಶಾಶ್ವತವೋ ಎಂಬುದನ್ನು ಅವರೇ ಹೇಳಲಿ.

ಶ್ರೀ ಡಿ.ಬಿ. ಚಂದ್ರೇಗೌಡ: ಈಗ ಕೊಟ್ಟಿರುವ ಅಧಿಕಾರ ಶಾಶ್ವತ ಎಂಬುದನ್ನು ಒಪ್ಪುತ್ತೇನೆ. ಯಾವ ಕೆಲಸವನ್ನು ಸರಕಾರ ಮಾಡುವುದಕ್ಕೆ ಸಾಧ್ಯ ಇದೆಯೋ ಅದಕ್ಕೆ ಒಪ್ಪಿಗೆ ಪಡೆಯಲು ಶಾಸನಸಭೆಗೆ ತರಬೇಕೆಂಬ ವಾದವನ್ನೂ ಸಹ ಒಪ್ಪುತ್ತೇನೆ. ಆದರೆ ಏನೇನು ಅಧಿಕಾರ ಕೊಟ್ಟಿದ್ದಾರೆ, ಏನೇನು ಕಿತ್ತುಕೊಂಡಿದ್ದಾರೆ ಅದನ್ನು ಹೇಳಿರಿ. ಈ ಶಾಸನದ ತಿದ್ದುಪಡಿಯಲ್ಲಿ ಕಿತ್ತುಕೊಂಡಿರುವುದು ಎಷ್ಟು, ಕೊಟ್ಟಿರುವುದು ಎಷ್ಟು ಹೇಳಿರಿ.

ಶ್ರೀ ಕಾಗೋಡು ತಿಮ್ಮಪ್ಪ: ಈ ಶಾಸನ ಸಭೆಯಲ್ಲಿ ಪಾಸಾಗಿರುವ ಶಾಸನದ ಪ್ರಕಾರ ಎಷ್ಟು ಅಧಿಕಾರವನ್ನು ಕೊಟ್ಟಿದರೋ ಅದರ ನಾಲ್ಕರಷ್ಟನ್ನು ಈ ಮಸೂದೆಯಲ್ಲಿ ಕೊಟ್ಟಿದೆ. ಹಿಂದಿನ ಸಾರಿ ಒಂದು ರೂಪಾಯಿ ಕೊಟ್ಟಿದ್ದರೆ, ಈ ಶಾಸನದಲ್ಲಿ ಐದು ರೂಪಾಯಿ ಕೊಡುವಂತಹ ತೀರ್ಮಾನವನ್ನು ನಮ್ಮ ಸರ್ಕಾರ ಮಾಡಿದೆ. ಮುಂದೆ ಇನ್ನೂ ಜಾಸ್ತಿ ಮಾಡೋಣ, ಬೇಡ ಎಂದು ನಾನು ಹೇಳುವುದಿಲ್ಲ. ಇದಕ್ಕಿಂತ ಜಾಸ್ತಿ ಕೊಡುವುದಕ್ಕೆ ಆಗುವುದಿಲ್ಲ ಎಂದು ಎಲ್ಲೂ ಹೇಳಲಿಲ್ಲವಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ: ನಾನು ಸಂಬಳ ಸಾರಿಗೆಗಳ ಬಗ್ಗೆ ಹೋಗಲಿಲ್ಲ. ಹಿಂದಿನ ಶಾಸನದಲ್ಲಿ ಸಹ ಅವರಿಗೆ ಮಂತ್ರಿಗಳ ಸ್ಟೇಟಸ್ ಕೊಟ್ಟಿಲ್ಲ. ಈಗ ನೀವು ವಾದ ಮಾಡಿ ಹೆಚ್ಚು ಅಧಿಕಾರ ಕೊಟ್ಟಿದ್ದೇವೆ ಎಂದು ಹೇಳುತ್ತಿದ್ದೀರಲ್ಲ, ಅದನ್ನು ಹೇಳುವಾಗ ಸೆಕ್ಷನ್ಸ್ 160,174,182,271, ಎ ಟು ಜೆ ಇಷ್ಟನ್ನೂ ಒಟ್ಟಿಗೆ ಓದಿ ನೋಡಿರಿ. ಏನು ಅಧಿಕಾರ ಕೊಟ್ಟಿದ್ದಾರೆ ಎಂಬುದು ಗೊತ್ತಾಗುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ: ಸೆಕ್ಷನ್ 271ಕ್ಕೆ ಆಮೇಲೆ ಬರುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ: ಹೋಗಲಿ ಸೆಕ್ಷನ್ 174d ಕಕ್ಕಾದರೂ ಬನ್ನಿ

SRI KAGODU THIMAPPA: Rule 178 says as follows:

"Powers and dutics of the Adhyaksha; The Adhyaksha shall be the executive head of thc Zilla parishad, and shall perform all the duties imposed and exercise all the powcrs conferred on the Adhyakasha under this Act and the rules made thereunder".

SRI H. EAKANTHIAH: You have already conferred more powers under rule 174, which is already there on the Secretary.

ಶ್ರೀ ಕಾಗೋಡು ತಿಮ್ಮಪ್ಪ: ಮಾನ್ಯ ಅಧ್ಯಕ್ಷರೇ, ಈಗ ಪವರ್ಸ್ ಏನಿದೆ? ಇದನ್ನು ಬಿಟ್ಟರೆ ಬೇರೆ ಎಲ್ಲೂ ವಿವರವಾದ ವಿವರಣೆ ಇಲ್ಲ. ಈಗ ಏನು ಇದೆ ಅದನ್ನು ರೂಲ್ಸ್ ಮಾಡಿ ಈ ರೂಲ್ಸ್ ಪ್ರಕಾರ ಕೊಡಲಾಗಿದೆ. ಅದನ್ನು ಇಲ್ಲವೆಂದು ಹೇಳುವುದಕ್ಕಾಗುತ್ತದೆಯೇ? Tthere is no detaild description.

168ನೇ ಸೆಕ್ಷನ್ ಬಿಟ್ಟರೆ ಬೇರೆ ಯಾವ ಪವರ್ಸ್ ತೆಗೆದುಕೊಂಡಿದ್ದೇವೆ. Under rule 168 they mentaioned about the powers and functions of the secretary subject to the general powers of the Adhyaksha.

ಶ್ರೀ ಜೆ.ಸಿ. ಮಧುಸ್ವಾಮಿ: ಎಗ್ಸಿಕ್ಯೂಟೀವ್ ಹೆಡ್ ಅಂತ ಹೇಳಿ ರೂಲ್ಸ್ ಮಾಡಿ ಗೌರ್ನಮೆಂಟ್ ಸರ್ವೆಂಟ್ಸ್‌ಗೆ ಜಾಬ್ ಚಾರ್ಟ್ ಫಿಕ್ಸ್ ಮಾಡಿ ಕೊಟ್ಟ ಹಾಗೆ ಇವರಿಗೂ ಒಂದು ಜಾಬ್ ಚಾರ್ಟ್ ಫಿಕ್ಸ್ ಮಾಡಿದ್ದೀರಿ. Excutive head means rest of the things will follow.

ಇದ್ದ ಪವರ್ಸ್‌ನ್ನು ಕಿತ್ತುಕೊಂಡು 174ನೇ ಸೆಕ್ಷನ್‌ನಲ್ಲಿ ಅವರ ಅಧಿಕಾರ ಏನು ಎಂದು ಹೇಳಿದ್ದೀರಿ ಅದನ್ನು ಓದಿನೋಡಿ.

ಶ್ರೀ ಕಾಗೋಡು ತಿಮ್ಮಪ್ಪ: ಹಿಂದೆ ತಾಲ್ಲೂಕು ಪಂಚಾಯತ್ ಅಧ್ಯಕ್ಷರು ಇದ್ದರು. The provhisions of the original panchayat i.e., Taluka Board Act has been repeated. Same Sentances have come here. There is nothing new in it. Now, I come to general powers of the President. What are thegeneral powers or the president; No where it is described. It there are no rules how can you describe?.

SRI D.B. CHANGDRA GOWDA: In the absence of the rule the entire executive authority vests with the President. That is exactly the reading of the Act.

SRI KAGODU THIMAPPA: I am sorry. The senior most member of this house and the leader of the Opposition, who also discharged the duties of a member of the Parliament, were to interpret this clause like this. I do not know, what should, say. He had also functioned as a Speaker of this House. You can call somebody in different words. I shall read Section 108 :

"The Adhyakasha shall be the executive head of the Zill parishad, and shall perform all the duties imposed and excercise all the powers conferred on the Adhyaksha under this Act and the rules made there under".

What are the powers confered under this Act: Powers should be defined under the Act. This is a general sentence. It will not be clear unless powers are described and spelt out clearly. There should be specific provisions.

SRI D.B. CHANDRA GOWDA: It is an omni bus clause.

SRI KAGODU THIMMAPPA: This is a provision without power. As it is, what are the powers conferred on him?

ಶ್ರೀ ಡಿ.ಬಿ. ಚಂದ್ರೇಗೌಡ: ಅದಕ್ಕೆ ನಾನು ಹೇಳಿದ್ದು, ಮೊದಲು ಅಧ್ಯಕ್ಷರನ್ನು ಕುದುರೆ ಮೇಲೆ ಕೂರಿಸಿ 60 ಕಿಲೋಮೀಟರ್ ವೇಗದಲ್ಲಿ ಹೋಗಿ ಎಂದು ಹೇಳಿ ಈಗ ನೀವು ಆ ಕುದುರೆಯನ್ನು ಕಿತ್ತುಕೊಂಡು ಕತ್ತೆಮೇಲೆ ಕೂರಿಸಿ, ಮೆರವಣಿಗೆ ವ್ಯಕ್ತಿಯನ್ನಾಗಿ ಮಾಡುತ್ತಿದ್ದೀರಿ ಅಷ್ಟೆ;

ಶ್ರೀ ಕಾಗೋಡು ತಿಮ್ಮಪ್ಪ: ಜಿಲ್ಲಾ ಪರಿಷತ್ತು ಅಧ್ಯಕ್ಷರು ಎಂದು ನಾಮಕರಣ ಮಾಡಿದ್ದು ನೀವು ಹೋರಿ ಸಂತೆಗೆ ಹೋದರೆ ಅದು ಅಮೃತಮಹಲ್ ಕಾವಲ್‌ನಿಂದ ಬಂದಿರತಕ್ಕಂಥಾ ತಳಿ. ಅದಕ್ಕೆ ಕೋಡು, ಕೊಂಬು, ಕಾಲು, ಬಾಲ, ಎಲ್ಲಾ ಸರಿ ಇದೆ ಎಂದು ಮೊದಲು ಸಾಬೀತು ಮಾಡಿ. ಇಲ್ಲದಿದ್ದರೆ ಜನ ಚರ್ಚೆ ಮಾಡುವುದಕ್ಕೆ ಶುರು ಮಾಡುತ್ತಾರೆ.

ಇದು ಮೈಸೂರು ಅಮೃತ ಮಹಲ್‌ನ ಜಾನುವಾರು. ಇದು ಒಳ್ಳೆಯ ಹೋರಿ ಇದೆ, ನೋಡೋಣ ಖರೀದಿ ಮಾಡೋಣವೆಂದು ಹೋಗಿ ನೋಡಿದಾಗ ಅದರ ಕಾಲು, ಬಾಲ, ಕೋಡು ಮತ್ತು ಇದರ ತಲೆ ಮೇಲಿನ ಸುಳಿ ಹೀಗೇ ಯಾವುದೂ ಸರಿ ಇಲ್ಲದಿದ್ದರೆ ಅದನ್ನು ಜನ ಯಾರೂ ಮೂಸುವುದಕ್ಕೂ ಹೋಗುವುದಿಲ್ಲ. ಅದಕ್ಕೋಸ್ಕರನೇ ಇವತ್ತು ನಾವು ಅಧ್ಯಕ್ಷನಿಗೆ, ನೋಡಿ ನೀವು ಅಧ್ಯಕ್ಷರು, ನಾವು ಈ ಕೆಲವು ಕೆಲಸಗಳನ್ನು ಮಾಡಬಹುದೆಂದು ಹೇಳಿ ಕಾಲು ಬಾಲ ಸಾಬೀತಾಗಿ ಇಟ್ಟುಕೊಳ್ಳಿ ಎಂದು ಅವರಿಗೆ ಹೇಳುತ್ತಿದ್ದೇವೆ. ಇದು ಸರಿನಾ? ಏನೂ ಇಲ್ಲದೇ ಇರತಕ್ಕಂಥ ಅಧ್ಯಕ್ಷರ ಕೈಗೆ ಖಡ್ಗ ಕೊಟ್ಟು ದೊಣ್ಣೆ ಕೊಟ್ಟು

ಶ್ರೀ ಡಿ.ಬಿ. ಚಂದ್ರೇಗೌಡ: ನಿಮ್ಮ ಶ್ರಮ ನೋಡಿ ನನಗೆ ಬಹಳ ಅನುಕಂಪವಾಗುತ್ತಿದೆ. ಏಕೆಂದರೆ ಬರೆದುಕೊಳ್ಳುವುದಕ್ಕೆ ಹೊಸದಾಗಿ ಒಬ್ಬರು ಲೇಡಿ ಮಂತ್ರಿ ಬಂದಿದ್ದಾರೆ. ಆದರೆ ಅವರೂ ಬರೆದುಕೊಳ್ಳುತ್ತಿಲ್ಲ. (ಸಚಿವರುಗಳು ಇಲ್ಲದೆ ಇದ್ದಾಗ ಮಾನ್ಯ ಸದಸ್ಯರಾದ ಶ್ರೀಮತಿ ಮಲಾಜಮ್ಮನವರು ಸಚಿವರ ಸ್ಥಾನದಲ್ಲಿ ಕುಳಿತಿದ್ದಾಗ ಉದ್ದೇಶಿಸಿ ಹೇಳಿದ್ದು) ಈ ಲೇಡಿ ಮಂತ್ರಿ ಬಿಟ್ಟರೆ ಮುಂದಿನ ಸಾಲಿನಲ್ಲಿ ಯಾರೂ ಇಲ್ಲ.

ಶ್ರೀ ವಾಟಾಳ್ ನಾಗರಾಜ್: ನಾನು ಕಾಗೋಡು ತಿಮ್ಮಪ್ಪನವರ ಪರವಾಗಿ ನಿಲ್ಲಬೇಕಾಗಿದೆ. ಎಷ್ಟು ತೊಂದರೆ ಕೊಡುವುದು ಅವರಿಗೆ, ಅವರು ಹೇಳಲಿ ನಾವು ಕೇಳೋಣ ತಿಮ್ಮಪ್ಪನವರು ತಮ್ಮ ವಿಚಾರಧಾರೆಯನ್ನು ಹೇಳುತ್ತಿದಾರೆ. ನಾವು ಅದನ್ನು ಕೇಳೋಣ. ಅದನ್ನು ಬಿಟ್ಟು ಹೆಜ್ಜೆ ಹೆಜ್ಜೆಗೂ ತೊಂದರೆ ಕೊಟ್ಟರೆ ಅದು ಸರಿಯಲ್ಲ.

ಶ್ರೀ ಎನ್.ಜಿ. ನಾಯಕ್: ಇವತ್ತು ಏನೋ ನಮ್ಮ ಕಡೆ ತಿರುಗಿಬಿಟ್ಟಿದ್ದಾರೆ ವಾಟಾಳ್ ನಾಗರಾಜ್‌ರವರು. (ಈ ಸಂದರ್ಭದಲ್ಲಿ ಅನೇಕ ಮಾನ್ಯ ಸದಸ್ಯರುಗಳು ಒಂದೇ ಸಾರಿ ಮಾತನಾಡುತ್ತಿದ್ದರು)

ಶ್ರೀ ವಾಟಾಳ್ ನಾಗರಾಜ್: ಆಮೇಲೆ ಇದು ಕಾಗೋಡು ತಿಮ್ಮಪ್ಪನವರ ಮಾತಿನ ಧಾಟಿ ಅಲ್ಲವೆಂದು ನಮ್ಮ ಕಡೆ ಹೇಳುತ್ತಿದ್ದಾರೆ. ಇದು ನಿಮ್ಮ ಮಾತಿನ ಅಲ್ಲ. ಏಕೋ ಧಾಟಿ ತಪ್ಪುತ್ತಿದ್ದೀರೆಂದು ಹೇಳುತ್ತಿದ್ದಾರೆ ನಮ್ಮಲ್ಲಿ. ಪ್ರತಿಸಾರಿಯ ಧಾಟಿಯಲ್ಲಿ ನೀವು ಮಾತನಾಡುತ್ತಿಲ್ಲವೆಂದು ನಾನೂ ಸಹ ಹೇಳುತ್ತಿದ್ದೇನೆ.

ಶ್ರೀ ಎಲ್. ಆರ್. ಶಿವರಾಮೇಗೌಡ: ಕೋಳಿ ಕೇಳಿ ಮೆಣಸು ಅರಿಯಬೇಕಾಗಿಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ: ಈ ಗೌಡ್ರು ಇದ್ದಾರಲ್ಲಾ, ಇವರು ಮೆಣಸೂ ಇಲ್ಲದೆ ಕೋಳಿ ತಿನ್ನುವವರು.

ಶ್ರೀ ವಾಟಾಳ್ ನಾಗರಾಜ್: ಇಲ್ಲಿ ಕೋಳಿಯೂ ಇಲ್ಲ, ಮೆಣಸೂ ಇಲ್ಲ.

ಶ್ರೀ ಕಾಗೋಡು ತಿಮ್ಮಪ್ಪ: ಮಾನ್ಯ ಅಧ್ಯಕ್ಷರೇ, ನಾನು ರೂಲ್ 168ರ ಬಗ್ಗೆ ಪ್ರಸ್ತಾಪ ಮಾಡುತ್ತಿದ್ದೆ, ಅಧ್ಯಕ್ಷರ ಅಧಿಕಾರ ವ್ಯಾಪ್ತಿಯ ಬಗ್ಗೆ ಈಗ ನಾವು ತಿದ್ದುಪಡಿಯಲ್ಲಿ ಏನು ಮಾಡಿದ್ದೇವೆ ಅಂದರೆ ಇದರಲ್ಲಿ ಎಕ್ಸೆಪ್ಟ್ ಎಕ್ಸಿಕ್ಯೂಟಿವ್

ಹೆಡ್ ಎಂದ ಕೂಡಲೆ ಅವರಿಗೆ ಅಧಿಕಾರ ಬರುವುದಿಲ್ಲ, unless those powers spelt out in the Act itself.

ಈಗ ನಾವು ರೂಲ್ 168ರಲ್ಲಿ ಪವರ್ಸ್ ಅಂಡ್ ಡೆಪ್ಯೂಟೀಸ್ ಆಫ್ ಅಧ್ಯಕ್ಷ ಏನು ಎಂಬುದನ್ನು ತೋರಿಸಿದ್ದೇವೆ.

"The Adhyaksha shall

a) Convene, preside at, and conduct meetings of the Zilla panchyat Abhivruddi Samithik;

b) Have access to the records of Zilla panchyat Abhivruddhi Smathi;

c) Discharge all duties imposed and excercise all the powers conferred on him by or under this Act and perform such functions entrusted to him by or under this Act and perform such functions entrusted to him by the Government from time to time. etc.,

ಶ್ರೀ ಡಿ.ಬಿ. ಚಂದ್ರೇಗೌಡ: ನಾವು ಗಂಡಸ್ಸು ಎಂದು ಹೇಳಿದೆವು. ಗೊತ್ತಾಯಿತೇ? ಗಂಡಸ್ಸು ಎನ್ನುವುದಕ್ಕೆ ಏನು ಬಟ್ಟೆ ಹಾಕಬೇಕೋ ಅದನ್ನು ತೊಡಿಸಿ ನೋಡಿ. ನಾವು ಬೇಡ ಎನ್ನುವುದಿಲ್ಲ, ಆದರೆ ನೀವು ಅವರನ್ನು ಹೆಂಗ್ಸು ಮಾಡುವುದಕ್ಕೆ ಹೋಗುತ್ತಿರಲ್ಲಾ?

ಶ್ರೀ ವಾಟಾಳ್ ನಾಗರಾಜ್: ಇದು ಗಂಡೂ ಅಲ್ಲ ಹೆಂಗೂ ಅಲ್ಲ ಆ ತರಹ ಇದು.

ಶ್ರೀ ಕಾಗೋಡು ತಿಮ್ಮಪ್ಪ: ನಮ್ಮ ಚಂದ್ರೇಗೌಡರು ದಿಕ್ಕು ತಪ್ಪಿದ ತಬ್ಬಲಿ.

ಶ್ರೀ ವಾಟಾಳ್ ನಾಗರಾಜ್: ಚಂದ್ರೇಗೌಡರನ್ನು ದಾರಿ ತಪ್ಪಿಸುವುದಕ್ಕೆ ಅವರು ಬಹಳ ಪ್ರಯತ್ನ ಮಾಡುತ್ತಾರೆ. ಆದರೆ ಅವರು ದಾರಿ ತಪ್ಪುವುದಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ: ಏಕೆಂದರೆ, ಆ ತಬ್ಬಲಿಗೆ ನಮ್ಮ ರಾಜೀವ್ ಗಾಂಧಿಯವರೇ ರಕ್ಷಾಕವಚ.

ಆದ್ದರಿಂದ ಇವತ್ತು ನಾನು ಏನು ಹೇಳುತ್ತೇನೆ ಅಂದರೆ...

ಶ್ರೀ ವಾಟಾಳ್ ನಾಗರಾಜ್ : ಇದರಿಂದ ಒಂದು ವಿಷಯ ಹೊರ ಬಂತು; ಏನೆಂದರೆ ಮಾನ್ಯ ರಾಜೀವ್ ಗಾಂಧಿಯವರು ಇದನ್ನು ನಿಲ್ಲಿಸಬೇಕು ಎಂದು ಹೇಳಿದ್ದಾರೆ ಎಂದು ಅರ್ಥ ಆಯಿತು. ದರೂ ನಮ್ಮ ಮೇಲೆ ಗೊಬೆ ಕೂರಿಸುತ್ತಿದ್ದಾರೆ. ತಿರುಗಿ ತಿರುಗಿ ನಮ್ಮ ಮೇಲೆ ಗೂಬೆಯನ್ನು ಕೂರಿಸುತ್ತಿದ್ದಾರೆ. ಮಾನ್ಯ ಕಾಗೋಡು ತಿಮ್ಮಪ್ಪನವರಿಂದ ಈಗ ಇದೆಲ್ಲಾ ಪ್ರಚಾರ ಆಯಿತು. ನಾವು ಬೆಟ್ಟ ಅಗೆದಿದ್ದರೆ ಏನು ಸಿಗುತ್ತಿರಲಿಲ್ಲ, ಈಗ ನಮಗೆ ಸಿಕ್ಕಿತು. ಈಗ ನಿಮ್ಮ ಉತ್ತರದಿಂದ ದೊರಕಿತು. ಏನೆಂದರೆ ಸಧ್ಯ ಏನೋ ಒಂದು ಆಶೀರ್ವಾದ ಸೂಚನೆ ಅಲ್ಲಿಂದ ಬಂದಿದೆ ಎಂದು.

ಶ್ರೀ ಎಂ.ಪಿ. ವೆಂಕಟೇಶ್ : ಮಾನ್ಯ ಕಾಗೋಡು ತಿಮ್ಮಪ್ಪನವರು ಏನು ಹೇಳುತ್ತಿದ್ದಾರೆ ಎಂದರೆ ಮನವಿಯನ್ನು ಸಲ್ಲಿಸಿದ್ದೇವೆ, ಮನವಿ ಸಲ್ಲಿಸಿದ್ದೇವೆ, ನಮ್ಮ ಲೀಡರ್ ಒಪ್ಪಿಕೊಂಡಿದ್ದಾರೆ ಎಂದು. ಆಶೀರ್ವಾದ ಸಿಕ್ಕಿದೆ, ಮಾತು ಕೊಟ್ಟಿದ್ದಾರೆ. ಅದಕ್ಕೇ ನಿಧಾನ ಮಾಡುತ್ತಿದ್ದೇವೆಂದು ಹೇಳಿಕೊಳ್ಳುವುದಕ್ಕಾಗಿ ಅವರು ತಮ್ಮ ಭಾಷಣವನ್ನು

ನಿಧಾನ ಮಾಡುತ್ತಿದ್ದಾರೆ. ನೀವು ನಿಧಾನ ಮಾಡಿದರೆ ಸಂತೋಷ. ನಾವು ಅದನ್ನು ಸ್ವಾಗತ ಮಾಡುತ್ತೇವೆ. ಇದ್ದ ಸಂಗತಿಯನ್ನು ಹೇಳಿಬಿಡಿ. ಚರ್ಚೆ ಅನಗತ್ಯ. ಎರಡು ದಿವಸದಿಂದ ನಾವು ಸುಮ್ಮನೇ ಅನಗತ್ಯ ಚರ್ಚೆ ಮಾಡುತ್ತಿದ್ದೇವೆ.

ಶ್ರೀ ಕಾಗೋಡು ತಿಮ್ಮಪ್ಪ : ಈಗ ಅಧಿಕಾರವನ್ನು ಕೊಟ್ಟಿರತಕ್ಕಂಥಾದ್ದು ಏನು ಎಂದು ನೋಡಿದರೆ

"..(c) Discharge all duties imposed and exercise all the powers conferred on him by or under this Act and perform such functions entrusted to him by the Government from time to time;

(d) watch over the financial and executive administration of the Zilla Panchayat Abhivruddhi Samithi and place before the Zilla Panchayat Abhivruddhi Samithi all questions connected there with which shall appear to him to require its orders and ;

(e) Exercise such administrative supervision and co-ordination over the Chief Executive Officer for securing implementation or resolutions or decisions of the Zilla Panchayat Abhivruddhi Samithi or of the Standing Committee which are not inconsistent with the provisions of this Act or any general or specific direction issued by the Government or the Commissioner.

(f) have power to accord sanction upto rupees fifty thousand in a year for the purpose of providing immediate relief to those who are affected by flood, famine or fire in the District.

ಆದ್ದರಿಂದ ಈ ರೀತಿ ವಿವರವಾದಂತಹ ಅಧಿಕಾರವನ್ನು ಈ ಹಿಂದಿನ ಶಾಸನದಲ್ಲಿ ಕೊಟ್ಟಿರಲಿಲ್ಲ, ಕೇವಲ ನಿಯಮಾವಳಿಯಲ್ಲಿ ಮಾತ್ರ ಕೊಟ್ಟಿತ್ತು. ಈ ನಿಯಮಾವಳಿಯಲ್ಲಿ ಕೊಟ್ಟಂತಹ ಅಧಿಕಾರವನ್ನು ಇವತ್ತು ಶಾಸನದ ವ್ಯಾಪ್ತಿಯಲ್ಲಿ ತಂದು, ಇವತ್ತು ಈ ಶಾಸನಸಭೆಯ ಸಾರ್ವಭೌಮತ್ವದ ವ್ಯಾಪ್ತಿಗೆ ಈ ಶಾಸನವನ್ನು ಹೋಲಿಸಿದ್ದೇವೆ. ಯಾವುದೇ ಅಧಿಕಾರವನ್ನು ಕೊಡತಕ್ಕಂಥ ಅಥವಾ ಬಿಡತಕ್ಕಂಥ ಅಧಿಕಾರ ಶಾಸನಸಭೆಗೆ ಇದೆ ಎಂದು ಹೇಳಿದ ಮೇಲೆ, ಯಾವ ಶಾಸನಸಭೆ ಈ ಶಾಸನವನ್ನು ಸೃಷ್ಟಿ ಮಾಡಿದೆ, ಆ ಶಾಸನಸಭೆಯೇ ಅಲ್ಲಿನ ಅಧ್ಯಕ್ಷನಿಗೆ ಅಧಿಕಾರ ಕೊಡತಕ್ಕಂಥ ಅಥವಾ ಅಧಿಕಾರ ನೀಡತಕ್ಕಂಥ ಅಧಿಕಾರವನ್ನೂ ಉಳಿಸಿಕೊಂಡಿದೆ. ಒಂದು ವೇಳೆ ಹೆಚ್ಚಿನ ಅಧಿಕಾರ ಬೇಕು ಎಂದರೆ ಅದು ಮತ್ತೆ ಶಾಸನಸಭೆಗೆ ಬರಬೇಕು. ಒಂದು ವೇಳೆ ಅವರಿಗೆ ಕೊಟ್ಟಂತಹ ಅಧಿಕಾರ ಸಾಲದು ಎಂದು ಹೇಳಿದರೂ ಸಹ ಅದು ಮತ್ತೆ ಶಾಸನ ಸಭೆಗೆ ಬರಬೇಕು. ಇಷ್ಟೇ ವಿನಹ, ಸರ್ಕಾರದ ಮರ್ಜಿಗೆ ಯಾವುದೇ ಒಂದು ಅಧಿಕಾರವನ್ನು ಸೀಮಿತಗೊಳಿಸಲಾಗಿಲ್ಲ ಅಂದಮೇಲೆ ಹಿಂದೆ ಇದ್ದಂತಹ ಅಧಿಕಾರಕ್ಕಿಂತ ಇವತ್ತು ಜಾಸ್ತಿ ಅಧಿಕಾರ ಜಿಲ್ಲಾ ಪರಿಷತ್ ಅಧ್ಯಕ್ಷರಿಗೆ ಇದೆ. ಆದ್ದರಿಂದ ನಾವು ಇವತ್ತು ಅಧಿಕಾರವನ್ನು ಮೊಟಕು ಮಾಡಿದ್ದೇವೆ ಎಂದು ಹೇಳುವುದು ಸರಿಯಲ್ಲ, ಇದನ್ನು ಮಾನ್ಯ ವಿರೋಧ ಪಕ್ಷದ ನಾಯಕರು ಇನ್ನೊಂದು ಸಾರಿ ಪರೀಕ್ಷೆ ಮಾಡಿ ನೋಡಿದರೆ ಅವರ ವಾದಕ್ಕೆ ಏನೂ ಅರ್ಥ ಇಲ್ಲ ಎಂದು ಗೊತ್ತಾಗುತ್ತದೆ. ಈ ದೃಷ್ಟಿಯಿಂದ ನಾನು ಇದನ್ನು ಪ್ರಸ್ತಾಪ ಮಾಡಿದ್ದೇನೆ. ಇನ್ನೂ ಒಂದು ದೃಷ್ಟಿಯಿಂದ ಹೇಳುವುದಾದರೆ, ನಮ್ಮ ವಿರೋಧ ಪಕ್ಷದ ನಾಯಕರು ಈಗ

ನಾವು ಏನು ಸರ್ಕಾರದ ವತಿಯಿಂದ ತಿದ್ದುಪಡಿಯನ್ನು ಇವತ್ತು ತರುತ್ತಿದ್ದೇವೆ, ಈ ತಿದ್ದುಪಡಿಯ ಪ್ರಕಾರ ಒಂದೇ ಒಂದು ವಿಚಾರವನ್ನು ವಿಶೇಷವಾಗಿ 271ರ ಬಗ್ಗೆ ಹೇಳಿದ್ದಾರೆ. ಹಿಂದೆ ಈ ತಿದ್ದುಪಡಿ ಮಂಡನೆ ಮಾಡುವಂತಹ ಸಂದರ್ಭದಲ್ಲಿ ಪ್ರಸ್ತಾಪ ಮಾಡಿರತಕ್ಕ ಅನೇಕ ವಿಚಾರಗಳನ್ನು ಈಗ ವಾಪಸ್ ಪಡೆಯಲಾಗಿದೆ. ಈಗ ಅದನ್ನು ಪ್ರಸ್ತಾಪ್ ಮಾಡುವುದರಲ್ಲಿ ಅರ್ಥ ಇದೆ. ಈಗ ಒಂದೇ ಒಂದು ಉಳಿದಿರತಕ್ಕಂತಹ ವಿಚಾರ ಎಂದರೆ ಸರ್ಕಾರ ಕೆಲವು ಅಧಿಕಾರವನ್ನು ಇದರಲ್ಲಿ ಇಟ್ಟುಕೊಂಡಿದೆ. ಏತಕ್ಕೆ ಇಟ್ಟುಕೊಂಡಿದೆ ಅಂದರೆ:

Under rule 271 the Government may authorise an officer for inspecting the premises of the Taluke Abhivruddi Mandali. He can also inspect the concerned registers. Here, the rules applicable to Zilla Abhivruddi Mandali and Gramasabha shall be followed.

ಇದನ್ನು ಸೇರಿಸಿಕೊಂಡಿದ್ದಾರೆ. ಇದನ್ನು ಸೇರಿಸುವಂತಹ ಸನ್ನಿವೇಶ ಸಂದರ್ಭ ಯಾಕೆ ಬಂದಿದೆ? ಇದನ್ನು ನಾವೆಲ್ಲರೂ ವಿಚಾರ ಮಾಡಬೇಕು. ಏಕೆಂದರೆ ನಮಗೆ ಗೊತ್ತಿರುವ ರೀತಿಯಲ್ಲಿ ಗುಲ್ಬರ್ಗಾ ಜಿಲ್ಲಾ ಪರಿಷತ್‌ನಲ್ಲಿ ಏನು ನಡೆಯಿತು ಎಂಬುದು ತಮಗೆಲ್ಲಾ ಗೊತ್ತಿದೆ. ಇದೇ ಸಂದರ್ಭದಲ್ಲಿ ಇಲ್ಲಿ ಬಹಳ ಚರ್ಚೆ ನಡೆದಿದೆ. ಕೋಲಾರ ಜಿಲ್ಲಾ ಪರಿಷತ್‌ನಲ್ಲಿ ಏನು ನಡೆಯಿತು ಎಂಬುದೂ ಗೊತ್ತಿದೆ. ಇವತ್ತು ಧಾರವಾಡ ಜಿಲ್ಲಾ ಪರಿಷತ್‌ನಲ್ಲಿ ಏನು ನಡೆದಿದೆ ಎನ್ನುವುದು ಗೊತ್ತಿದೆ. ಈ ಸದನದಲ್ಲೂ ಆ ವಿಷಯ ಬಂದಿದೆ; ಹೊರಗಡೆ ಕೂಡ ಪ್ರಸ್ತಾಪ ಆಗಿದೆ. ತುಮಕೂರು ಜಿಲ್ಲಾ ಪರಿಷತ್‌ನಲ್ಲಿ, ಹಾಸನ ಜಿಲ್ಲಾ ಪರಿಷತ್‌ನಲ್ಲಿ ಇವತ್ತು ಏನು ನಡೆದಿದೆ ಎನ್ನುವುದೂ ಸಹ ಗೊತ್ತಿದೆ.

ಗ್ರಾಮ ಪಂಚಾಯತಿಯಲ್ಲಿ ತಪ್ಪು ಆಗಿರಬಹುದು. ತಾಲ್ಲೂಕು ಸಮಿತಿಯಲ್ಲಿ ತಪ್ಪು ಆಗಿರಬಹುದು, ಜಿಲ್ಲಾಪರಿಷತ್‌ನಲ್ಲಿ ತಪ್ಪು ಆಗಿರಬಹುದು, ಇವೊತ್ತು ಸರಕಾರಕ್ಕೆ ಆ ಸಂಸ್ಥೆಗಳಲ್ಲಿ ಏನಾದರೂ ತಪ್ಪುಗಳು ಆಗಿವೆ ಎಂಬ ಬಗ್ಗೆ ಆಪಾದನೆ ಬಂದರೆ, ಆ ರೀತಿಯಲ್ಲಿ ಏನಾದರೂ ವಿಚಾರಗಳು ಗೊತ್ತಾದರೆ, ಅದನ್ನು ಸರಕಾರದ ವತಿಯಿಂದ ಖುದ್ದಾಗಿ ಪರಿಶೀಲನೆ ಮಾಡತಕ್ಕಂಥ ಮತ್ತು ಆ ಬಗ್ಗೆ ಒಂದು ವರದಿಯನ್ನು ಪಡೆಯತಕ್ಕಂಥ ಒಂದು ವ್ಯವಸ್ಥೆ ಬೇಕೇ ಬೇಕು. ಅಂತಹ ಸಂದರ್ಭದಲ್ಲಿ ಸರಕಾರದ ವತಿಯಿಂದ ನೇರವಾಗಿ ಒಬ್ಬ ಕಮಿಶನರ್ ಅಲ್ಲಿಗೆ ಹೋಗುವುದಕ್ಕೆ ಆಗುವುದಿಲ್ಲ. ಅವರು ಹೋಗುವ ಸಂದರ್ಭದಲ್ಲಿ ಹೋಗುತ್ತಾರೆ, ಅವರೇ ಹೋದರೂ ಹೋಗಬಹುದು, ಅಥವಾ ಅವರು ಬೇರೆ ಅಧಿಕಾರಿಗಳನ್ನು ಕಳುಹಿಸಿದರೂ ಕಳುಹಿಸಿ ಕೊಡಬಹುದು. ಇಂತಹ ಒಂದು ಅಧಿಕಾರವನ್ನು ಸರಕಾರದವರು ಹೊಂದಿದ್ದಲ್ಲಿ, ಆಪಾದನೆಗಳು ಏನಾದರೂ ಬಂದಾಗ ಅಧಿಕಾರಿಗಳಿಗೆ ಸೂಚನೆ ನೀಡಿ ಅಲ್ಲಿನ ವರದಿಯನ್ನು ತರಿಸಿಕೊಳ್ಳಬಹುದು. ಅವರಿಗೆ ಕೊಟ್ಟಂಥ ಯಾವುದೇ ಅಧಿಕಾರವನ್ನು ಚಲಾಯಿಸತಕ್ಕಂಥ ವಿಚಾರವೇ ಇರಬಹುದು, ಖರೀದಿ ಮಾಡತಕ್ಕಂಥ ವಿಚಾರವೇ ಆಗಿರಬಹುದು ಅಥವಾ ಇನ್ನಿತರ ಯಾವುದೇ ವಿಚಾರವೇ ಆಗಿರಬಹುದು, ಇವೊತ್ತು ಗುಲ್ಬರ್ಗ, ಕೋಲಾರ ಜಿಲ್ಲಾಪರಿಷತ್‌ನ ಖರೀದಿ ವಿಚಾರದಲ್ಲಿ ಆಪಾದನೆಗಳು ಬಂದಿವೆ. ಧಾರವಾಡದ ಜಿಲ್ಲಾಪರಿಷತ್‌ನಲ್ಲಿ ಔಷಧಿ ಖರೀದಿ ವಿಚಾರದಲ್ಲಿ ನಡೆದ ಅವ್ಯವಹಾರದ ವಿಚಾರ ಹೊರಬಂದಿದೆ, ಹಾಸನ, ಶಿವಮೊಗ್ಗ ಜಿಲ್ಲಾಪರಿಷತ್‌ನವರು ಮಾಡಿದ ಖರೀದಿ ವಿಚಾರದಲ್ಲಿ ಆಪಾದನೆಗಳು ಬಂದಿವೆ. ಇಂಥ ಹಲವಾರು ಆಪಾದನೆಗಳು ಮಂಡಲ ಪಂಚಾಯತ್ ಮತ್ತು ಜಿಲ್ಲಾಪರಿಷತ್‌ನ ವಿಚಾರದಲ್ಲಿ ಬಂದಿವೆ. ಹೀಗೆ ಇವೊತ್ತು

ಸಾರೋದ್ಧಾರವಾಗಿ ರಾಜ್ಯವ್ಯಾಪ್ತಿ ಒಂದಲ್ಲ ಒಂದು ರೀತಿಯಲ್ಲಿ ಜಿಲ್ಲಾಪರಿಷತ್ ಮತ್ತು ಮಂಡಲ ಪಂಚಾಯತ್‌ಗಳ ವ್ಯವಹಾರದ ವಿಚಾರದಲ್ಲಿ ಆಪಾದನೆಗಳು ಬಂದಿವೆ. ಹೀಗೆ ಬಂದಂಥ ಆಪಾದನೆಗಳನ್ನು ತನಿಖೆ ಮಾಡುವುದಕ್ಕೆ ಸರಕಾರಕ್ಕೆ ಒಂದು ಅಧಿಕಾರ ಬೇಕೇ? ಬೇಡವೇ? ಎಂದು ನಾನು ಕೇಳಬಯಸುತ್ತೇನೆ. ಇವೊತ್ತು ಶಾಸನ ಸಭೆಯಲ್ಲಿ ಇಂಥ ಶಾಸನಗಳನ್ನು ಮಾಡಿ ಇಂಥ ಸಂಸ್ಥೆಗಳನ್ನು ಸೃಷ್ಟಿ ಮಾಡಿದ್ದೇವೆ. ಶಾಸನ ಸಭೆಯಲ್ಲಿ ಈ ಬಗ್ಗೆ ಪ್ರಸ್ತಾಪ ಮಾಡುವಾಗ ಅನೇಕ ಸಾರಿ ಮಂತ್ರಿಗಳು ತಮಗಿರತಕ್ಕಂಥ ಕಷ್ಟಗಳನ್ನು ಹೇಳಿಕೊಂಡಿದ್ದಾರೆ. ನಾವು ಗುಲ್ಬರ್ಗಾದ ವಿಚಾರದಲ್ಲಿ ಮಾನ್ಯ ಘೋರ್ಪಡೆಯವರ ವಿರುದ್ಧವಾಗಿ ಟೀಕೆ ಮಾಡತಕ್ಕಂಥ ಸನ್ನಿವೇಶವೂ ಬಂತು. ಅಂಥ ಸಂದರ್ಭದಲ್ಲಿ ಸರಕಾರವೇ ನೇರವಾಗಿ ಹೋಗಿ ಆಪಾದನೆಯ ತನಿಖೆಯನ್ನು ಮೊದಲು ಕಷ್ಟವಾಯಿತು. ಹೀಗೆ ಸರಕಾರಕ್ಕೆ ಆಪಾದನೆಗಳು ಬಂದಾಗ ನೇರವಾಗಿ ತನಿಖೆ ಮಾಡುವುದಕ್ಕೆ, ವರದಿಗಳನ್ನು ತರಿಸಿಕೊಳ್ಳುವುದಕ್ಕೆ ಒಂದು ಅಧಿಕಾರ ಬೇಕೆನ್ನುವ ದೃಷ್ಟಿಯಿಂದ ಈ ಒಂದು ತಿದ್ದುಪಡಿಯನ್ನು ತರುವಂಥ ಸನ್ನಿವೇಶ ಒದಗಿ ಬಂತು. ಇದರಿಂದ ತಪ್ಪು ಏನಿದೆ? ಎಂದು ಕೇಳುವುದಕ್ಕೆ ನಾನು ಇಚ್ಛೆಪಡುತ್ತೇನೆ. ಒಂದು ಮಂಡಲ ಪಂಚಾಯತಿಗೆ ತನಿಖೆಗಾಗಿ ಅಧಿಕಾರಿಯನ್ನು ಕಳುಹಿಸಿ ಬೇಕಾಗಿ ಬಂದಾಗ ಯಾವ ದರ್ಜೆಯ ಅಧಿಕಾರಿಯನ್ನು ಕಳುಹಿಸಬೇಕು ಎಂದು ಕೇಳುತ್ತೀರಿ. ಅಲ್ಲಿಗೆ ಚೀಫ್ ಸೆಕ್ರೆಟರಿಗಿಂತ ಕೆಳದರ್ಜೆ ಅಧಿಕಾರಿಯನ್ನು ಕಳುಹಿಸುವುದಕ್ಕೆ ಆಗುವುದಿಲ್ಲ. ಹಾಗೆ ಕಳುಹಿಸಲೂ ಕೂಡ ಬಾರದು. ಅವರಿಗಿಂತ ಮೇಲ್ದರ್ಜೆಯಲ್ಲಿ ಡಿವಿಜನಲ್ ಕಮಿಶನರ್ ಇರುತ್ತಾರೆ. ಅಥವಾ ನಮ್ಮ ಸರಕಾರಿ ಕಚೇರಿಯಲ್ಲಿರತಕ್ಕಂಥ ಆ ದರ್ಜೆಯ ಅಧಿಕಾರಿಗಳನ್ನು ಕಳುಹಿಸ ಬೇಕಾಗುತ್ತದೆ. ಆದ ಕಾರಣ ಅದಕ್ಕಾಗಿ ಸರಕಾರದವರು ಒಂದು ನಿಯಮವನ್ನು ಮಾಡಬೇಕಾಗುತ್ತದೆ. ಇಂಥ ಲೋಪದೋಷಗಳು ಈ ನಾಲ್ಕೈದು ವರ್ಷಗಳ ಅವಧಿಯಲ್ಲಿ ನಮ್ಮ ಅನುಭವಕ್ಕೆ ಬಂದಿವೆ. ಇಂಥ ಸಮಸ್ಯೆಗಳು, ಆಪಾದನೆಗಳು, ಲೋಪದೋಷಗಳು ಏನು ಬೆಳಕಿಗೆ ಬಂದಿವೆ, ಅವುಗಳನ್ನು ಪತ್ತೆ ಮಾಡಿ, ತನಿಖೆ ಮಾಡಿ, ದಾಖಲೆಗಳನ್ನು ಪರಿಶೀಲಿಸಿ ಮತ್ತೆ ಸರಕಾರಕ್ಕೆ ಆ ಕುರಿತು ವರದಿ ಮಾಡತಕ್ಕಂಥ ಒಂದು ಅಧಿಕಾರ ಇಲ್ಲದೇ ಹೋದರೆ ಸರಕಾರವು ಇಂಥ ಸಂಸ್ಥೆಗಳ ಮೇಲೆ ಯಾವುದೇ ನಿಯಂತ್ರಣವನ್ನು ಹೊಂದಿರುವುದು ಕಷ್ಟವಾಗುತ್ತದೆ. ಯಾವುದೇ ಶಾಸನಗಳು ಈ ಶಾಸನಸಭೆಯಿಂದ ರಚನೆ ಆಗುತ್ತವೆ. ಶಾಸನದ ಮುಖಾಂತರ ಯಾವ ಸಂಸ್ಥೆಗಳು ಅಸ್ತಿತ್ವಕ್ಕೆ ಬಂದಿವೆ, ಅವುಗಳ ಮೇಲೆ ಸರಕಾರ ಶಾಸನಸಭೆ ಮುಖಾಂತರ ಒಂದು ಹತೋಟಿಯನ್ನು ಇಲ್ಲಿ ಇಟ್ಟುಕೊಂಡಿದೆ. ಸರ್ಕಾರ ಹೀಗೆ ಕೆಲವು ಅಧಿಕಾರವನ್ನು ತನ್ನ ಹತೋಟಿಯಲ್ಲಿಟ್ಟುಕೊಳ್ಳಲು ಈ ಶಾಸನಸಭೆಯ ಮೂಲಕ ಪ್ರಯತ್ನ ಮಾಡಿದೆ. ಅದಕ್ಕಾಗಿ ಈ 271ಎಫ್‌ನಲ್ಲಿ ಇರತಕ್ಕಂಥ ತಿದ್ದುಪಡಿ ಏನಿದೆ, ಆದರಿಂದ ಏನು ತಪ್ಪಿದೆ ಎಂದು ಮಾನ್ಯ ಚಂದ್ರೇಗೌಡರನ್ನು ಕೇಳುತ್ತಿದ್ದೇನೆ. ಇದರಲ್ಲಿ ತಪ್ಪನ್ನು ಏಕೆ ಹುಡುಕುತ್ತಿದ್ದೀರಿ? ಇದರಿಂದ ಏನು ಅನಾಹುತವಾಗುತ್ತದೆ? ನಮ್ಮ ಈ ಶಾಸನಸಭೆಯ ಮುಂದೆ, ಈ ಜಿಲ್ಲಾಪರಿಷತ್ ಶಾಸನ ಸಭೆಯಲ್ಲಿ ಸದಸ್ಯರು ಪ್ರಸ್ತಾಪ ಮಾಡಿದಾಗ, ಆಗ ಸರಕಾರದವರು ಜವಾಬ್ದಾರಿಯಾದ ಸ್ಥಾನದಲ್ಲಿ ನಿಂತು ಅಲ್ಲಿಂದ ವರದಿಯನ್ನು ತರಿಸಿಕೊಳ್ಳತಕ್ಕಂಥ ಅಗತ್ಯ ಇಲ್ಲ ಎಂದು ತಾವುಗಳು ಹೇಳುತ್ತೀರಾ? ಯಾವ ಕಾರಣದಿಂದ ಈ ತಿದ್ದುಪಡಿಯು ಮಾರಕವಾಗಿದೆ ಎಂದು ಹೇಳುತ್ತೀರಿ? ಉಳಿದಂತೆ ಎಲ್ಲವೂ ಈ ತಿದ್ದುಪಡಿಯಲ್ಲಿ ಸೀಮಿತವಾಗಿದೆ. ಇದರ ಜೊತೆಗೆ ಇನ್ನೊಂದು ವಿಚಾರ ಅಂದರೆ ಜಿಲ್ಲಾಪರಿಷತ್ ಅಧ್ಯಕ್ಷರನ್ನು ತೆಗೆಯ ತಕ್ಕಂಥಾದ್ದು ಇವರನ್ನು ಬಹುಮತದ ಆಧಾರದ ಮೇಲೆ ತೆಗೆಯ ತಕ್ಕಂಥಾದ್ದು? ಅಂದರೆ ಮೂರನೇ ಎರಡು ಭಾಗದಷ್ಟು ಸದಸ್ಯರು ಸೇರಿ ತೆಗೆಯಬೇಕೆಂದಿರುವುದನ್ನು

ತಪ್ಪಿಸಿ ಸಾಮಾನ್ಯ ಬಹುಮತದಿಂದ ತೆಗೆಯಬೇಕೆಂದು ಈಗ ತಿದ್ದುಪಡಿಯನ್ನು ತಂದಿದ್ದಾರೆ. ಏಕೆಂದರೆ ಇವೊತ್ತು, ಕೋಲಾರ, ತುಮಕೂರು, ಗುಲ್ಬರ್ಗಾ ಜಿಲ್ಲಾಪರಿಷತ್‌ಗಳಲ್ಲಿ ಸಾಕಷ್ಟು ಬಹುಮತ ಇಲ್ಲ. ಹೀಗೆ ಬಹುಮತ ಇಲ್ಲದಿದ್ದಾಗ ಯಾವುದೇ ನಿರ್ಣಯಗಳನ್ನು ಮಾಡುವುದಕ್ಕೆ ಆಗುವುದಿಲ್ಲ.

ಹೀಗೆ ಜಿಲ್ಲಾಪರಿಷತ್ ನಿರ್ಣಯವಿಲ್ಲದೆ ಯಾವುದೇ ಕಾರ್ಯಭಾರವನ್ನೂ ನಿರ್ವಹಿಸುವುದಕ್ಕೆ ಆಗುವುದಿಲ್ಲ. ಅಲ್ಲಿನ ಅಧ್ಯಕ್ಷರನ್ನು ಸಾಮಾನ್ಯ ಬಹುಮತದಿಂದ ತೆಗೆಯಬೇಕೆಂದು ಏಕೆ ತಿದ್ದುಪಡಿ ಬಂದಿದೆ ಎಂದರೆ, ಮಾನ್ಯ ಚಂದ್ರೇಗೌಡರು ಹೇಳಿದಂತೆ, ಅವರ ಸರ್ಕಾರವಿದ್ದಾಗ ಎಲ್ಲ ಅಧಿಕಾರವನ್ನೂ ಅವರಿಗೆ ಕೊಡಲಾಗಿತ್ತೆಂದು ಅವರು ಹೇಳಿದರೂ ಕೂಡ ಜಿಲ್ಲಾಪರಿಷತ್ತಿನಲ್ಲಿ ಬಹುಮತದಿಂದ ನಿರ್ಣಯಗಳನ್ನು ಮಾಡದಿದ್ದರೆ ಯಾವು ಕೆಲಸವನ್ನೂ ಮಾಡುವುದಕ್ಕೆ ಆಗುವುದಿಲ್ಲ. ಒಂದುವೇಳೆ ಅವರಿಗೆ ಕೊಟ್ಟ ಪರಮಾಧಿಕಾರವನ್ನು ಉಪಯೋಗಿಸಿ ಯಾವುದೇ ಕೆಲಸ ಮಾಡಿದರೂ ಸಹ ಮುಂದೆ ಅದು ಜಿಲ್ಲಾಪರಿಷತ್ ಮುಂದೆ ರ್‍ಯಾಟಿಫೈ ಆಗಲೇಬೇಕು. ಆದರೆ ಈಗ ಕೆಲವು ಜಿಲ್ಲಾಪರಿಷತ್ತುಗಳ ಅಧ್ಯಕ್ಷರು ಬಹುಮತ ಕಳೆದುಕೊಂಡ ಕಾರಣಕ್ಕಾಗಿ ಅಲ್ಲಿ ನಿರ್ಣಯ ಮಾಡುವ ಹಾಗಿಲ್ಲ. ಇದರಿಂದ ಸರ್ಕಾರ ಕೊಟ್ಟಂಥ ಹಣ ಸರಿಯಾಗಿ ಖರ್ಚಾಗುತ್ತಿಲ್ಲ. ಹಣದ ದುರುಪಯೋಗವಾಗುತ್ತಿದೆ. ಇದು ಶಾಸನಸಭೆಯ ಹೊರಗೂ ಒಳಗೂ ಚರ್ಚೆಯಾಗಿರುವಾಗ ಇದಕ್ಕೊಂದು ಪರಿಹಾರ ಬೇಡವೇ? ಈಗಿನ ಅಧ್ಯಕ್ಷರುಗಳು ಪಕ್ಷದ ಆಧಾರದ ಮೇಲೆ ಚುನಾಯಿತರಾಗಿ ಬಂದಿದ್ದಾರೆ. ಆದರೆ ಈಗ ಅಧ್ಯಕ್ಷರೇ ಒಂದು ಪಕ್ಷದಲ್ಲಿದ್ದು ಸದಸ್ಯರು ಇನ್ನೊಂದು ಪಕ್ಷದಲ್ಲಿದ್ದರೆ, ಅಂತಹ ಅಧ್ಯಕ್ಷರಿಗೆ ಬಹುಮತ ಪಡೆಯಲಾಗುವುದಿಲ್ಲ. ಏಕೆಂದರೆ ನಿಮ್ಮ ಪಕ್ಷವೇ ಜನತಾದಳ ಎಸ್. ಎಂದು ಒಡೆಯಿತು, ಹಿಂದೆ ಜನತಾ ಪಕ್ಷ ಅಂತ ಇತ್ತು, ಆಮೇಲೆ ಜನತಾದಳ ಆಯಿತು. ಈಗ ಹಾಸನ ಜಿಲ್ಲಾಪರಿಷತ್‌ನಲ್ಲಿ ಅಧ್ಯಕ್ಷರಿಗೆ ಬಹುಮತ ಕಡಿಮೆಯಾಗಿದೆ. ಅಲ್ಲಿ ಮೊನ್ನೆ ಉಪಾಧ್ಯಕ್ಷರು ಚುನಾಯಿತರಾದರು. ನಮ್ಮವರು ಮತ್ತು ಜನತಾರವರು ಸೇರಿಕೊಂಡು ಅವರನ್ನು ಚುನಾಯಿಸಿದರು. ಒಟ್ಟಿನಲ್ಲಿ ಮೈಸೂರಿನಲ್ಲಿ, ಕೋಲಾರದಲ್ಲಿ, ತುಮಕೂರಿನಲ್ಲಿ, ಗುಲ್ಬರ್ಗಾ ಜಿಲ್ಲಾಪರಿಷತ್‌ಗಳ ಅಧ್ಯಕ್ಷರುಗಳಿಗೆ ಬಹುಮತ ಇಲ್ಲ. ಧಾರವಾಡದಲ್ಲೂ ಕೂಡ ಇಲ್ಲ, ಬೀದರ್ ರಾಯಚೂರುಗಳಲ್ಲೂ ಇಲ್ಲ. ಇದಕ್ಕೆ ಪರಿಹಾರ ಏನು? ಬಹುಮತ ಇಲ್ಲವೆಂದು ತಿಳಿದಾಗ ವಾಸ್ತವಿಕವಾಗಿ ಅವರು ರಾಜೀನಾಮೆ ಕೊಡಬೇಕು. ಆದರೆ ಅವರು ರಾಜೀನಾಮೆ ಕೊಡುವುದಿಲ್ಲ, ಅವರಿಗೆ ಬಹುಮತವೂ ಸಿಗುವುದಿಲ್ಲ, ಇದರಿಂದಾಗಿ ಅಲ್ಲಿ ಯಾವುದೇ ನಿರ್ಣಯಗಳೂ ಆಗುವುದಿಲ್ಲ, ಕೆಲಸಗಳೂ ಆಗುವುದಿಲ್ಲ, ಈ ಪರಿಸ್ಥಿತಿ ಇದ್ದರೆ ಪರಿಹಾರ ಏನು ಎಂದು ತಾವೇ ಹೇಳಬೇಕು. ಜಿಲ್ಲಾಪರಿಷತ್‌ಗಳ ಸದಸ್ಯರಾದವರಿಗೆ ವಿವೇಚನೆ ಇದೆ ಅದರಂತೆ ಇಂಥ ಅಧ್ಯಕ್ಷರಿಗೆ ನಮ್ಮ ಬೆಂಬಲ ಇಲ್ಲ ಎನ್ನುತ್ತಾರೆ, ಈಗ ಅವರು ಆತ ರಾಜೀನಾಮೆ ಕೊಡಬೇಕು. ಕೊಡದಿದ್ದರೆ ಅವರನ್ನು ಇಳಿಸುವುದಕ್ಕೆ ಅನುಕೂಲವಾಗಲಿ ಎಂದು ಈ ರೀತಿ ತಿದ್ದುಪಡಿ ತಂದಿದ್ದೇವೆ, ಇದರಲ್ಲಿ ಏನು ತಪ್ಪಿದೆ? ಮಂಡಲ ಪಂಚಾಯತಿಗಳಿಗಾಗಿ ಇದೇ ರೀತಿ ಏನಾದರೂ ತಿದ್ದುಪಡಿ ಮಾಡಿದರೆ ಹಳ್ಳಿಗಳಲ್ಲಿ ದುರಂತವಾಗಬಹುದು, ಅದಕ್ಕಾಗೇ ಪಂಚಾಯಿತಿಗಳ ಸ್ಟೆಬಿಲಿಟಿಗೆಂದು ರಾಜ್ಯಾಂಗದ 64ನೇ ತಿದ್ದುಪಡಿ ಏನಿತ್ತು ಅದನ್ನೇ ಇಲ್ಲಿ ಅಳವಡಿಸಲಾಗಿದೆ. ಎಷ್ಟೋ ಕಡೆ ಜಿಲ್ಲಾಪರಿಷತ್‌ಗಳಲ್ಲಿ ಅಧ್ಯಕ್ಷರಿಗೆ ಬಹುಮತ ಇಲ್ಲದಿದ್ದರೂ ಅವರು ಅಧಿಕಾರ ಬಿಡುತ್ತಿಲ್ಲ. ಮತ್ತು ಬೇರೆಯವರು ಕೆಲಸವನ್ನು ಮಾಡಲೂ ಅವಕಾಶ ಕೊಡುತ್ತಿಲ್ಲ, ಇದಕ್ಕಾಗಿ ಒಂದು ಪರಿಸಮಾಪ್ತಿ ಮಾಡಲೇಬೇಕೆಂದು ಈ ತಿದ್ದುಪಡಿ ತರಲಾಗಿದೆ. ಇಷ್ಟು ಬಿಟ್ಟರೆ ಇನ್ಯಾವ ದೃಷ್ಟಿಯಿಂದಲೂ ಜಿಲ್ಲಾಪರಿಷತ್‌ಗಳ ಅಧ್ಯಕ್ಷರ

ಅಧಿಕಾರವನ್ನು ಕಿತ್ತು ಕೊಳ್ಳುವುದಾಗಲೀ ಮೊಟಕುಮಾಡುವುದಾಗಲಿ ಈ ತಿದ್ದುಪಡಿಯಿಂದ ಆಗಿದೆ ಎಂದು ನಾನು ತಿಳಿದುಕೊಂಡಿಲ್ಲ, ಇನ್ನು....

(ಗೊಂದಲ)

ಶ್ರೀ ಎಸ್. ಹೆಚ್. ಕೌಜಲಗಿ : ಮಾನ್ಯ ಕಾಗೋಡು ತಿಮ್ಮಪ್ಪನವರು ಈಗ ಜಿಲ್ಲಾಪರಿಷತ್ ಅಧ್ಯಕ್ಷರ ವಿಷಯಕ್ಕೆ ಬಂದಿದ್ದಾರೆ, ನಮಗೂ ಮಾತನಾಡಲು ಸಮಯ ಸಿಗುತ್ತದೋ ಇಲ್ಲವೋ ಎಂಬುದನ್ನು ತಿಳಿದುಕೊಳ್ಳಬೇಕಾಗಿದೆ. ನಮ್ಮ ಟರ್ನ್ ಯಾವಾಗ ಬರುತ್ತದೆ?

ಶ್ರೀ ಕಾಗೋಡು ತಿಮ್ಮಪ್ಪ : ಆದುದರಿಂದ ಇವತ್ತು ವಿರೋಧ ಪಕ್ಷದವರು ವಿಶೇಷವಾಗಿ ಸರ್ಕಾರ ತಂದಿರತಕ್ಕಂಥ ಈ ತಿದ್ದುಪಡಿ ಮಸೂದೆಯ ಬಗ್ಗೆ ವಿಶೇಷವಾದ ಟೀಕೆಯನ್ನು ಬೆಂಗಳೂರಿನಿಂದ ದೆಹಲಿಯವರೆಗೆ ಮಾಡಿದ್ದಾರೆ. ಈ ರೀತಿ ಆಪಾದನೆಯನ್ನು ಅವರು ಏನು ಮಾಡಿದ್ದಾರೆ, ಅದು ಹುರುಳಿಲ್ಲದೇ ಇರತಕ್ಕಂಥ ಆಪಾದನೆ. ಇದನ್ನು ನಾನು ಪ್ರಬಲವಾಗಿ ನಿರಾಕರಣೆಯನ್ನು ಮಾಡುತ್ತಾ, ಈ ಒಂದು ತಿದ್ದುಪಡಿ ಮಸೂದೆಯನ್ನು ಒಪ್ಪಬೇಕು ಮತ್ತು ಅವರು ಕೂಡ ಇದಕ್ಕೆ ಬೆಂಬಲವನ್ನು ಕೊಡಬೇಕೆಂದು ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಏನಾದರೂ ಇದರಲ್ಲಿ ಇನ್ನೂ ಇಂಪ್ಲಿಮೆಂಟ್ ಮಾಡಬೇಕು. ಏನಾದರೂ ಸ್ವಲ್ಪ ಸುಧಾರಣೆಯನ್ನು ಮಾಡಬೇಕು ಎಂದು ಹೇಳಿದರೆ ಇದನ್ನೆಲ್ಲಾ ಮುಂದಿನ ಚರ್ಚೆಗೆ ಒಳಪಡಿಸಿಕೊಂಡು ಮಾಡುವುದಕ್ಕೆ ಸಾಧ್ಯವಿದೆ. ಒಟ್ಟಿನಲ್ಲಿ ಈ ಪಂಚಾಯಿತಿ ಸಂಸ್ಥೆಗಳನ್ನು ನಾವು ಬಲಪಡಿಸಬೇಕು, ಅವುಗಳನ್ನು ಬೆಳೆಸಬೇಕು ಮತ್ತು ಅವುಗಳನ್ನು ಸ್ವಯಂ ಪ್ರೇರಿತವಾದಂಥ ಸಂಸ್ಥೆಗಳಾಗಿ ಮಾಡಿ, ಅವು ತಮ್ಮ ಕಾಲಮೇಲೆ ನಿಂತುಕೊಳ್ಳುವಂತೆ ಮಾಡಬೇಕು. ಆ ಮೂಲಕ ಗ್ರಾಮಾಂತರ ಪ್ರದೇಶ ಅಭಿವೃದ್ಧಿಯನ್ನು ಸಾಧಿಸಬೇಕು ಎಂಬ ಅಪೇಕ್ಷೆ ಮತ್ತು ಕಳಕಳಿ ನಮಗೂ ಕೂಡ ಇದೆ. ಆ ದೃಷ್ಟಿಯಿಂದ ಈ ಸಂಸ್ಥೆಗಳನ್ನು ಬೆಳೆಸುವುದಕ್ಕೆ ನಾವು ಇನ್ನಷ್ಟು ಒಳ್ಳೆಯ ಗೊಬ್ಬರವನ್ನು ಹಾಕಿ, ಒಳ್ಳೆಯ ಕೃಷಿಯನ್ನು ಮಾಡಿ ಬೆಳೆಸಿ ಅವು ಚೆನ್ನಾಗಿ ಬೆಳೆಯುವಂಥ ಕೆಲಸವನ್ನು ಮಾಡಿದರೆ, ಅವು ಚೆನ್ನಾಗಿ ಬೆಳೆಯುತ್ತವೆ. ಒಂದೇ ಸಾರಿ ಹೆಚ್ಚು ಅಧಿಕಾರವನ್ನು ಕೊಡುವುದೂ ಅಪಾಯ. ಕೊಟ್ಟರೆ ಹೋಳಿಗೆಯನ್ನು ಜಾಸ್ತಿ ಮಾಡಿದರು ಎಂದು ಹೇಳಿ ಹೋಳಿಗೆ ಮತ್ತು ಹೂರಣವನ್ನು ಜಾಸ್ತಿ ತಿಂದರೆ ಏನಾಗುತ್ತದೋ ಅದು ಆಗಿಬಿಡುತ್ತದೆ. ಆದುದರಿಂದ ಬೆಳೆಯತಕ್ಕಂಥ ಇಂಥ ಸನ್ನಿವೇಶದಲ್ಲಿ ಸ್ವಲ್ಪ ಅಧಿಕಾರವನ್ನು ಕೊಟ್ಟು ಅದನ್ನು ನಡೆಸಿದರೆ ಒಳ್ಳೆಯದು. ಅವು ಚೆನ್ನಾಗಿ ವ್ಯವಸ್ಥಿತವಾಗಿ ನಡೆದಮೇಲೆ ಇನ್ನಷ್ಟು ಅಧಿಕಾರವನ್ನು ಕೊಡೋಣ. ಒಟ್ಟಿನಲ್ಲಿ ಪಂಚಾಯತ್ ರಾಜ್ ವ್ಯವಸ್ಥೆ ಬಹಳ ಮುಖ್ಯವಾದಂಥದ್ದು. ಇವತ್ತು ಸ್ಥಳೀಯವಾಗಿ ಗ್ರಾಮಾಂತರ ಪ್ರದೇಶದ ಅಭಿವೃದ್ಧಿಯ ದೃಷ್ಟಿಯಿಂದ ಇವುಗಳನ್ನು ಚೆನ್ನಾಗಿ ಬೆಳೆಸಬೇಕು, ಅಭಿವೃದ್ಧಿಪಡಿಸಬೇಕು, ಬಲಪಡಿಸಬೇಕು. ಅವುಗಳಿಗೆ ಒಂದು ಉತ್ತಮವಾದಂಥ ದೃಷ್ಟಿಕೋನವನ್ನು ಕೊಡುವುದು ಬಹಳ ಮುಖ್ಯವಾದುದು. ಅಲ್ಲಿನ ಅಧ್ಯಕ್ಷರಿಗೆ ಎಷ್ಟು ಅಧಿಕಾರ ಎನ್ನತಕ್ಕಂಥದ್ದು ಮುಖ್ಯವಲ್ಲ, ಅವು ಶಾಶ್ವತವಾಗಿ ತಮ್ಮ ಕಾಲ ಮೇಲೆ ತಾವು ನಿಂತು ಕೆಲಸ ಮಾಡತಕ್ಕಂಥ ವಾತಾವರಣವನ್ನು ಸೃಷ್ಟಿಮಾಡಬೇಕು. ಆ ದೃಷ್ಟಿಯಿಂದ ಪಂಚಾಯತ್ ಸಂಸ್ಥೆಗಳು ಬೆಳೆಯ ಬೇಕು. ನಮ್ಮ ರಾಜೀವ್ ಗಾಂಧಿಯವರು ಈ ದೃಷ್ಟಿಯಿಂದ ರಾಜ್ಯಾಂಗಕ್ಕೆ ತಂದಂಥ ತಿದ್ದುಪಡಿ ಕೂಡ ಸಹಾಯಕವಾಗಿದೆ. ಆದುದರಿಂದ ನನಗೂ ಕೂಡ ಪಂಚಾಯತ್ ರಾಜ್ ಸಂಸ್ಥೆಗಳ ಬಗ್ಗೆ ಅಷ್ಟೇ ಕಳಕಳಿ ಇದೆ. ಈ ದೃಷ್ಟಿಯಿಂದ ಈ ಒಂದು ಮಸೂದೆಯನ್ನು

ನಾನು ಬೆಂಬಲಿಸುತ್ತೇನೆ. ಮಾನ್ಯ ವಿರೋಧ ಪಕ್ಷದ ಎಲ್ಲಾ ಸದಸ್ಯರೂ ಕೂಡ ಇದಕ್ಕೆ ಬೆಂಬಲವನ್ನು ನೀಡಬೇಕು ಎಂದು ಕೇಳಿಕೊಳ್ಳುತ್ತೇನೆ. ವಿಶೇಷವಾಗಿ ಮಾನ್ಯ ವಾಟಾಳ್ ನಾಗರಾಜ್‌ರವರು ಇದಕ್ಕೆ ಬೆಂಬಲವನ್ನು ನೀಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಈ ಮಸೂದೆಯನ್ನು ಹಿಂತೆಗೆದುಕೊಳ್ಳಬೇಕು ಎಂದು ಸರ್ಕಾರಕ್ಕೆ ಹೇಳಿಬಿಡಿ.

ಶ್ರೀ ಕಾಗೋಡು ತಿಮ್ಮಪ್ಪ : ಅವರ ಕಡೆ ನೀವು ತಾಳ ಹಾಕಬೇಡಿ. ಮಾನ್ಯ ಚಂದ್ರೇಗೌಡರ ಜೊತೆಗೆ ಸೇರಿ ತಾಳ ಹಾಕುವುದಕ್ಕೆ ಹೋಗಬೇಡಿ. ನೀವು ಸುಮ್ಮನೆ ಇದಕ್ಕೆ ಬೆಂಬಲವನ್ನು ಕೊಡಿ.

ಶ್ರೀ ವಾಟಾಳ್ ನಾಗರಾಜ್ : ಇವರ ಪರವೇನಾದರೂ ತಾಳ ಹಾಕುವುದಕ್ಕೆ ಹೋದರೆ ತಂಬೂರಿಯನ್ನು ಹಿಡಿದುಕೊಳ್ಳಬೇಕಾಗುತ್ತದೆ ನಾವು. ಇವರ ಪರ ತಾಳವನ್ನು ಹಾಕಿದರೆ ಕೊನೆಗೆ ಉಳಿಯುವುದೇ ಅದೇ.

ಉಪಾಧ್ಯಕ್ಷರು : ತಾಳ ಹಾಕುವುದಕ್ಕೆ ತಂಬೂರಿ ಇರಲೇಬೇಕು.

(ಗೊಂದಲ)

ಶ್ರೀ ಪಿ. ಬಸವರಾಜ್ : ವಾಟಾಳ್ ನಾಗರಾಜ್‌ರಿಗೆ ತಾಳ ತಂಬೂರಿ ಎರಡೂ ಇದ್ದರೆ ಚೆನ್ನಾಗಿರುತ್ತದೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಜೊತೆಗೆ ನರ್ತನ ಇದ್ದರೆ ಇನ್ನೂ ಚೆನ್ನಾಗಿರುತ್ತದೆ.

4.45 ಪಿ.ಎಂ

ಮಂತ್ರಿಗಳ ಹೇಳಿಕೆ

ಶ್ರೀ ಎಂ. ವೀರಪ್ಪ ಮೊಯಿಲಿ : ಮಾನ್ಯ ಅಧ್ಯಕ್ಷರೇ, ಈ ದಿನ ಬೆಳಿಗ್ಗೆ ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ಡಿ.ಬಿ. ಚಂದ್ರೇಗೌಡರು, ಮಾನ್ಯ ವಾಟಾಳ್ ನಾಗರಾಜ್, ಮಾನ್ಯ ಯಡಿಯೂರಪ್ಪನವರು, ಮಾನ್ಯ ಬೈರೇಗೌಡರು, ಮಾನ್ಯ ದೇಶಪಾಂಡೆಯವರು, ಮಾನ್ಯ ಏಕಾಂತಯ್ಯನವರು, ಮಾನ್ಯ ಸಿಂಧ್ಯಾರವರು ವಿಧಾನಸಭಾ ಅಧ್ಯಕ್ಷರಿಗೆ ಪಿ.ಯು.ಸಿ. ಪರೀಕ್ಷೆಯ ಉತ್ತರ ಪತ್ರಿಕೆಗಳನ್ನು ಒಪ್ಪಿಸುತ್ತಾ, ಈ ಪತ್ರಿಕೆಗಳು ಬೀದಿ ಪಾಲಾಗಿದ್ದವು ಎಂಬ ವಿಷಯವನ್ನು ಪ್ರಸ್ತಾಪಿಸಿರುವ ಬಗ್ಗೆ ನನ್ನ ಹೇಳಿಕೆ ಈ ರೀತಿ ಇದೆ;

ಇದರ ಬಗ್ಗೆ ಪದವಿ ಪೂರ್ವ ಶಿಕ್ಷಣ ಕಛೇರಿಗೆ ಭೇಟಿಯನ್ನು ನೀಡಿ ಕೂಲಂಕಷವಾಗಿ ಪರಿಶೀಲನೆಯನ್ನು ನಡೆಸಲಾಯಿತು. ಹಾಗೂ ಈ ಕೆಳಕಂಡ ವಿಷಯವನ್ನು ಸಭೆಯ ಮುಂದಿಡಲು ಬಯಸುತ್ತೇನೆ.

ಮೇಲ್ಕಂಡ ಉತ್ತರ ಪತ್ರಿಕೆಗಳು ನವೆಂಬರ್ ತಿಂಗಳಲ್ಲಿ ನಡೆದ ಸಪ್ಲಿಮೆಂಟರಿ ಪರೀಕ್ಷೆಯ ಇಂಗ್ಲೀಷ್ ವಿಷಯಕ್ಕೆ ಸಂಬಂಧಪಟ್ಟಿರುತ್ತದೆ. ನವೆಂಬರ್ ತಿಂಗಳಲ್ಲಿ ನಡೆದ ಪರೀಕ್ಷೆಯ ಪ್ರಶ್ನೆಪತ್ರಿಕೆಗಳ ಪರಿಶೀಲನೆಯಿಂದ ಈ ವಿಷಯ ತಿಳಿದು ಬಂದಿದೆ. ಇಂಗ್ಲೀಷ್ ಪ್ರಶ್ನೆಪತ್ರಿಕೆಗಳು ಬಯಲಾದುದರಿಂದ ಡಿಸೆಂಬರ್ 20 ರಂದು ಪುನಃ ಮರು ಪರೀಕ್ಷೆಯನ್ನು ನಡೆಸಲಾಗಿದೆ. ಮರು ಪರೀಕ್ಷೆಯನ್ನು ನಡೆಸಲು ಬೇಕಾಗಿದ್ದ ಅಂಕಪಟ್ಟಿಗಳನ್ನು ಮುದ್ರಿಸಲು ಕಛೇರಿಯ ಗಣಕ ಯಂತ್ರವು ಕೆಟ್ಟು ಹೋಗಿದ್ದುದರಿಂದ ಮತ್ತು ಅತೀ ಶೀಘ್ರದಲ್ಲಿ ಅಷ್ಟು ಅಂಕಪಟ್ಟಿಯನ್ನು ಮುದ್ರಿಸಲು ಕಾಲಾವಕಾಶ ಇಲ್ಲದೆ ಇದ್ದುದರಿಂದ